ಬುಧವಾರ, ಆಗಸ್ಟ್ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 214 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಈಗ ವಾಹನ ವಿಮೆಗೂ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಬಳಕೆಯಾಗುತ್ತಿದೆ.



ಅನುಭವ ಮಂಟಪ
ಪಶ್ಚಿಮಘಟ್ಟ ಉಳಿಯಲಿ; ರಾಜಕೀಯ ಅಳಿಯಲಿ

664 ವಿದ್ಯಾರ್ಥಿಗಳ ರ್‍ಯಾಂಕ್ ಹಿಂಪಡೆದ ಕೆಇಎ 6
ಚೀನಾ ಲೆಕ್ಕಿಸದೇ ತೈವಾನ್ ತಲುಪಿದ ಪೆಲೋಸಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,136 ▲	17,345 ▲	₹53,350 (ಬೆಂಗಳೂರು) ▲	₹59,500 (ಬೆಂಗಳೂರು) ▼	78.53 ▲

ಭಟ್ಕಳದಲ್ಲಿ 55 ಸೆಂ.ಮೀ ದಾಖಲೆ ಮಳೆ: ಮನೆ, ರಸ್ತೆಗಳು ಜಲಾವೃತ

ಮಳೆ ಆರ್ಭಟ: 9 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸೋಮವಾರ ರಾತ್ರಿ ಮತ್ತು ಮಂಗಳವಾರ ಧಾರಾಕಾರ ಮಳೆಯಾಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಇಬ್ಬರು ಮಹಿಳೆಯರು ಸೇರಿ 9 ಮಂದಿ ಮೃತಪಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ದಾಖಲೆಯ 55 ಸೆಂ.ಮೀ. ಮಳೆಯಾಗಿ ನಗರದ ಹಲವು ಪ್ರದೇಶಗಳು ಜಲಾವೃತಗೊಂಡಿವೆ.

ಉತ್ತರ ಕನ್ನಡದಲ್ಲಿ ಗುಡ್ಡ ಕುಸಿದು ನಾಲ್ವರು, ಹುಣಸೂರು ತಾಲ್ಲೂಕಿನಲ್ಲಿ ಗೋಡೆ ಕುಸಿದು ಮಹಿಳೆ ಮೃತಪಟ್ಟಿದ್ದ-ರೆ, ವಿಜಯನಗರ ಜಿಲ್ಲೆಯಲ್ಲಿ ರೈತ ಸೇರಿ ಇಬ್ಬರು ಹಾಗೂ ತುಮಕೂರಿನಲ್ಲಿ ಶಿಕ್ಷಕ, ಕಾರ್ಮಿಕ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಕೊಡಗಿನಲ್ಲಿ ಪಯಸ್ವಿನಿ, ಮಂಡ್ಯದ ಶಿಂಷಾ ನದಿ ಉಕ್ಕಿ ಹರಿದಿವೆ. ವಿವಿಧ ಜಿಲ್ಲೆಗಳಲ್ಲಿ ತಗ್ಗು ಪ್ರದೇಶಗಳ ಮನೆಗಳು ಜಲಾವೃತಗೊಂಡಿದ್ದು, ಜಮೀನುಗಳಿಗೆ ನೀರು ನುಗ್ಗಿದೆ. ಹಲವರು ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದಾರೆ. ಕೆಲವೆಡೆ ಹೆದ್ದಾರಿ ಸಂಪರ್ಕ ಕಡಿತಗೊಂಡಿದೆ.

ಮಂಡ್ಯ ತಾಲ್ಲೂಕಿನ ಹೊಸ ಬೂದನೂರು ಕೆರೆ ಮಧ್ಯರಾತ್ರಿ ಒಡೆದು ಅಪಾರ ನೀರು ಹರಿದು, ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ ಸಂಪೂರ್ಣವಾಗಿ ಬಂದ್ ಆಗಿದೆ. ಕೆರೆಯ ಹಿಂಭಾಗದಲ್ಲಿದ್ದ ಮೀನುಗಾರಿಕೆ ಇಲಾಖೆಯ ಮೀನು ಸಾಕಣೆ ಘಟಕವೂ ಮುಳುಗಿದ್ದು, ಲಕ್ಷಾಂತರ ಮೀನು ಮರಿಗಳು ಕೊಚ್ಚಿ ಹೋಗಿವೆ.



ಭಾರಿ ಮಳೆಯಿಂದ ಪ್ರವಾಹ ಉಂಟಾದ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ಪಕ್ಷಿನೋಟ

ಬಳ್ಳಾರಿ ತಾಲ್ಲೂಕಿನ ಯಾಳ್ಪಿ ಕಗ್ಗಲ್ ಬಳಿ ಹಗರಿ ನದಿಯಲ್ಲಿ ಪ್ರವಾಹದಲ್ಲಿ ಸಿಲುಕಿಕೊಂಡಿದ್ದ 24 ಜನರನ್ನು ಜಿಲ್ಲಾಡಳಿತ ಮತ್ತು ಅಗ್ನಿಶಾಮಕ ದಳದ ತಂಡಗಳು ವಿಶೇಷ ಕಾರ್ಯಾಚರಣೆ ನಡೆಸಿ ರಕ್ಷಣೆ ಮಾಡಿವೆ.

ದಾಖಲೆಯ ಮಳೆ: ಭಟ್ಕಳದಲ್ಲಿ ದಾಖಲೆಯ ಮಳೆಯಾಗಿದೆ. ರಾತ್ರಿ ಕಳೆದು ಬೆಳಗಾಗುವವಷ್ಟರಲ್ಲಿ ನಗರದ ಹಲವು ಪ್ರದೇಶಗಳು ಜಲಾವೃತಗೊಂಡಿದ್ದವು. ಬೇಂಗ್ರೆಯಿಂದ ಬೆಳಕೆವರೆಗೆ ಸುಮಾರು 15 ಕಿ.ಮೀ ವ್ಯಾಪ್ತಿಯ ಭೂಪ್ರದೇಶ ನದಿಯಂತಾಯಿತು.

ಭಟ್ಕಳ ತಾಲ್ಲೂಕಿನ ಮುಟ್ಟಳ್ಳಿಯಲ್ಲಿ ಮಂಗಳವಾರ ಬೆಳಿಗ್ಗೆ ಮನೆಯ ಮೇಲೆ ಗುಡ್ಡ ಕುಸಿದು, ಒಂದೇ ಕುಟುಂಬದ ಮೂವರು ಸೇರಿದಂತೆ ನಾಲ್ವರು ಸ್ಥಳದಲ್ಲೇ ಮೃತಪಟ್ಟರು. ಮೃತರನ್ನು ಲಕ್ಷ್ಮಿ ನಾರಾಯಣ ನಾಯ್ಕ (60), ಅವರ ಪುತ್ರಿ ಲಕ್ಷ್ಮಿ ನಾಯ್ಕ (45), ಪುತ್ರ ಅನಂತ ನಾರಾಯಣ ನಾಯ್ಕ (35) ಹಾಗೂ ತಂಗಿ ಮಗ ಪ್ರವೀಣ ಬಾಲಕೃಷ್ಣ ನಾಯ್ಕ (20) ಎಂದು ಗುರುತಿಸಲಾಗಿದೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಚನ್ನನಕುಂಟೆ ಬಳಿ ಹಳ್ಳ ದಾಟುತ್ತಿದ್ದ ಶಿಕ್ಷಕ ಅರೀಫ್ ಉಲ್ಲಾಖಾನ್ (55) ಹಾಗೂ ಕುಣಿಗಲ್ ತಾಲ್ಲೂಕಿನ ಗೋವಿಂದಯ್ಯನಪಾಳ್ಯ ಬಳಿ ಕೂಲಿ ಕಾರ್ಮಿಕ ನಾಗರಾಜು (28) ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಹುಣಸೂರು ತಾಲ್ಲೂಕಿನ ಕೆಂಚನಕೆರೆ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಶಾಂತಮ್ಮ (68) ಮೃತಪಟ್ಟರು.

ಹೊಸಪೇಟೆ ತಾಲ್ಲೂಕಿನ ಜಿ.ನಾ-ಗಲಾಪುರದಲ್ಲಿ ಹಳ್ಳ ದಾಟಿಕೊಂಡು ಹೋಗುವಾಗ ರೈತ ಉಂಚಟ್ಟಿ ಬೊಮ್ಮಪ್ಪ (62) ಕೊಚ್ಚಿಕೊಂಡು ಹೋಗಿದ್ದಾರೆ. ಸಂಡೂರು ತಾಲ್ಲೂಕಿನ ಬೊಮ್ಮಾಘಟ್ಟದ ನಿವಾಸಿ ಕೃಷ್ಣಕುಮಾರ್ (51) ಅವರು ಬೈಕ್‌ನಲ್ಲಿ ಅಂಕಮನಾಳ ಗ್ರಾಮದ ಸಮೀಪದ ಹಳ್ಳ ದಾಟಿಕೊಂಡು ಹೋಗುವಾಗ ಪ್ರವಾಹಕ್ಕೆ ಕೊಚ್ಚಿಕೊಂಡು ಹೋಗಿದ್ದಾರೆ.

ಇನ್ನಷ್ಟು ಸುದ್ದಿಗಳು 6

ಮಳೆಹಾನಿ: ತ್ವರಿತ ರಕ್ಷಣೆ, ಪರಿಹಾರಕ್ಕೆ ಸೂಚನೆ

ಬೆಂಗಳೂರು: ಅತಿವೃಷ್ಟಿ ಮತ್ತು ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕುವ ಜನರ ತ್ವರಿತ ರಕ್ಷಣೆ, ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಬೇಕು. ಶೀಘ್ರವಾಗಿ ಪರಿಹಾರ ನೀಡಿ ನೆರವಾಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು.

ಮಳೆಹಾನಿ ಕುರಿತು 11 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ಮಂಗಳವಾರ ವಿಡಿಯೊ ಸಂವಾದ ನಡೆಸಿದ ಅವರು, ‘ಪರಿಹಾರ ವಿತರಣೆಗೆ ವಿಳಂಬ ಮಾಡಬಾರದು. ಸರ್ಕಾರ ಜನರ ಕಷ್ಟಗಳಿಗೆ ಸ್ಪಂದಿಸುತ್ತಿದೆ ಎಂಬ ಸಂದೇಶ ರವಾನಿಸುವಂತೆ ಕೆಲಸ ಮಾಡಬೇಕು’ ಎಂದರು.

7ನೇ ಪುಟ ನೋಡಿ

ಲಾನ್‌ಬಾಲ್ಸ್: ಭಾರತ ಮಹಿಳೆಯರ ಚಾರಿತ್ರಿಕ ಸಾಧನೆ

ಕಾಮನ್‌ವೆಲ್ತ್ ಕ್ರೀಡಾಕೂಟ-2022



ಲಾನ್ ಬಾಲ್ಸ್ ಚಿನ್ನ ಗೆದ್ದ ಭಾರತ ತಂಡ; ಲವ್ಲಿ ಚೌಧರಿ, ಪಿಂಕಿ, ನಯನ್ಮಣಿ ಸೈಕಿಯಾ, ರೂಪಾ ರಾಣಿ–ಪಿಟಿಐ ಚಿತ್ರ

ಬರ್ಮಿಂಗ್‌ಹ್ಯಾಮ್: ಭಾರತದ ಮಹಿಳಾ ತಂಡವು ಇದೇ ಮೊದಲ ಬಾರಿಗೆ ಕಾಮನ್‌ವೆಲ್ತ್ ಕ್ರೀಡಾಕೂಟದ ಲಾನ್ ಬಾಲ್ಸ್‌ನಲ್ಲಿ ಚಿನ್ನದ ಪದಕ ಜಯಿಸಿ ಚಾರಿತ್ರಿಕ ಸಾಧನೆ ಮಾಡಿತು. ಟೇಬಲ್ ಟೆನಿಸ್ ಕ್ರೀಡೆಯ ತಂಡ ವಿಭಾಗದಲ್ಲಿ ಭಾರತ ಪುರುಷರ ಬಳಗವೂ ಬಂಗಾರದ ಪದಕ ಜಯಿಸಿತು. ಮಂಗಳವಾರ ಭಾರತಕ್ಕೆ ಒಟ್ಟು ನಾಲ್ಕು ಪದಕಗಳು ಒಲಿದವು.

ಫೈನಲ್: ಭಾರತ-17, ದ.ಆಫ್ರಿಕಾ-10

ಪುರುಷರ ಟಿಟಿ ತಂಡದ ಸಾಧನೆ



ಚಿನ್ನ
ಪುರುಷರ ಟಿಟಿ ಫೈನಲ್
ಭಾರತ; 3
ಸಿಂಗಪುರ; 1



ಬೆಳ್ಳಿ
ವಿಕಾಸ್ ಠಾಕೂರ್
ಪುರುಷರ ವೇಟ್‌ಲಿಫ್ಟಿಂಗ್: 96 ಕೆ.ಜಿ.
ಎತ್ತಿದ ತೂಕ: ಒಟ್ಟು 346 ಕೆ.ಜಿ.



ಕಂಚು
ಹರ್ಜಿಂದರ್ ಕೌರ್
ಮಹಿಳೆಯರ ವೇಟ್‌ಲಿಫ್ಟಿಂಗ್: 71 ಕೆ.ಜಿ
ಎತ್ತಿದ ತೂಕ: ಒಟ್ಟು 212 ಕೆ.ಜಿ.

ಫಾಝಿಲ್ ಹತ್ಯೆ: ಮತ್ತೆ ಆರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್‌ನಲ್ಲಿ ಇತ್ತೀಚೆಗೆ ನಡೆದ ಮಹಮ್ಮದ್ ಫಾಝಿಲ್ (23) ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಆರು ಆರೋಪಿಗಳನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

‘ಆರೋಪಿಗಳಿಗೂ ಫಾಝಿಲ್‌ಗೂ ಪೂರ್ವದ್ವೇಷ ಇರಲಿಲ್ಲ. ನಿರ್ದಿಷ್ಟ ಸಮುದಾಯದ ವ್ಯಕ್ತಿಯನ್ನೇ ಗುರಿಯಾಗಿಸಿಕೊಂಡು ಈ ಹತ್ಯೆ ನಡೆಸಲಾಗಿದೆ’ ಎಂದು ಮಂಗಳೂರು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಜಪೆ ಕೊಂಚಾರು ನಿವಾಸಿ ಸುಹಾಸ್ ಶೆಟ್ಟಿ (29), ಕುಳಾಯಿ ಕಾವಿನಕಲ್ಲು ನಿವಾಸಿ ಮೋಹನ್ ಅಲಿಯಾಸ್ ಮೋಹನ್ ಸಿಂಗ್ (26), ಕುಳಾಯಿ ವಿದ್ಯಾನಗರ ನಿವಾಸಿ ಗಿರಿಧರ (23), ಕಾಟಿಪಳ್ಳದ ಅಭಿಷೇಕ್ (21), ಶ್ರೀನಿವಾಸ (23) ಮತ್ತು ದೀಕ್ಷಿತ್ (21) ಬಂಧಿತರು.

ಕೃತ್ಯಕ್ಕೆ ಬಳಸಿದ್ದ ಕಾರು ಮಾಲೀಕ ಅಜಿತ್ ಕ್ರಾಸ್ತನನ್ನು ಆಗಲೇ ಬಂಧಿಸಲಾಗಿದೆ. ಒಟ್ಟು ಏಳು ಮಂದಿಯ ಬಂಧನವಾಗಿದೆ.

7ನೇ ಪುಟ ನೋಡಿ
ನಿರ್ಬಂಧ 2 ದಿನ ವಿಸ್ತರಣೆ 7

ಪ್ರವೀಣ್ ಹತ್ಯೆ: ಮತ್ತಿಬ್ಬರ ಬಂಧನ

ಮಂಗಳೂರು: ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಣಿ ಸದಸ್ಯ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣ ಸಂಬಂಧ ಪೊಲೀಸರು ಮತ್ತೆ ಇಬ್ಬರನ್ನು ಮಂಗಳವಾರ ಬಂಧಿಸಿದ್ದಾರೆ. ಬೆಳ್ಳಾರೆ ಪಳ್ಳಿಮಜಲು ನಿವಾಸಿಗಳಾದ ಸದ್ದಾಂ (32) ಹಾಗೂ ಹ್ಯಾರಿಸ್ (42) ಬಂಧಿತರು. 6

‘ಪರಿಹಾರ ವಿತರಣೆ ತಾರತಮ್ಯ ಸಲ್ಲ’

ರಾಯಚೂರು: ‘ಪರಿಹಾರ ನೀಡುವಲ್ಲಿ ತಾರತಮ್ಯ ಮಾಡಬಾರದು. ಪ್ರಾಣ ಕಳೆದುಕೊಂಡವರೆಲ್ಲ ಸಮಾನರು. ಎಲ್ಲರಿಗೂ ಸರ್ಕಾರ ಪರಿಹಾರ ನೀಡಬೇಕು’ ಎಂದು ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಮಂಗಳವಾರ ಹೇಳಿದರು.



ಮಂಗಳೂರಿನಲ್ಲಿ ಹತ್ಯೆಯಾದ ಹಿಂದೂ ಮತ್ತು ಮುಸ್ಲಿಂ ಯುವಕರಿಬ್ಬರ ಕುಟುಂಬಕ್ಕೆ ಪರಿಹಾರ ನೀಡುವ ವಿಷಯದಲ್ಲಿ ಸರ್ಕಾರ ತಾರತಮ್ಯ ಮಾಡುತ್ತಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಹತ್ಯೆಯಾದ ವ್ಯಕ್ತಿಯ ಕುಟುಂಬಕ್ಕೆ ಹಣ ನೀಡುವುದು ಸಾವಿಗೆ ಪರ್ಯಾಯವಲ್ಲ. ಜೀವ ಮತ್ತು ಹಣ ಎರಡನ್ನೂ ಹೋಲಿಕೆ ಮಾಡಲಾಗದು’ ಎಂದರು.

‘ಇಂಥ ಅನಾಹುತ ನಡೆಯದಂತೆ ರಕ್ಷಣೆ ನೀಡುವುದು ಸರ್ಕಾರದ ಮೊದಲ ಕರ್ತವ್ಯ ಆಗಬೇಕು’ ಎಂದು ಹೇಳಿದರು.

ಅಲ್ ಕೈದಾ ಮುಖ್ಯಸ್ಥ ಹತ್ಯೆ

ವಾಷಿಂಗ್ಟನ್/ಕಾಬೂಲ್ (ಪಿಟಿಐ): ಅಮೆರಿಕದ ಮೇಲಿನ 9/11 ದಾಳಿಯ ಪ್ರಮುಖ ಸಂಚುಕೋರ, ಅಲ್ ಕೈದಾ ಉಗ್ರಗಾಮಿ ಸಂಘಟನೆಯ ಮುಖ್ಯಸ್ಥ ಅಯ್ಮನ್ ಅಲ್ ಜವಾಹಿರಿಯನ್ನು ಭಾನುವಾರ ಬೆಳಿಗ್ಗೆ ಹತ್ಯೆ ಮಾಡಲಾಗಿದೆ ಎಂದು ಅಮೆರಿಕ ಸೋಮವಾರ ಘೋಷಿಸಿದೆ. ಕಾಬೂಲ್‌ನಲ್ಲಿದ್ದ ಈತನನ್ನು ಅಮೆರಿಕವು ಡ್ರೋನ್ ದಾಳಿಯ ಮೂಲಕ ಕೊಂದಿದೆ.



ಜವಾಹಿರಿ

ಅಲ್ ಕೈದಾ ಮುಖ್ಯಸ್ಥನಾಗಿದ್ದ ಒಸಾಮಾ ಬಿನ್ ಲಾಡೆನ್‌ನನ್ನು 2011ರಲ್ಲಿ ಅಮೆರಿಕ ಹತ್ಯೆ ಮಾಡಿತ್ತು. ಆ ಬಳಿಕ, ಅಲ್ ಕೈದಾಕ್ಕೆ ಜವಾಹಿರಿ ಹತ್ಯೆಯು ಅತಿ ದೊಡ್ಡ ಹೊಡೆತವಾಗಿದೆ.

ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎಯ ಕಾರ್ಯಾಚರಣೆಯಲ್ಲಿ ಜವಾಹಿರಿ ಹತನಾಗಿದ್ದಾನೆ.

ಜವಾಹಿರಿಗೆ 71 ವರ್ಷ ವಯಸ್ಸಾಗಿತ್ತು. ವೃತ್ತಿಯಲ್ಲಿ ವೈದ್ಯನಾಗಿದ್ದ ಈತ, ಅಮೆರಿಕದ ತನಿಖಾ ಸಂಸ್ಥೆ ಎಫ್‌ಬಿಐ ಹುಡುಕುತ್ತಿದ್ದ ಉಗ್ರರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ. ಈತನ ಹತ್ಯೆ ಮಾಡಿದವರಿಗೆ 2.5 ಕೋಟಿ ಡಾಲರ್ (ಸುಮಾರು ₹200 ಕೋಟಿ) ಬಹುಮಾನ ಘೋಷಿಸಲಾಗಿತ್ತು.

ಭಾರತ ಉಪಖಂಡವನ್ನು ಕೇಂದ್ರೀಕರಿಸಿ ಈತ 2014ರ ಸೆಪ್ಟೆಂಬರ್‌ನಲ್ಲಿ ಪ್ರತ್ಯೇಕ ಘಟಕವೊಂದನ್ನು ಸ್ಥಾಪಿಸಿದ್ದ. ಭಾರತ ಉಪಖಂಡದಲ್ಲಿ ಇಸ್ಲಾಂ ಆಳ್ವಿಕೆ ಸ್ಥಾಪಿಸುವುದು ಇದರ ಗುರಿ ಎಂದು ಜವಾಹಿರಿ ಹೇಳಿದ್ದ.

ಜವಾಹಿರಿಯದ್ದು ಎಂದು ಹೇಳಲಾದ ವಿಡಿಯೊವೊಂದನ್ನು ಏಪ್ರಿಲ್ ನಲ್ಲಿ ಬಿಡುಗಡೆ ಮಾಡಲಾಗಿತ್ತು. ಫೆಬ್ರುವರಿಯಲ್ಲಿ ಹಿಜಾಬ್ ನಿಷೇಧದ ವಿರುದ್ಧ ಹೋರಾಡಿದ್ದ ವಿದ್ಯಾರ್ಥಿನಿಯನ್ನು ವಿಡಿಯೊದಲ್ಲಿ ಹೊಗಳಲಾಗಿತ್ತು. ಆದರೆ, ವಿದ್ಯಾರ್ಥಿನಿಯ ಕುಟುಂಬವು ಇದು ತಪ್ಪು ಎಂದು ಹೇಳಿತ್ತು ಮತ್ತು ಅದರಿಂದ ಅಂತರ ಕಾಯ್ದುಕೊಂಡಿತ್ತು.

ಹಲವು ವರ್ಷಗಳಿಂದ ಜವಾಹಿರಿ ತಲೆಮರೆಸಿಕೊಂಡಿದ್ದ. ಇತ್ತೀಚೆಗಷ್ಟೇ ಕಾಬೂಲ್‌ಗೆ ಬಂದಿದ್ದ. ಈತನ ಇರುವಿಕೆ ಪತ್ತೆ ಮಾಡಲು ಅಮೆರಿಕ ನಿರಂತರವಾಗಿ ಶ್ರಮಿಸುತ್ತಲೇ ಇತ್ತು.

ಇನ್ನೊಂದು ಸುದ್ದಿ 5

ನಿಂಜಾ ಬಾಂಬ್ ‘ಹೆಲ್‌ಫೈರ್ ಆರ್‌9ಎಕ್ಸ್’

ಜವಾಹಿರಿಯನ್ನು ಕೊಲ್ಲಲು ಅಮೆರಿಕವು ತನ್ನ ಖ್ಯಾತ ‘ನಿಂಜಾ ಬಾಂಬ್’ ಅನ್ನು ಬಳಸಿದೆ. ನಿಂಜಾ ಬಾಂಬ್ ಎಂಬುದು ಅದರ ಜನಪ್ರಿಯ ಹೆಸರಾದರೂ, ಅದರ ನಿಜವಾದ ಹೆಸರು ‘ಹೆಲ್‌ಫೈರ್ ಆರ್‌9ಎಕ್ಸ್’. ವಾಸ್ತವದಲ್ಲಿ ಇದು ಬಾಂಬ್ ಅಲ್ಲ, ಬದಲಿಗೆ ಒಂದು ಕ್ಷಿಪಣಿ.

ಹೆಲ್‌ಫೈರ್ ಆರ್‌9ಎಕ್ಸ್ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದಿದ್ದು, ಗುರಿ ನಿರ್ದೇಶಿತ ಕ್ಷಿಪಣಿಯಾಗಿದೆ. ಅಂದರೆ ಒಮ್ಮೆ ಗುರಿಯನ್ನು ನಿಗದಿ ಮಾಡಿ, ಉಡಾಯಿಸಿದರೆ ಸಾಕು. ಅದು ಗುರಿಯನ್ನು ಕರಾರುವಾಕ್ಕಾಗಿ ತಲುಪುತ್ತದೆ.

ಈ ಕ್ಷಿಪಣಿಯು ಅಣ್ವಸ್ತ್ರ ಸಿಡಿತಲೆ, ಬಾಂಬ್ ಸಿಡಿತಲೆಯನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಆದರೆ, ಸಿಡಿತಲೆ ಇಲ್ಲದ ಅವತರಣಿಕೆಯನ್ನು ಇಂತಹ ಕಾರ್ಯಾಚರಣೆಗಳಲ್ಲಿ ಬಳಸಲಾಗುತ್ತದೆ. ಗುರಿಗೆ ಮಾತ್ರ ಹಾನಿಯಾಗಬೇಕು, ಇತರರಿಗೆ ಹಾನಿಯಾಗಬಾರದು ಎಂಬುದು ಇದರ ಉದ್ದೇಶ. ರಹಸ್ಯ ಕಾರ್ಯಾ-ಚರಣೆಗಳಲ್ಲಿ ಉಗ್ರರನ್ನು ಕೊಲ್ಲಲು ಅಮೆರಿಕವು ಈ ಕ್ಷಿಪಣಿಯನ್ನು ಬಳಸುತ್ತಿದೆ. ಈ ಕ್ಷಿಪಣಿಯನ್ನು ಉಡಾಯಿಸಿದಾಗ ಅದು, ಗುರಿಯನ್ನು ಛೇದಿಸುತ್ತದೆ. ಆದರೆ, ಸ್ಫೋಟಗೊಳ್ಳುವುದಿಲ್ಲ. ಹೀಗಾಗಿ ಸುತ್ತಮುತ್ತಲಿನವರಿಗೆ ಮತ್ತು ಸ್ವತ್ತುಗಳಿಗೆ ಹಾನಿಯಾಗುವುದಿಲ್ಲ.

ಐದು ವರ್ಷಗಳಲ್ಲಿ ₹ 9.91 ಲಕ್ಷ ಕೋಟಿ ಸಾಲ ರೈಟ್‌ಆಫ್

ನವದೆಹಲಿ (ಪಿಟಿಐ): ಕಳೆದ ಐದು ಹಣಕಾಸು ವರ್ಷಗಳಲ್ಲಿ ಬ್ಯಾಂಕ್‌ಗಳು ಒಟ್ಟು ₹ 9.91 ಲಕ್ಷ ಕೋಟಿ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಿವೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಮಂಗಳವಾರ ಹೇಳಿದೆ.

2021–22ನೆಯ ಆರ್ಥಿಕ ವರ್ಷದಲ್ಲಿ ರೈಟ್‌ಆಫ್ (ವಸೂಲಿ ಪ್ರಕ್ರಿಯೆಯನ್ನು ಬಹುತೇಕ ಸ್ಥಗಿತಗೊಳಿಸಿರುವ) ಮೊತ್ತವು ₹ 1.57 ಲಕ್ಷ ಕೋಟಿಗೆ ಇಳಿಕೆಯಾಗಿದೆ. ಇದು ಹಿಂದಿನ (2020–21) ಆರ್ಥಿಕ ವರ್ಷದಲ್ಲಿ ₹ 2.02 ಲಕ್ಷ ಕೋಟಿ ಆಗಿತ್ತು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕೆ.ಕರಾಡ್ ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳು ಹಾಗೂ ದೇಶದ ಇತರ ಎಲ್ಲ ಹಣಕಾಸು ಸಂಸ್ಥೆಗಳು ಒಟ್ಟು ₹ 5 ಕೋಟಿಗಿಂತ ಹೆಚ್ಚಿನ ಮೊತ್ತವನ್ನು ಸಾಲವಾಗಿ ಪಡೆದಿರುವ ಎಲ್ಲ ಸಾಲಗಾರರ ವಿವರವನ್ನು ಆರ್‌ಬಿಐಗೆ ನೀಡುತ್ತವೆ ಎಂದು ಸಚಿವರು ತಿಳಿಸಿದ್ದಾರೆ.

2018–19ರ ನಂತರದ ಮಾಹಿತಿ ಪ್ರಕಾರ ಉದ್ದೇಶಪೂರ್ವಕ ಸುಸ್ತಿದಾರರ ಸಂಖ್ಯೆಯು ದೇಶದಲ್ಲಿ 10,306 ಎಂದು ಅವರು ಹೇಳಿದ್ದಾರೆ.

ತಲೆಮರೆಸಿಕೊಂಡಿರುವ ಉದ್ಯಮಿ ಮೆಹುಲ್ ಚೋಕ್ಸಿ ಅವರ ಗೀತಾಂಜಲಿ ಜೆಮ್ಸ್ ಕಂಪನಿಯು ಬ್ಯಾಂಕ್‌ಗಳಿಗೆ ಒಟ್ಟು ₹ 7,110 ಕೋಟಿ ಪಾವತಿಸಬೇಕಿದೆ. ಎರಾ ಇನ್‌ಫ್ರಾ ಎಂಜಿನಿಯರಿಂಗ್ ಕಂಪನಿಯು ₹ 5,879 ಕೋಟಿ ಕೊಡಬೇಕಿದೆ.

ಉದ್ದೇಶಪೂರ್ವಕ ಸುಸ್ತಿದಾರರು

ಕಾನ್‌ಕಾಸ್ಟ್ ಸ್ಟೀಲ್ ಆ್ಯಂಡ್ ಪವರ್ (₹ 4,107 ಕೋಟಿ ಬಾಕಿ), ಆರ್‌ಇಐ ಆಗ್ರೊ (₹ 3,984 ಕೋಟಿ ಬಾಕಿ), ಎಬಿಜಿ ಶಿಪ್‌ಯಾರ್ಡ್ (₹ 3,708 ಕೋಟಿ), ಫ್ರಾಸ್ಟ್ ಇಂಟರ್‌ನ್ಯಾಷನಲ್ ಲಿ (₹ 3,108 ಕೋಟಿ), ವಿನ್‌ಸಮ್ ಡೈಮಂಡ್ಸ್ ಆ್ಯಂಡ್ ಜುವೆಲ್ಲರಿ (₹ 2,671 ಕೋಟಿ), ರೊಟೊಮ್ಯಾಕ್ ಗ್ಲೋಬಲ್ ಪ್ರೈ.ಲಿ. (₹ 2,481 ಕೋಟಿ), ಕೋಸ್ಟಲ್ ಪ್ರಾಜೆಕ್ಟ್ಸ್ ಲಿ. (₹ 2,311 ಕೋಟಿ), ಕುಡೋಸ್ ಕೆಮಿ (₹ 2,082 ಕೋಟಿ)

ವರ್ಷ	ರೈಟ್‌ಆಫ್ ಮೊತ್ತ (₹ ಲಕ್ಷ ಕೋಟಿಗಳಲ್ಲಿ)
2019-20	2.34
2018-19	2.36
2017-18	1.61

ಚಿನಕುರಳಿ
ಪ್ರಕಾಶ್ ಶೆಟ್ಟಿ



ದಾವಣಗೆರೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ರಾಹುಲ್ ಸೇರಿ ಹಲವು ಪ್ರಮುಖರು

ಸಿದ್ದರಾಮಯ್ಯ ಜನ್ಮದಿನಕ್ಕೆ ‘ದೇವನಗರಿ’ ಸಜ್ಜು

ಪ್ರಜಾವಾಣಿ ವಾರ್ತೆ

ದಾವಣಗೆರೆ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಅಂಗವಾಗಿ ಬುಧವಾರ ಇಲ್ಲಿ ನಡೆಯಲಿರುವ ‘ಅಮೃತ ಮಹೋತ್ಸವ’ಕ್ಕೆ ‘ದೇವನಗರಿ’ ಸಿಂಗಾರಗೊಂಡಿದೆ.

ವೇದಿಕೆ ಕಾರ್ಯಕ್ರಮ ನಡೆಯಲಿರುವ ನಗರದ ಹೊರವಲಯದ ಕುಂದವಾಡ ಬಳಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಶಾಮನೂರು ಪ್ಯಾಲೆಸ್ ಮೈದಾನ ಸಜ್ಜುಗೊಂಡಿದೆ.

ಸಿದ್ದರಾಮಯ್ಯ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರ ಬೃಹತ್ ಕಟೌಟ್‌ಗಳು, ಬ್ಯಾನರ್‌ಗಳು ಕಾರ್ಯಕ್ರಮ ನಡೆಯಲಿರುವ ವೇದಿಕೆ ಎದುರು ಸ್ವಾಗತ ಕೋರುತ್ತಿವೆ. ವಿವಿಧೆಡೆಯಿಂದ ಬರುವ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳಿಗೆ ಬುಧವಾರ ಬೆಳಿಗ್ಗೆ ತಿಂಡಿ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆಗಾಗಿ ಮಂಗಳವಾರ ಮಧ್ಯಾಹ್ನವೇ ಅಡುಗೆ ಸಿದ್ಧತೆ ಆರಂಭವಾಗಿದೆ. ಪಲಾವ್, ಮೊಸರನ್ನ, ಸಿಹಿ ತಿಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ. 200 ಕೌಂಟರ್‌ಗಳಲ್ಲಿ ಊಟ ಬಡಿಸಲು ಸ್ವಯಂಸೇವಕರ ದಂಡು ಸನ್ನದ್ಧವಾಗಿದೆ.



ಸಿದ್ದರಾಮಯ್ಯ ಅವರ ಜನ್ಮದಿನೋತ್ಸವದ ಅಂಗವಾಗಿ ದಾವಣಗೆರೆಯ ಹೊರವಲಯದಲ್ಲಿ ಹಾಕಿರುವ ಬೃಹತ್ ಕಟೌಟ್ –ಪ್ರಜಾವಾಣಿ ಚಿತ್ರ

ಬೃಹತ್ ವೇದಿಕೆ: ಅಂದಾಜು 300 ಗಣ್ಯರು ಆಸೀನರಾಗುವಂತೆ ಬೃಹತ್ ವೇದಿಕೆ ನಿರ್ಮಾಣ ಆಗಿದೆಯಾದರೂ, ರಾಹುಲ್ ಗಾಂಧಿ ಅವರು ಭಾಗವಹಿಸುವುದರಿಂದ 50 ಜನ ಮುಖಂಡರಿಗೆ ಅವಕಾಶ ನೀಡಲಾಗುವುದು ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದ್ದಾರೆ.

ವೇದಿಕೆಯ ಪಕ್ಕದಲ್ಲಿಯೇ ಗಣ್ಯರಿಗಾಗಿ ವಿಶ್ರಾಂತಿ ಕೊಠಡಿ, ಉಪಾಹಾರ ವ್ಯವಸ್ಥೆ ಮಾಡಲಾಗಿದೆ. ವೇದಿಕೆಯ ಎದುರು 4 ಲಕ್ಷ ಕುರ್ಚಿಗಳನ್ನು ಹಾಕಲಾಗಿದೆ. 2,000ಕ್ಕೂ ಅಧಿಕ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗುತ್ತಿದೆ.

ಗಣ್ಯರ ವಾಹನಗಳು ವೇದಿಕೆ ಬಳಿ ನೇರವಾಗಿ ತೆರಳಲು ಅವಕಾಶವಿದ್ದು, ಇತರರ ವಾಹನಗಳಿಗಾಗಿ ಒಂದು ಕಿ.ಮೀ. ದೂರದಲ್ಲೇ, ಹೆದ್ದಾರಿಯ ಎರಡೂ ಬದಿಗಳಲ್ಲಿ ಇರುವ ಖಾಲಿ ಜಮೀನುಗಳಲ್ಲಿ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ಸಂಗೀತ ನಿರ್ದೇಶಕ ಹಂಸಲೇಖ ತಂಡದಿಂದ ಬೆಳಿಗ್ಗೆ 10ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ಮಧ್ಯಾಹ್ನ 12ಕ್ಕೆ ‘ಅಮೃತ ಮಹೋತ್ಸವ’ ಕಾರ್ಯಕ್ರಮ ಶುರುವಾಗಲಿದ್ದು, ರಾಹುಲ್ ಗಾಂಧಿ, ಸಿದ್ದರಾಮಯ್ಯ ಸಹಿತ ಕೆಲವೇ ಕೆಲವು ಗಣ್ಯರು ಮಾತನಾಡಲಿದ್ದು, ಮಧ್ಯಾಹ್ನ 3ಕ್ಕೆ ಕಾರ್ಯಕ್ರಮ ಮುಕ್ತಾಯಗೊಳಿಸಲು ಯೋಜಿಸಲಾಗಿದೆ.

ಮಂಗಳವಾರ ನಸುಕಿನಲ್ಲಿ ಮಳೆ ಸುರಿದಿದ್ದು, ಬೆಳಿಗ್ಗೆ ಬಿಡುವು ನೀಡಿದೆಯಾದರೂ ಸಂಘಟಕರಲ್ಲಿ ಆತಂಕ ಮೂಡಿಸಿದೆ. ಆದಷ್ಟು ಬೇಗ ಬಂದು ಕುರ್ಚಿಗಳಲ್ಲಿ ಆಸೀನರಾಗುವಂತೆಯೂ ಅವರು ಅಭಿಮಾನಿಗಳಲ್ಲಿ ಮನವಿ ಮಾಡಿದ್ದಾರೆ.



ಹೊರಮಾವು ಬಳಿ ತಗ್ಗು ಪ್ರದೇಶದಲ್ಲಿರುವ ಸಾಯಿ ಬಡಾವಣೆಯ ಮನೆಗೆ ನೀರು ನುಗ್ಗಿದ್ದನ್ನು ನಿವಾಸಿಯೊಬ್ಬರು ಹೊರಚೆಲ್ಲಿದರು



ಎನ್‌. ಆರ್‌. ರಸ್ತೆಯಲ್ಲಿ ಮಳೆಯಲ್ಲೇ ಮಹಿಳೆಯರು ರಸ್ತೆ ದಾಟಿದರು, ಹಲವು ದ್ವಿಚಕ್ರ ವಾಹನ ಸವಾರರು ರಸ್ತೆಬದಿ ನಿಂತಿದ್ದರು



ಶಾಂತಿನಗರದ ಬಳಿ ಮಂಗಳವಾರ ರಾತ್ರಿ ಹೊಳೆಯಂತಾದ ರಸ್ತೆಯಲ್ಲೇ ವಾಹನಗಳು ಸಾಗಿದವು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ನಗರದಲ್ಲಿ 4.5 ಸೆಂ.ಮೀ ಮಳೆ • ಕೆ.ಆರ್‌. ಪುರದ 5 ಬಡಾವಣೆಗಳಲ್ಲಿ ಮನೆಗಳಿಗೆ ನುಗ್ಗಿದ ನೀರು

ಹಗಲು –ರಾತ್ರಿ ಮಳೆ: ಜನಜೀವನ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಮಧ್ಯಾಹ್ನದಿಂದ ಆರಂಭವಾದ ಮಳೆ ತಡರಾತ್ರಿಯವರೆಗೂ ಮುಂದುವರಿದಿತ್ತು. ಕೆ.ಆರ್‌. ಪುರ ವ್ಯಾಪ್ತಿಯಲ್ಲಿ ಐದು ಬಡಾವಣೆಗಳಿಗೆ ನೀರು ನುಗ್ಗಿದೆ. ನಗರದ ಬಹುತೇಕ ಎಲ್ಲ ರಸ್ತೆಗಳಲ್ಲೂ ನೀರು ನಿಂತಿದ್ದು, ವಾಹನ ಸಂಚಾರ ಕಷ್ಟಸಾಧ್ಯವಾಗಿತ್ತು.

ನಗರದಲ್ಲಿ 11 ಸ್ಥಳಗಳಲ್ಲಿ ಮರಗಳು ಬುಡಮೇಲುಗೊಂಡಿವೆ ಎಂದು ಬಿಬಿಎಂಪಿ ನಿಯಂತ್ರಣ ಕೊಠಡಿಗೆ ಕರೆಗಳು ಬಂದಿವೆ. ಈ ಮರಗಳನ್ನು ತೆರವು ಮಾಡುವಂತೆ ನಾಗರಿಕರು ಕೋರಿಕೊಂಡರು. ಸಿಬ್ಬಂದಿ ಸಾಧ್ಯವಾದಷ್ಟು ಕಡೆ ಕ್ರಮ ಕೈಗೊಂಡಿದ್ದಾರೆ.

ನಗರದ ರಾಜರಾಜೇಶ್ವರಿ ನಗರದಲ್ಲಿ ಮಂಗಳವಾರ ಅತ್ಯಧಿಕ ಮಳೆಯಾಗಿದೆ. ನಾಯಂಡಹಳ್ಳಿ, ಉತ್ತರಹಳ್ಳಿ, ವಿದ್ಯಾಪೀಠ, ಜಯನಗರ, ಗೊಟ್ಟಿಗೆರೆ, ನಾಗರಬಾವಿ, ಕೆಂಗೇರಿ, ಗಾಳಿ ಆಂಜನೇಯ ದೇವಸ್ಥಾನ, ಸಂಪಂಗಿರಾಮನಗರದಲ್ಲಿ ಹೆಚ್ಚು ಮಳೆಯಾಗಿದೆ. ಉಳಿದ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ.

ರಾಜಕಾಲುವೆಯಿಂದ ಸಮಸ್ಯೆ: ‘ಕೆ.ಆರ್‌. ಪುರ ವ್ಯಾಪ್ತಿಯ ಸಾಯಿ, ಗುರುರಾಜ ಬಡಾವಣೆ ಸೇರಿ ಸುತ್ತಮುತ್ತಲಿನ ಐದು ಬಡಾವಣೆಗಳಿಗೆ ಮಳೆ ನೀರು ನುಗ್ಗಿದೆ. ಹೊರಮಾವು ಪ್ರದೇಶಗಳಲ್ಲೂ ಮನೆಗಳಿಗೆ ನೀರು ತುಂಬಿದೆ. ರೈಲ್ವೆ ಸೇತುವೆ ಸಮೀಪದ ರಾಜಕಾಲುವೆ ಸಮಸ್ಯೆಯಿಂದಾಗಿ ನೀರು ಹೊರಗೆ ಬಂದಿದೆ’ ಎಂದು ಬಿಬಿಎಂಪಿ ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

‘ಸೋಮವಾರದಿಂದಲೂ ಈ ಭಾಗದಲ್ಲಿ ಮಳೆಯಾಗುತ್ತಿದೆ. ಒಂದು ಗಂಟೆಯಲ್ಲಿ 70 ಮಿ.ಮೀಗೂ ಹೆಚ್ಚಿನ ಮಳೆ ಬಂದರೆ ಸಮಸ್ಯೆ ಉಂಟಾಗುತ್ತದೆ. ಆಗ ರಾಜಕಾಲುವೆಗಳಲ್ಲಿ ಹೆಚ್ಚಿನ ಹರಿವು ಉಂಟಾಗಿ, ಬಡಾವಣೆಗಳಿಗೆ ನುಗ್ಗಿದೆ. ಈ ರಾಜಕಾಲುವೆಗಳ ದುಃಸ್ಥಿತಿಯಿಂದ ಹೀಗಾಗಿದೆ. ರಾಜಕಾಲುವೆಗಳ ದುರಸ್ತಿ ಹಾಗೂ ನಿರ್ವಹಣೆಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿ ಆರಂಭಿಸಲಾಗುತ್ತದೆ’ ಎಂದು ತಿಳಿಸಿದರು.

ಕಾಂಪೌಂಡ್ ಕುಸಿತ: ‘ರಾಜರಾಜೇಶ್ವರಿ ನಗರ ವಲಯದ ಹೇರೋಹಳ್ಳಿ, ದೊಡ್ಡ ಬಿದರಕಲ್ಲುಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಒಂದು ಮನೆಯ ಕಾಂಪೌಂಡ್ ಕುಸಿದಿದೆ. ಈ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ. ಎರಡು ಮರಗಳು ಬಿದ್ದಿದ್ದವು. ಅವುಗಳನ್ನು ತೆರವು ಮಾಡಲಾಗಿದೆ’ ಎಂದು ವಲಯ ಜಂಟಿ ಆಯುಕ್ತ ಡಾ. ನಾಗರಾಜ್ ತಿಳಿಸಿದರು.

ರಾಜರಾಜೇಶ್ವರಿ ನಗರ ವಲಯದಲ್ಲಿ ಕೆಲವು ಕಡೆ ಹೆಚ್ಚು ಮಳೆಯಾಗಿದ್ದರಿಂದ ರಸ್ತೆಯಲ್ಲಿ ನೀರು ನಿಂತಿತ್ತು. ಚರಂಡಿಯಲ್ಲಿನ ತ್ಯಾಜ್ಯ ತೆಗೆದು ನೀರು ಹರಿಯಲು ಸಿಬ್ಬಂದಿ ಅನುವು ಮಾಡಿಕೊಟ್ಟರು ಎಂದು ಹೇಳಿದರು.

ಹೊರವಲಯದ ಕೆಲವು ಪ್ರದೇಶಗಳಲ್ಲಿ ಮಳೆ ನೀರು, ಒಳಚರಂಡಿ ನೀರಿನ ಜೊತೆಗೆ ಹಾವುಗಳು ಒಳಬಂದಿದ್ದವು. ಇವುಗಳನ್ನು ನೆರೆಯವರು, ಸ್ಥಳೀಯವಾಗಿ ಹಾವು ಹಿಡಿಯುವವರ ಸಹಾಯದಿಂದ ಹೊರ ಹಾಕಲು ನಾಗರಿಕರು ಪರದಾಡಿದರು.

ನೆಲಮಂಗಲದ ಹೊನ್ನೇನಹಳ್ಳಿಯಲ್ಲಿ ವೃದ್ಧ ಹನುಮಂತಪ್ಪ ಅವರು ಪಕ್ಕದ ಮನೆ ಗೋಡೆ ಕುಸಿದು ಗಾಯಗೊಂಡಿದ್ದಾರೆ.

4.5 ಸೆಂ.ಮೀ ಮಳೆ: ಬೆಂಗಳೂರು ನಗರದಲ್ಲಿ ಸೋಮವಾರ ರಾತ್ರಿಯಿಂದ ಮಂಗಳವಾರ ಬೆಳಿಗ್ಗೆವರೆಗೆ 4.5 ಸೆಂ.ಮೀ ಮಳೆಯಾಗಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 3.39 ಸೆಂ.ಮೀ., ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ 1.5 ಸೆಂ.ಮೀ. ಮಳೆಯಾಗಿದೆ. ಮುಂದಿನ ಎರಡು ದಿನ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಹೊರಮಾವು ಬಳಿ ತಗ್ಗು ಪ್ರದೇಶದಲ್ಲಿರುವ ಸಾಯಿ ಬಡಾವಣೆಯ ಮನೆಗೆ ನೀರು ನುಗ್ಗಿದ್ದಾಗ ಅಸಹಾಯಕರಾಗಿ ನಿಂತಿದ್ದ ಮಹಿಳೆ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಅಧಿಕಾರಿಗಳ ವಿರುದ್ಧ ಆಕ್ರೋಶ

‘ಪ್ರತಿ ಬಾರಿ ಮಳೆ ಬಂದಾಗಲೂ ನೀರು ಮನೆಗೆ ನುಗ್ಗುತ್ತದೆ. ಯಾವಾಗಲೂ ಮುಂದಿನ ಬಾರಿ ಸರಿ ಹೋಗುತ್ತೆ ಎಂದು ಜನಪ್ರತಿನಿಧಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳು ಭರವಸೆ ನೀಡುತ್ತಾರೆ. ಆದರೆ ವರ್ಷಗಳಿಂದ ಈ ಸಮಸ್ಯೆ ಪರಿಹರಿಸಿಲ್ಲ’ ಎಂದು ಹೊರಮಾವು ಸಾಯಿ ಬಡಾವಣೆ ನಿವಾಸಿ ರಾಜಗೋಪಾಲ್ ಆಕ್ರೋಶ ವ್ಯಕ್ತಪಡಿಸಿದರು.

‘ರಾಜಕಾಲುವೆ ಒತ್ತುವರಿ, ಅಲ್ಲಿರುವ ಹೂಳಿನಿಂದಲೇ ಈ ರೀತಿ ನೀರು ಪ್ರವಾಹವಾಗಿ ರಸ್ತೆಗಳಲ್ಲಿ ಹರಿಯುತ್ತಿದೆ. ಮುಖ್ಯಮಂತ್ರಿ, ಶಾಸಕರು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರು ರಾಜಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ನಗರದ ಯಾವ ಭಾಗದಲ್ಲೂ ಈ ಕೆಲಸವಾಗಿಲ್ಲ. ಹೀಗಾಗಿಯೇ ಎಲ್ಲೆಡೆ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಮನೆಗಳಿಗೂ ನುಗ್ಗುತ್ತಿದೆ’ ಎಂದು ಸಾಮಾಜಿಕ ಕಾರ್ಯಕರ್ತ ಶಿವಕುಮಾರ್ ದೂರಿದರು.

ಸುದ್ದಿ 2 ನಿಮಿಷ

ಇ.ಡಿ ಮುಖ್ಯಸ್ಥರ ಅಧಿಕಾರಾವಧಿ ವಿಸ್ತರಣೆ: ಕೇಂದ್ರ, ಸಿವಿಸಿಗೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ ಮುಖ್ಯಸ್ಥರ ಅಧಿಕಾರಾವಧಿ ವಿಸ್ತರಣೆಯನ್ನು ಪ್ರಶ್ನಿಸಿದ್ದ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ದಾಖಲಿಸುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರ ಮತ್ತು ಕೇಂದ್ರ ಜಾಗೃತ ಆಯೋಗಕ್ಕೆ (ಸಿವಿಸಿ) ಸೂಚಿಸಿದೆ.

ಅಧಿಕಾರಾವಧಿಯ ವಿಸ್ತರಣೆ ಮತ್ತು ಐದು ವರ್ಷದವರೆಗೂ ಅವಧಿ ವಿಸ್ತರಿಸುವುದಕ್ಕೆ ಪೂರಕವಾಗಿ ಕಾಯ್ದೆಗೆ ತಿದ್ದುಪಡಿ ತಂದಿದ್ದನ್ನು ಪ್ರಶ್ನಿಸಿ ಎಂಟು ವಿವಿಧ ಅರ್ಜಿಗಳು ಸಲ್ಲಿಕೆಯಾಗಿದ್ದವು. ಮುಖ್ಯ ನ್ಯಾಯಮೂರ್ತಿ ಎನ್‌.ವಿ.ರಮಣ ಮತ್ತು ನ್ಯಾಯಮೂರ್ತಿ ಕೃಷ್ಣ ಮುರಾರಿ ಅವರಿದ್ದ ನ್ಯಾಯಪೀಠವು ಈ ಕುರಿತು ನೋಟಿಸ್ ನೀಡಲು ಆದೇಶಿಸಿತು.

ಕಾಂಗ್ರೆಸ್ ನಾಯಕರಾದ ರಣದೀಪ್ ಸಿಂಗ್ ಸುರ್ಜೆವಾಲಾ, ಜಯಾ ಠಾಕೂರ್, ಟಿಎಂಸಿ ನಾಯಕ ಸಾಕೇತ್ ಗೋಖಲೆ ಮತ್ತು ವಕೀಲ ಎಂ.ಎಲ್‌. ಶರ್ಮಾ ಅವರು ಈ ಕುರಿತು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದರು.



‘ತಾಯಿಯ ಎದೆಹಾಲೇ ಶ್ರೇಷ್ಠ’

ಬೆಂಗಳೂರು: ‘ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ತಾಯಿಯ ಎದೆಹಾಲು ಸಹಕಾರಿ. ಇದರಿಂದ ರೋಗ ನಿರೋಧಕ ಶಕ್ತಿ ಮಗುವಿನಲ್ಲಿ ಹೆಚ್ಚಳವಾಗಲಿದೆ’ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇಲಾಖೆ ಹಮ್ಮಿಕೊಂಡಿರುವ ಸ್ತನ್ಯಪಾನ ಸಪ್ತಾಹಕ್ಕೆ ಚಾಲನೆ ದೊರೆತಿದ್ದು, ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ‘ತಾಯಿಯ ಎದೆಹಾಲಿನಲ್ಲಿ ಮಗುವಿನ ಬೆಳವಣಿಗೆಗೆ ಬೇಕಾದ ಪೌಷ್ಟಿಕತೆ, ಖನಿಜಾಂಶ ಮತ್ತು ಹೇರಳವಾದ ನೀರಿನ ಅಂಶಗಳು ಅಡಕವಾಗಿವೆ. ಮಗುವಿಗೆ ಇದು ಮೊದಲ ಲಸಿಕೆಯಾಗಲಿದೆ. ಮೊದಲ ಮೂರು ದಿನದ ಹಾಲಿನಲ್ಲಿ ಹೆಚ್ಚು ರೋಗನಿರೋಧಕಗಳಿರಲಿದ್ದು, ಮಗುವಿನಲ್ಲಿ ರೋಗ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅದೇ ರೀತಿ, ಸೋಂಕುಗಳಿಂದ ರಕ್ಷಣೆ ನೀಡುತ್ತದೆ. ಜನಿಸಿದ ಒಂದು ಗಂಟೆಯೊಳಗೆ ಹಾಲುಣಿಸಲು ಪ್ರಾರಂಭಿಸಿ, ಆರು ತಿಂಗಳವರೆಗೆ ಎದೆಹಾಲನ್ನು ಮಾತ್ರ ನೀಡಬೇಕು’ ಎಂದು ತಿಳಿಸಲಾಗಿದೆ.

‘ಸ್ತನ್ಯಪಾನದಿಂದ ಶಿಶು ಮರಣ ತಪ್ಪಿಸಲು ಸಾಧ್ಯವಾಗುತ್ತದೆ. ತಾಯಿಯ ಎದೆಹಾಲಿನಷ್ಟು ಪೋಷಕಾಂಶ ಭರಿತ ಆಹಾರ ಭೂಮಿಯ ಮೇಲೆ ಬೇರೆ ಇಲ್ಲ. ಇದನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ಮಗುವಿಗೆ ನೀಡುವ ಚುಚ್ಚುಮದ್ದಿಗಿಂತ ಇದು ಹೆಚ್ಚು ಶಕ್ತಿಶಾಲಿ’ ಎಂದು ಹೇಳಲಾಗಿದೆ.

‘ಸ್ತನ್ಯಪಾನ ಮಕ್ಕಳ ಮೇಲೆ ಹೆಚ್ಚಿನ ಸಕಾರಾತ್ಮ ಪರಿಣಾಮ ಬೀರಲಿದ್ದು, ತಾಯಿ ಮತ್ತು ಮಗುವಿನ ನಡುವಿನ ಬಾಂಧವ್ಯ ಬಲಗೊಳ್ಳಲು ಸಹಕಾರಿ. ಸಾಂಕ್ರಾಮಿಕ ರೋಗಗಳಿಂದ ಮಕ್ಕಳನ್ನು ರಕ್ಷಿಸಲು ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ತಾಯಂದಿರು ನವಜಾತ ಶಿಶುಗಳಿಗೆ ಸ್ತನ್ಯಪಾನ ಮಾಡಿಸಬೇಕು. ಮಗುವನ್ನು ಸ್ಪರ್ಶಿಸುವ ಮೊದಲು ಸ್ವಚ್ಛತೆಯನ್ನು ಖಚಿತಪಡಿಸಿಕೊಳ್ಳಬೇಕು. ಗುಂಪುಗಳಿಂದ ದೂರವಿರಬೇಕು’ ಎಂದು ತಿಳಿಸಲಾಗಿದೆ.

ವಸತಿನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ನೊಳಂಬ ಲಿಂಗಾಯತ ಸಂಘದ ವತಿಯಿಂದ 2022–23ನೇ ಸಾಲಿನ ದಾನಶೂರ ಕಂಬಿ ಎಂ. ಸಿದ್ಧರಾಮಣ್ಣ ಮತ್ತು ಸರ್ವಮಂಗಳಮ್ಮ ಸಿ. ಸಿದ್ದಯ್ಯ ವಸತಿನಿಯಲಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ತಾಂತ್ರಿಕ, ವೈದ್ಯಕೀಯ, ಕೃಷಿ, ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಪಡೆಯುತ್ತಿರುವ ಆಸಕ್ತ ವೀರಶೈವ ಲಿಂಗಾಯತ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ಇದೇ 29ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 08023485401 ಮತ್ತು 9845273053 ಸಂಪರ್ಕಿಸಿ.

ಪುನರ್‌ವಿಂಗಡಣೆಯಂತೆ ವಾರ್ಡ್‌ ಸಮಿತಿ ಸಭೆಗೆ ಸೂಚನೆ

243 ವಾರ್ಡ್‌ಗಳಿಗೆ ನೋಡಲ್ ಅಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಗಸ್ಟ್ 3ನೇ ಶನಿವಾರದಿಂದ 243 ವಾರ್ಡ್‌ಗಳ ಅನುಸಾರ ವಾರ್ಡ್‌ ಸಮಿತಿ ಸಭೆ ನಡೆಸಬೇಕು ಎಂದು ವಲಯ ಆಯುಕ್ತರಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಪೂರ್ವ ವಲಯ ವ್ಯಾಪ್ತಿಯಲ್ಲಿ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ ಸೋಮವಾರ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಆದೇಶಿಸಿದರು.

ಬಿಬಿಎಂಪಿ ಅಧಿನಿಯಮ 2020ರ ಅನುಸಾರ 243 ವಾರ್ಡ್‌ಗಳಾಗಿವೆ. ಅದರಂತೆ ಆಗಸ್ಟ್ ಮೊದಲನೇ ಶನಿವಾರ 198 ವಾರ್ಡ್‌ಗಳಲ್ಲಿ ಸಭೆ ನಡೆಯಲಿದೆ. 3ನೇ ಶನಿವಾರದಿಂದ 243 ವಾರ್ಡ್ ಅನುಸಾರ ವಾರ್ಡ್ ಸಮಿತಿ ಸಭೆಗಳನ್ನು ನಡೆಸಬೇಕು. ಸಮಿತಿಯ ಸದಸ್ಯರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ನಾಗರಿಕರಿಗೆ ನಿಖರ ಮಾಹಿತಿ ಒದಗಿಸಬೇಕು. ಅಲ್ಲದೆ ಹೊಸ ವಾರ್ಡ್‌ಗಳಿಗೆ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲು ವಲಯ ಆಯುಕ್ತರಿಗೆ ಸೂಚನೆ ನೀಡಿದರು.

ಪೂರ್ವ ವಲಯ ವ್ಯಾಪ್ತಿಯ 6 ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯಪಾಲಕ ಎಂಜಿನಿಯರ್‌ಗಳು ರಸ್ತೆ ಗುಂಡಿ, ಪಾದಚಾರಿ ಮಾರ್ಗಗಳ ಅಭಿವೃದ್ಧಿಗಾಗಿ ವಾರ್ಡ್‌ವಾರು ಮೀಸಲಿಟ್ಟಿರುವ ಅನುದಾನವನ್ನು ಬಳಸಿಕೊಂಡು ತ್ವರಿತವಾಗಿ ಕಾಮಗಾರಿ ಕೈಗೆತ್ತಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಪ್ರಮುಖ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲು ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ಗೆ ಹೇಳಿದರು.

ಪುಲಕೇಶಿ ನಗರ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಕೋಲ್ಡ್ ಮಿಕ್ಸ್ ಹಾಕಿ ಮುಚ್ಚಬೇಕು. ಅಮೃತ ನಗರೋತ್ಥಾನದಡಿ ರಸ್ತೆಗಳ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಬೇಕು ಎಂದು ಸೂಚಿಸಿದರು.

ಕಾಕ್ಸ್‌ಟೌನ್ ಮಾರುಕಟ್ಟೆ ಕಟ್ಟಡ ನಿರ್ಮಾಣದ ಬಾಕಿ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಬೇಕು. ಕೊಳೆಗೇರಿ ಪ್ರದೇಶದ ಬಳಿ ಕಸದ ಕಿಯೋಸ್ಕ್ ಅಳವಡಿಸಬೇಕು. ಸುಂದರ ಮೂರ್ತಿ ರಸ್ತೆ ಬದಿ ಇ-ಶೌಚಾಲಯ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬೀದಿ ದೀಪಗಳ ಅಳವಡಿಕೆ, ಮರದ ಕೊಂಬೆ ಕತ್ತರಿಸುವುದು, ರಾಜಕಾಲುವೆಗಳು ಹಾಗೂ ರಸ್ತೆ ಬದಿಯ ಸೈಡ್ ಡ್ರೈನ್‌ಗಳಲ್ಲಿ ಹೂಳೆತ್ತುವುದು ಸೇರಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳನ್ನು ಪೂರ್ಣಗೊಳಿಸಬೇಕು ಎಂದು ಮುಖ್ಯ ಆಯುಕ್ತರು ಹೇಳಿದರು.

ವಲಯ ಆಯುಕ್ತ ಪಿ.ಎನ್. ರವೀಂದ್ರ, ವಲಯ ಜಂಟಿ ಆಯುಕ್ತರಾದ ಶಿಲ್ಪಾ, ವಲಯ ಮುಖ್ಯ ಎಂಜಿನಿಯರ್ ಸುಗುಣಾ ಇದ್ದರು.

ಡೆಂಗಿ: ತಿಂಗಳಲ್ಲಿ 1,652 ಪ್ರಕರಣಗಳು ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಪೀಡಿತರ ಸಂಖ್ಯೆ ಉಲ್ಬಣಗೊಂಡಿದ್ದು, ಜುಲೈ ತಿಂಗಳೊಂದರಲ್ಲೆ 1,652 ಪ್ರಕರಣ ದೃಢಪಟ್ಟಿವೆ.

ಈವರೆಗೆ ಡೆಂಗಿ ಪೀಡಿತರಾದವರ ಒಟ್ಟು ಸಂಖ್ಯೆ 4,126ಕ್ಕೆ ಏರಿಕೆಯಾಗಿದೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. ಕಳೆದ ವರ್ಷ ಈ ವೇಳೆ ಡೆಂಗಿ ಪ್ರಕರಣಗಳ ಸಂಖ್ಯೆ 2 ಸಾವಿರದ ಗಡಿಯೊಳಗಿತ್ತು.

ಈ ವರ್ಷ 77 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 33 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 31,070 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 835 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ.

ಪ್ರಕರಣಗಳ ಸಂಖ್ಯೆ 15 ಜಿಲ್ಲೆಗಳಲ್ಲಿ ಮೂರಂಕಿ, 14 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಮೈಸೂರಿನಲ್ಲಿ 388, ಉಡುಪಿಯಲ್ಲಿ 386, ದಕ್ಷಿಣ ಕನ್ನಡದಲ್ಲಿ 203, ಶಿವಮೊಗ್ಗದಲ್ಲಿ 182, ಚಿತ್ರದುರ್ಗದಲ್ಲಿ 178, ಹಾಸನದಲ್ಲಿ 141, ವಿಜಯಪುರದಲ್ಲಿ 133, ದಾವಣಗೆರೆಯಲ್ಲಿ 127, ಬೆಳಗಾವಿಯಲ್ಲಿ 116, ಚಿಕ್ಕಬಳ್ಳಾಪುರದಲ್ಲಿ 109, ಕೊಪ್ಪಳದಲ್ಲಿ 108, ಕಲಬುರ್ಗಿಯಲ್ಲಿ 105, ಚಾಮರಾಜನಗರದಲ್ಲಿ 103 ಹಾಗೂ ಕೋಲಾರದಲ್ಲಿ 100 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100 ಕ್ಕಿಂತ ಕಡಿಮೆ ಇವೆ.

926 ಚಿಕೂನ್‌ಗುನ್ಯಾ ಪ್ರಕರಣ: 28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 25 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 15 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 926 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ವಿಜಯಪುರದಲ್ಲಿ 147, ಕೋಲಾರದಲ್ಲಿ 127, ಹಾಸನದಲ್ಲಿ 81, ಬೆಂಗಳೂರು ಗ್ರಾಮಾಂತರದಲ್ಲಿ 57, ಚಿತ್ರದುರ್ಗದಲ್ಲಿ 56, ಶಿವಮೊಗ್ಗದಲ್ಲಿ 52 ಹಾಗೂ ತುಮಕೂರಿನಲ್ಲಿ 51 ಪ್ರಕರಣ ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆಯಿದೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

ಕಸಾಪಕ್ಕೆ ಪದ್ಮಿನಿ ನಾಗರಾಜು ನೇಮಕ


ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿ ಮಹಿಳಾ ಪ್ರತಿನಿಧಿಯಾಗಿ ಸಾಹಿತಿ, ರಾಣಿ ಸರಳಾದೇವಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪದ್ಮಿನಿ ನಾಗರಾಜು ಅವರು ನೇಮಕವಾಗಿದ್ದಾರೆ ಎಂದು ಪರಿಷತ್ ಅಧ್ಯಕ್ಷ ಮಹೇಶ ಜೋಷಿ ಪ್ರಕಟಣೆಯಲ್ಲಿ ಮಂಗಳವಾರ ತಿಳಿಸಿದ್ದಾರೆ.



ಪದ್ಮಿನಿ ನಾಗರಾಜು

ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಕಾಯ್ದೆ ಅಂಗೀಕಾರ

ನವದೆಹಲಿ (ಪಿಟಿಐ): ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಕಾಯ್ದೆ–2021 ಅನ್ನು ಲೋಕಸಭೆಯಲ್ಲಿ ಮಂಗಳವಾರ ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು. ಕಾಯ್ದೆ ಮೇಲಿನ ಚರ್ಚೆ ವೇಳೆ ಮಾತನಾಡಿದ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್, 'ವನ್ಯಜೀವಿಗಳ ಉತ್ಪನ್ನಗಳಿಂದ ತಯಾರಿಸಲಾಗುವ ಶಾಲು ಹಾಗೂ ಸೌಂದರ್ಯವರ್ಧಕ ವಸ್ತುಗಳನ್ನು ಬಹಿಷ್ಕರಿಸುವಂತೆ ಜನರಲ್ಲಿ ಅರಿವು ಮೂಡಿಸಬೇಕು' ಎಂದು ಹೇಳಿದರು.



ವಾಹನವಿಮೆಗೂ ಕೃತಕ ಬುದ್ಧಿ!

ವಾಹನ ಹಾನಿಗೀಡಾದಾಗ ಅದರ ಫೋಟೊ ಹಾಗೂ ವಿಡಿಯೊಗಳನ್ನು ಕಳಿಸಿದರೆ ಕೆಲವೇ ಕ್ಷಣಗಳಲ್ಲಿ ಕ್ಲೇಮ್‌ಗೆ ಅನುಮತಿ ನೀಡಲು ವಿಮೆ ಕಂಪನಿಗಳಿಗೆ ಸಾಧ್ಯವಾಗುತ್ತದೆ.



ಕೃಷ್ಣ ಭಟ್

ವಾಹನವನ್ನು ಓಡಿಸುವುದಕ್ಕೆ ಆರ್ಟಿಫಿಶಿಯಲ್ ಇಂಟಲಿಜೆನ್ಸ್, ಸೆನ್ಸರ್ – ಇವೆಲ್ಲವೂ ಈಗಾಗಲೇ ಹಲವು ರೀತಿಯಲ್ಲಿ ಅನ್ವಯ ಆಗುತ್ತಿವೆ. ಚಾಲಕರೇ ಇಲ್ಲದ ವಾಹನಗಳ ಅಭಿವೃದ್ಧಿಯೂ ನಡೆಯುತ್ತಿದೆ. ಆದರೆ, ತೀರಾ ಇತ್ತೀಚಿನವರೆಗೂ ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನಂತಹ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸದ ಒಂದು ಸೇವೆಯಾಗಿ ಇದ್ದದ್ದು ವಿಮೆ!

ಅದರಲ್ಲೂ, ವಾಹನವಿಮೆಯ ವಿಚಾರದಲ್ಲಿ ಈ ಹೊಸ ತಂತ್ರಜ್ಞಾನ ಬಳಕೆ ಸ್ವಲ್ಪ ಹಿಂದೆಯೇ ಉಳಿದಿತ್ತು. ವಿಮೆ ಆನ್‌ಲೈನ್ ಪ್ಲಾಟ್‌ಫಾರಂಗಳಿಗೆ ಬಂದಿದ್ದೇ ದೊಡ್ಡ ಸಂಗತಿ ಎಂಬಂತಿತ್ತು. ಅಲ್ಲಿಯವರೆಗೂ ಕಾಗದ–ಪತ್ರಗಳ ವ್ಯವಹಾರದಲ್ಲೇ ವಿಮೆಯನ್ನು ಮಾಡಿಸುವುದರಿಂದ, 'ಕ್ಲೇಮ್' ಮಾಡುವ ಪ್ರಕ್ರಿಯೆಯವರೆಗೂ ನಡೆಯುತ್ತಿತ್ತು. ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಲ್ಲಿ ಸಾಮಾನ್ಯ ಬ್ಯಾಂಕ್‌ಗಳಿಗಿಂತಲೂ ವಿಮೆ ಕಂಪನಿಗಳು ಇಲ್ಲಿಯವರೆಗೂ ಒಂದು ಹೆಜ್ಜೆ ಹಿಂದೆಯೇ ಉಳಿದಿದ್ದವು.

ಆದರೆ, ಈಗ ಈ ವಲಯದಲ್ಲೂ ಮಹತ್ವದ ಬದಲಾವಣೆಗಳಾಗುತ್ತಿವೆ. ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಬಳಸಿಕೊಂಡು ವಾಹನವಿಮೆಯನ್ನು ಮಾಡಿಸುವ ಹೊಸ ಸಾಧ್ಯತೆಗಳು ಗ್ರಾಹಕರಿಗೆ ಸಿಗುತ್ತಿವೆ. ಈಗಾಗಲೇ ಕೆಲವು ಬ್ಯಾಂಕ್‌ಗಳು ಈ ಸೌಲಭ್ಯವನ್ನು ಪರಿಚಯಿಸಿವೆ.

ವಿಮೆಯ ನವೀಕರಣ ಮಾಡಿಸಲು ಗ್ರಾಹಕರು ತಮ್ಮ ವಾಹನದ ಫೋಟೊ ಅಥವಾ ವಿಡಿಯೊ ಸೆರೆಹಿಡಿದು ಕಳುಹಿಸಿದರೆ ಸಾಕು. ಇದಕ್ಕೆ ಬ್ಯಾಂಕ್‌ಗಳು ಅಥವಾ ವಿಮೆ ಕಂಪನಿಗಳು ಕ್ಲೌಡ್ ಆಧರಿತ ಪ್ಲಾಟ್‌ಫಾರಂ ಸಿದ್ಧಪಡಿಸಿದ್ದು, ಕೆಲವೇ ಸೆಕೆಂಡುಗಳಲ್ಲಿ ಈ ಆರ್ಟಿಫಿಶಿಯಲ್ ಇಂಟಲಿಜೆನ್ಸ್ 'ವಾಹನ ಎಷ್ಟು ನುಜ್ಜುಗುಜ್ಜಾಗಿದೆ' ಎಂಬುದನ್ನೆಲ್ಲ ತಪಾಸಣೆ ಮಾಡುತ್ತದೆ. ಇವೆಲ್ಲವೂ ಆನ್‌ಲೈನ್‌ನಲ್ಲೇ ನಡೆದುಹೋಗುತ್ತದೆ. ಈ ಪ್ರಕ್ರಿಯೆಯಲ್ಲಿ ಯಾವ ವ್ಯಕ್ತಿಯೂ 'ಕೈಯಾಡಿಸುವುದಿಲ್ಲ'. ಅಷ್ಟೇ ಅಲ್ಲ, ಅತ್ಯಂತ ನಿಖರವಾಗಿ ಈ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ತನ್ನ ಕೆಲಸವನ್ನು ಮಾಡುತ್ತದೆ. ಚಿತ್ರಗಳು ಮತ್ತು ವಿಡಿಯೊಗಳನ್ನು ಗ್ರಾಹಕರು ಅಪ್‌ಲೋಡ್ ಮಾಡಿದಾಗ ಅದರಲ್ಲಿ ಯಾವುದೇ ಮೋಸ ಇದೆಯೇ ಎಂದು ಕೂಡ ಪತ್ತೆ ಮಾಡುತ್ತದೆ.



ವಾಹನವಿಮೆಯಲ್ಲಿ ಹೊಸ ಹೊಸ ತಂತ್ರಜ್ಞಾನದ ಅಳವಡಿಕೆಗೆ ಇದ್ದ ಮುಖ್ಯ ಅಡ್ಡಿಯೆಂದರೆ ಅದು ನೀತಿನಿರೂಪಣೆಗಳದ್ದು. 'ಭಾರತೀಯ ವಿಮಾ ನಿಯಂತ್ರಕ ಮತ್ತು ಅಭಿವೃದ್ಧಿ ಪ್ರಾಧಿಕಾರ' (ಐಆರ್‌ಡಿಎಐ) ಈ ನಿಟ್ಟಿನಲ್ಲಿ ಕಟ್ಟುನಿಟ್ಟಾದ ನಿಯಮಗಳನ್ನು ನಿಗದಿಪಡಿಸಿದೆ. ಆದರೆ, ಎರಡು ವಾರಗಳ ಹಿಂದಷ್ಟೇ, ತಂತ್ರಜ್ಞಾನ ಆಧರಿತ ಸೌಲಭ್ಯಗಳನ್ನು ಬಳಸಿಕೊಂಡು ವಿಮೆಗಳನ್ನು ಗ್ರಾಹಕರಿಗೆ ಒದಗಿಸಲು ಅನುವು ಮಾಡಿಕೊಟ್ಟಿತ್ತು. ಹೀಗಾಗಿ, ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಬಳಸಿಕೊಂಡು ಹೊಸ ಉತ್ಪನ್ನಗಳನ್ನು ಬ್ಯಾಂಕ್‌ಗಳು ಹಾಗೂ ವಿಮಾ ಕಂಪನಿಗಳು ಪರಿಚಯಿಸಲು ಆರಂಭಿಸಿವೆ. ಇದರ ಅನುಕೂಲ ಗ್ರಾಹಕರಿಗೆ ಅಪಾರ ಪ್ರಮಾಣದಲ್ಲಿ ಆಗುತ್ತದೆ. ವಾಹನ ಸುಸ್ಥಿತಿಯಲ್ಲಿ ಇಟ್ಟುಕೊಂಡಿದ್ದರೆ ವಿಮೆಯ ಪ್ರೀಮಿಯಂ ಕಡಿಮೆಯಾಗುತ್ತದೆ. ವಾಹನ ಹೆಚ್ಚು ಹಾನಿಗೆ ಒಳಗಾಗಿದ್ದರೆ, ಅದಕ್ಕೆ ಸಹಜವಾಗಿಯೇ ಹೆಚ್ಚು ಪ್ರೀಮಿಯಂ ತುಂಬಬೇಕಾಗುತ್ತದೆ.

ಅಷ್ಟೇ ಅಲ್ಲ, ಕ್ಲೇಮ್ ವಿಚಾರದಲ್ಲೂ ತಂತ್ರಜ್ಞಾನ ಹಲವು ಅನುಕೂಲ ಮಾಡಿಕೊಡಲಿದೆ. ಗ್ರಾಹಕರೇ ವಾಹನ ಹಾನಿಗೀಡಾದಾಗ ಅದರ ಫೋಟೊ ಹಾಗೂ ವಿಡಿಯೊಗಳನ್ನು ಕಳಿಸಿದರೆ ಕೆಲವೇ ಕ್ಷಣಗಳಲ್ಲಿ ಕ್ಲೇಮ್‌ಗೆ ಅನುಮತಿ ನೀಡಲು ವಿಮಾ ಕಂಪನಿಗಳಿಗೆ ಸಾಧ್ಯವಾಗುತ್ತದೆ. ಇದು ಒಂದೆಡೆ ಕಂಪನಿಗಳಿಗೆ ಗ್ರಾಹಕ ಅನುಭವವನ್ನು ಸುಧಾರಿಸುವ ನಿಟ್ಟಿನಲ್ಲಿ ಸಹಾಯ ಮಾಡಿದರೆ, ಗ್ರಾಹಕರಿಗೆ ತಕ್ಷಣ ತಮ್ಮ ವಾಹನವನ್ನು ಸರಿಪಡಿಸಿಕೊಳ್ಳಲು ಅನುವು ಮಾಡಲಿದೆ.

ಸದ್ಯದ ವಾಹನವಿಮೆಯ ಕ್ಲೇಮ್ ಪ್ರಕ್ರಿಯೆ ತುಂಬಾ ಸಂಕೀರ್ಣವಾಗಿದೆ. ಆದರೆ, ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಈ ಕ್ಲೇಮ್ ಪ್ರಕ್ರಿಯೆಯನ್ನು ಅತ್ಯಂತ ಸರಳವಾಗಿಸಲಿದೆ.

ಈಗಾಗಲೇ ಸೆಕೆಂಡ್ ಹ್ಯಾಂಡ್ ಕಾರು ಮಾರಾಟ ಮಾಡುವ ಕಂಪನಿಗಳು ಇಂತಹ ತಂತ್ರಜ್ಞಾನಗಳನ್ನು ಬಳಸಿಕೊಂಡು ವಾಹನದ ಮೌಲ್ಯವನ್ನು ನಿಗದಿ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಸೆಕೆಂಡ್ ಹ್ಯಾಂಡ್ ಕಾರು ಮಾರಾಟದಲ್ಲಿ ಕಾರು ಎಷ್ಟು ಸುಸ್ಥಿತಿಯಲ್ಲಿದೆ ಎಂಬುದನ್ನು ವಿಶ್ಲೇಷಣೆ ನಡೆಸುವುದಕ್ಕೆ ಹಲವು ಕಂಪನಿಗಳು ಹೊಸ ಹೊಸ ಸಂಶೋಧನೆ ನಡೆಸುತ್ತಿವೆ. ಈ ವಿಶ್ಲೇಷಣೆ ಹೆಚ್ಚು ನಿಖರವಾದಷ್ಟೂ ಅವರ ಲಾಭದ ಮಾರ್ಜಿನ್ ಹೆಚ್ಚುತ್ತದೆ. ಆದರೆ, ಈ ವಿಶ್ಲೇಷಣೆ ಅಷ್ಟು ಸುಲಭವಲ್ಲ. ಹೀಗಾಗಿ, ಕೆಲವು ಕಂಪನಿಗಳು ನ್ಯೂರಲ್ ನೆಟ್‌ವರ್ಕ್ ಆರ್ಕಿಟೆಕ್ಚರ್ ಬಳಸಿಕೊಂಡು ಕಾರಿನ ಹೊರಭಾಗದ ಹಾಗೂ ಕಾರಿನ ಇಂಜಿನ್ ಸ್ಥಿತಿಯನ್ನು ಪರೀಕ್ಷೆ ಮಾಡಲಾಗುತ್ತಿವೆ. ಇದರಿಂದ ಈ ಸಂಸ್ಥೆಗಳು ಕಾರುಗಳನ್ನು ತಪಾಸಣೆ ಮಾಡುವಾಗ ಮನುಷ್ಯ ಸಹಜ ದೋಷ ಉಂಟಾಗುವುದನ್ನು ತಪ್ಪಿಸುತ್ತಿವೆ. ಇನ್ನೂ ಕೆಲವು ಕಂಪನಿಗಳು ಆರ್ಟಿಫಿಶಿಯಲ್ ಇಂಟಲಿಜೆನ್ಸನ್ನೇ ಬಳಕೆ ಮಾಡುತ್ತಿವೆ.

ಆದರೆ, ವಿಮೆ ನವೀಕರಣ ಮಾಡಿಸುವಾಗ ಅಥವಾ ಕ್ಲೇಮ್ ಮಾಡುವಾಗ ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನಂತಹ ತಂತ್ರಜ್ಞಾನವನ್ನು ಬಳಸುವುದರಲ್ಲಿ ತೊಂದರೆಯೂ ಇದೆ. ಏಕೆಂದರೆ, ಈ ಕ್ಷೇತ್ರಕ್ಕೆ ಈ ತಂತ್ರಜ್ಞಾನ ಹೊಸದು. ಸಾಮಾನ್ಯವಾಗಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಬಳಕೆಯಾದಷ್ಟೂ ಹೆಚ್ಚು ಸುಧಾರಿಸುತ್ತದೆ. ಆರಂಭದಲ್ಲಿ ಇದರ ನಿಖರತೆ ಕಡಿಮೆ ಇರುತ್ತದೆ. ಹೀಗಾಗಿ, ಮೊದಮೊದಲು ಫೋಟೊಗಳು, ವಿಡಿಯೊಗಳನ್ನು ತಪ್ಪಾಗಿ ವಿಶ್ಲೇಷಣೆ ಮಾಡಿ ವಿಮೆ ನವೀಕರಿಸಲು, ಕ್ಲೇಮ್ ಒಪ್ಪಿಕೊಳ್ಳಲು ನಿರಾಕರಿಸಬಹುದು. ಆದರೆ, ದಿನಕಳೆದಂತೆ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಆಗಲೀ, ನ್ಯೂರಲ್ ನೆಟ್‌ವರ್ಕ್ ಆರ್ಕಿಟೆಕ್ಚರ್ ಆಗಲೀ ಸುಧಾರಿಸುತ್ತದೆ. ಆಗ, ಸಹಜವಾಗಿಯೇ ಗ್ರಾಹಕರ ಅನುಭವವೂ ಸುಧಾರಿಸುತ್ತದೆ.



ಅಪರೂಪಕ್ಕೊಮ್ಮೆ ಗ್ರಾಹಕರು ಬಳಸುವ ಡೇಟಾವನ್ನು ನಿರ್ವಹಿಸಲು ಮತ್ತು ಸಂಗ್ರಹಿಸಲು ನೂರಾರು ಕೋಟಿ ರೂಪಾಯಿ ಮೌಲ್ಯದ ಅತ್ಯಾಧುನಿಕ ಹಾರ್ಡ್‌ಡಿಸ್ಕ್‌ಗಳನ್ನು ಡೇಟಾ ಸೆಂಟರ್‌ಗಳಲ್ಲಿ ಬಳಸುವುದರಿಂದ ಡೇಟಾ ಸೆಂಟರ್‌ಗಳ ವೆಚ್ಚ ಹೆಚ್ಚಾಗುತ್ತಿದೆ...

ಹಸಿರು ಡೇಟಾ ಸೆಂಟರ್‌ಗಳು

ಉದಯ ಶಂಕರ ಪುರಾಣಿಕ

ವಿಶ್ವದಾದ್ಯಂತ ಪ್ರತಿದಿನ ದೊರೆಯುವ ಅಪಾರ ಪ್ರಮಾಣದ ಡೇಟಾ ನಿರ್ವಹಣೆಗಾಗಿ ಡೇಟಾ ಸೆಂಟರ್‌ಗಳು ದಿನದ 24 ಗಂಟೆಗಳು ಕೆಲಸ ಮಾಡುತ್ತವೆ. ಭಾರತದಲ್ಲಿ ಹೆಚ್ಚು ಪರಿಸರಸ್ನೇಹಿಯಾಗಿರುವ ಅತ್ಯಾಧುನಿಕ ಡೇಟಾ ಸೆಂಟರ್‌ಗಳು ಸ್ಥಾಪನೆಯಾಗುತ್ತಿದ್ದು, ಇವುಗಳನ್ನು 'ಗ್ರೀನ್ ಡೇಟಾ ಸೆಂಟರ್' ಅಥವಾ 'ಹಸಿರು ಡೇಟಾ ಸೆಂಟರ್'ಗಳೆಂದು ಕರೆಯಲಾಗುತ್ತದೆ. ಭಾರತದಲ್ಲಿ ಮುಂದಿನ ಐದು ವರ್ಷಗಳಲ್ಲಿ ಅಂದಾಜು ಒಂದು ಲಕ್ಷ 20 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಿ, ನಮ್ಮ ದೇಶದ ಡೇಟಾ ಸೆಂಟರ್ ಉದ್ಯಮದ ಸಾಮರ್ಥ್ಯವನ್ನು ಐದು ಪಟ್ಟು ಹೆಚ್ಚು ಮಾಡಲು ಉದ್ದೇಶಿಸಲಾಗಿದೆ.

ಡೇಟಾ ಸೆಂಟರ್‌ಗಳಲ್ಲಿ ಮುಂಬರುವ ದಿನಗಳಲ್ಲಿ ಆಗಲಿರುವ ಕೆಲವು ಪ್ರಮುಖ ಬದಲಾವಣೆಗಳು ಹೀಗಿವೆ:

● ಡೇಟಾ ನಿರ್ವಹಣೆ ಮತ್ತು ಸಂಗ್ರಹಣೆ ವಿಧಾನ ಹಾಗೂ ತಂತ್ರಜ್ಞಾನಗಳಲ್ಲಿ ಬದಲಾವಣೆ ಅತ್ಯಗತ್ಯವಾಗಿದೆ. ಉದಾಹರಣೆಗೆ, ವಾಣಿಜ್ಯ ಸಂಸ್ಥೆಗಳು, ಬ್ಯಾಂಕುಗಳು, ಸರ್ಕಾರದ ಇಲಾಖೆಗಳು – ಹೀಗೆ ಬೃಹತ್ ಪ್ರಮಾಣದ ಡೇಟಾವನ್ನು ಬಳಸುವ ಗ್ರಾಹಕರು, ಡೇಟಾ ಸೆಂಟರ್ ಸೇವೆಗಳನ್ನು ಬಳಸುತ್ತಿದ್ದಾರೆ. ಆದರೆ ಈಗಿರುವ ವಿಧಾನ ಮತ್ತು ತಂತ್ರಜ್ಞಾನಗಳಲ್ಲಿರುವ ನ್ಯೂನತೆಗಳಿಂದಾಗಿ ಇಂತಹ ಗ್ರಾಹಕರ ಡೇಟಾ ನಿರ್ವಹಣೆ ಮತ್ತು ಸಂಗ್ರಹಣೆಯಲ್ಲಿ ಲೋಪಗಳಾಗುತ್ತಿವೆ.

● ಯಾವ ರೀತಿಯ ಸುಧಾರಣೆ ತರಬಹುದು – ಎಂದು ತಜ್ಞರು ನಡೆಸಿದ ಅಧ್ಯಯನ ವರದಿಯ ಪ್ರಕಾರ ಡೇಟಾ ಸೆಂಟರ್ ಗ್ರಾಹಕರು ಹೆಚ್ಚಾಗಿ ಬಳಸುವ ಡೇಟಾ ಪ್ರಮಾಣ ಶೇ. 10ರಷ್ಟು ಇದ್ದರೆ, ಅಗತ್ಯ ಬಿದ್ದಾಗ ಮಾತ್ರ ಬಳಸುವ ಡೇಟಾ ಪ್ರಮಾಣ ಶೇ. 30ರಷ್ಟು ಆಗಿದೆ. ಉಳಿದ ಶೇ. 60ರಷ್ಟು ಡೇಟಾವನ್ನು ತೀರಾ ಅಪರೂಪಕ್ಕೆ ಒಮ್ಮೆ ಗ್ರಾಹಕರು ಬಳಸುತ್ತಿದ್ದಾರೆ. ಆದರೆ ಈಗಿನ ಕೆಲವು ಡೇಟಾ ಸೆಂಟರ್‌ಗಳಲ್ಲಿ ಈ ರೀತಿ ಡೇಟಾವನ್ನು ವ್ಯವಸ್ಥಿತವಾಗಿ ವಿಂಗಡಿಸಿ, ನಿರ್ವಹಿಸಲು ಅಗತ್ಯವಾದ ಅಧುನಿಕ ವಿಧಾನಗಳು ಮತ್ತು ತಂತ್ರಜ್ಞಾನಗಳ ಬಳಕೆಯಾಗುತ್ತಿಲ್ಲವೆನ್ನುವ ಆತಂಕವನ್ನು ಈ ತಜ್ಞರು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಗ್ರಾಹಕರ ಡೇಟಾ ಒಂದು ಕಡೆ ವ್ಯವಸ್ಥಿತವಾಗಿ ದೊರೆಯುವ ಬದಲಾಗಿ, ಹಲವಾರು ಕಡೆ ಸಂಗ್ರಹವಾಗಿರುತ್ತದೆ ಮತ್ತು ಡೇಟಾ ಪ್ರಮಾಣ ಹೆಚ್ಚಾದಂತೆ, ಗ್ರಾಹಕರಿಗೆ ಹೆಚ್ಚು ಸಮಸ್ಯೆಗಳು ಎದುರಾಗುತ್ತಿವೆ.

● ಅಪರೂಪಕ್ಕೆ ಒಮ್ಮೆ ಗ್ರಾಹಕರು ಬಳಸುವ ಶೇ. 60ರಷ್ಟು ಡೇಟಾವನ್ನು ನಿರ್ವಹಿಸಲು ಮತ್ತು ಸಂಗ್ರಹಿಸಲು ನೂರಾರು ಕೋಟಿ ರೂಪಾಯಿ ಮೌಲ್ಯದ ಅತ್ಯಾಧುನಿಕ ಹಾರ್ಡ್‌ಡಿಸ್ಕ್ ಮತ್ತು ಸ್ಟೋರೇಜ್ ಅರೇಗಳನ್ನು ಡೇಟಾ ಸೆಂಟರ್‌ಗಳಲ್ಲಿ ಬಳಸುವುದರಿಂದ ಡೇಟಾ ಸೆಂಟರ್‌ಗಳ ವೆಚ್ಚವೂ ಹೆಚ್ಚಾಗುತ್ತಿದೆ; ಡೇಟಾ ಸೆಂಟರ್‌ಗಳ ಸೇವೆಗಳನ್ನು ಬಳಸಲು ಗ್ರಾಹಕರು ಹೆಚ್ಚು ಶುಲ್ಕ ಪಾವತಿಸಬೇಕಾಗುತ್ತಿದೆ. ಇದರ ಬದಲಾಗಿ, ಗ್ರಾಹಕರ ಡೇಟಾ ಬಳಕೆಯನ್ನು ಅಧುನಿಕ ತಂತ್ರಜ್ಞಾನಗಳ ಮೂಲಕ ವಿಶ್ಲೇಷಣೆ ಮಾಡಿ, ಅನಗತ್ಯ ಡೇಟಾವನ್ನು ಡೇಟಾ ಸೆಂಟರ್‌ಗಳಲ್ಲಿ ಇಡುವುದರಿಂದ ಗ್ರಾಹಕರಿಗೂ ಹೆಚ್ಚು ವೆಚ್ಚವಾಗುತ್ತಿದೆ ಎಂದು ಮನವರಿಕೆ ಮಾಡಿಕೊಳ್ಳುವ ಕೌಶಲವನ್ನು ಹೊಂದಿರುವ ತಂತ್ರಜ್ಞರಿಗೆ ದೇಶವಿದೇಶಗಳಲ್ಲಿರುವ ಡೇಟಾ ಸೆಂಟರ್‌ಗಳಲ್ಲಿ ಬೇಡಿಕೆ ಇದೆ.

● ಕ್ಲೌಡ್ ಸೇವೆಗಳನ್ನು ನೀಡುವ ಸಂಸ್ಥೆಗಳು ಪ್ರಾರಂಭವಾದಾಗ ವಿಶ್ವಾದ್ಯಂತ ಇರುವ ಡೇಟಾ ಸೆಂಟರ್‌ಗಳನ್ನು ಬಳಸುವ ಗ್ರಾಹಕರು, ಕ್ಲೌಡ್ ಸೇವೆಗಳನ್ನು ಬಳಸಲು ಮುಂದಾಗುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ 2020ರಲ್ಲಿ ಜಾಗತಿಕ ಮಟ್ಟದಲ್ಲಿ ನಡೆದ ಒಂದು ಅಧ್ಯಯನದ ವರದಿಯ ಪ್ರಕಾರ, ಮುಖ್ಯವಾಗಿ ಮಾಹಿತಿ ಸುರಕ್ಷತೆ ಕುರಿತು ಆತಂಕವನ್ನು ಹೊಂದಿರುವ ಗ್ರಾಹಕರು ನಿರೀಕ್ಷೆ ಮಾಡಿದಷ್ಟು ಕ್ಲೌಡ್ ಸೇವೆಗಳನ್ನು ಬಳಸುತ್ತಿಲ್ಲ. ಈಗಾಗಲೇ ಪಬ್ಲಿಕ್ ಕ್ಲೌಡ್ ಸೇವೆಗಳನ್ನು ಬಳಸಲು ಪ್ರಾರಂಭಿಸಿದ ಗ್ರಾಹಕರಲ್ಲಿ ಶೇ. 85ರಷ್ಟು ಗ್ರಾಹಕರು, ಪಬ್ಲಿಕ್ ಕ್ಲೌಡ್ ಬದಲಾಗಿ ಖಾಸಗಿ ಅಥವಾ ಪ್ರೈವೇಟ್ ಕ್ಲೌಡ್ ಸೇವೆಗಳನ್ನು ಬಳಸಲು ಮುಂದಾಗಿದ್ದಾರೆ. ಇದೇ ರೀತಿ ಅನೇಕ ಗ್ರಾಹಕರು ಪಬ್ಲಿಕ್ ಕ್ಲೌಡ್ ಸೇವೆಗಳನ್ನು ಬಿಟ್ಟು ಡೇಟಾ ಸೆಂಟರ್ ಸೇವೆಗಳನ್ನು ಮತ್ತೆ ಬಳಸಲು ಮುಂದಾಗುತ್ತಿದ್ದಾರೆ. ಹೀಗಾಗಿ ಪಬ್ಲಿಕ್ ಕ್ಲೌಡ್‌ನಿಂದ ಪ್ರೈವೇಟ್ ಕ್ಲೌಡ್ ವ್ಯವಸ್ಥೆಗೆ ಅಥವಾ ಪಬ್ಲಿಕ್ ಕ್ಲೌಡ್‌ನಿಂದ ಮತ್ತೆ ಡೇಟಾ ಸೆಂಟರ್ ವ್ಯವಸ್ಥೆಗೆ ಗ್ರಾಹಕರ ಡೇಟಾ, ತಂತ್ರಾಂಶಗಳು, ಇತ್ಯಾದಿಗಳನ್ನು ವರ್ಗಾಯಿಸುವ ಕೌಶಲವನ್ನು ಹೊಂದಿರುವವರಿಗೆ ದೇಶವಿದೇಶಗಳಲ್ಲಿ ಬೇಡಿಕೆ ಹೆಚ್ಚಾಗುತ್ತಿದೆ.

● ಡೇಟಾ ಸೆಂಟರ್‌ನಲ್ಲಿ ಅತ್ಯಾಧುನಿಕ ಡೇಟಾ ಸುರಕ್ಷತೆ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನಗಳ ಬಳಕೆ ಜನಪ್ರಿಯವಾಗುತ್ತಿದೆ. ಅತ್ಯಾಧುನಿಕ ಮತ್ತು ಅಧಿಕ ಸಾಮರ್ಥ್ಯದ ಕಂಪ್ಯೂಟರ್ ಸರ್ವರ್‌ಗಳ ಬಳಕೆ ಹೆಚ್ಚಾದಂತೆ, ಇವುಗಳ ಬಳಕೆಯಿಂದ ಉತ್ಪತ್ತಿಯಾಗುವ ಶಾಖವನ್ನು ನಿಯಂತ್ರಿಸಲು ಡೇಟಾ ಸೆಂಟರ್‌ಗಳಲ್ಲಿ ಅತ್ಯಾಧುನಿಕ ದ್ರವ ಆಧಾರಿತ ಕೂಲಿಂಗ್ ವ್ಯವಸ್ಥೆ ಬಳಕೆ ಅನಿವಾರ್ಯವಾಗುತ್ತಿದೆ. ಹೀಗಾಗಿ ವಿವಿಧ ಸುರಕ್ಷತೆ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನಗಳು, ಅತ್ಯಾಧುನಿಕ ಸರ್ವರ್‌ಗಳ ನಿರ್ವಹಣೆ ಮತ್ತು ದ್ರವ ಆಧಾರಿತ ಕೂಲಿಂಗ್ ವ್ಯವಸ್ಥೆಯ ಕೌಶಲಗಳನ್ನು ಹೊಂದಿರುವವರಿಗೆ ದೇಶ ವಿದೇಶಗಳಲ್ಲಿ ಬೇಡಿಕೆ ಹೆಚ್ಚಾಗುತ್ತಿದೆ.

● ಸಾಂಪ್ರದಾಯಿಕ ಡೇಟಾ ಸೆಂಟರ್‌ಗಳಿಗಿಂತ ಗ್ರೀನ್ ಡೇಟಾ ಸೆಂಟರ್‌ಗಳನ್ನು ಗ್ರಾಹಕ ಸಂಸ್ಥೆಗಳು ಆಯ್ಕೆ ಮಾಡಿಕೊಳ್ಳುತ್ತಿವೆ. ಉದಾಹರಣೆಗೆ, ಗ್ರೀನ್ ಡೇಟಾ ಸೆಂಟರ್‌ಗಳ ದೀರ್ಘಾವಧಿಯ ನಿರ್ವಹಣೆ ವೆಚ್ಚದಲ್ಲಿ ಉಳಿತಾಯ ಸಾಧ್ಯವಾಗುತ್ತದೆ. ಬೇರೆ ಡೇಟಾ ಸೆಂಟರ್‌ಗಳಿಗಿಂತ ಗ್ರೀನ್ ಡೇಟಾ ಸೆಂಟರ್‌ಗಳಿಗೆ ಬೇಕಾಗುವ ಸ್ಥಳಾವಕಾಶ, ವಿದ್ಯುತ್ ಮತ್ತು ನೀರಿನ ಬಳಕೆಯಲ್ಲಿ ಉಳಿತಾಯ ಸಾಧ್ಯವಿದೆ. ಗ್ರೀನ್ ಡೇಟಾ ಸೆಂಟರ್‌ಗಳಿಂದ ಉಂಟಾಗುವ ಕಾರ್ಬನ್ ಮಾಲಿನ್ಯ ಹಾಗೂ ತ್ಯಾಜ್ಯ ಕೂಡ ಕಡಿಮೆಯಾಗಿರುತ್ತದೆ.

ಅಧುನಿಕ ಡೇಟಾ ಸೆಂಟರ್ ಉದ್ಯೋಗಗಳಲ್ಲಿ ಹಾರ್ಡ್‌ವೇರ್, ನೆಟ್‌ವರ್ಕ್, ಡೇಟಾ ಮಾತ್ರವಲ್ಲದೆ, ಹಲವಾರು ಹೊಸ ತಂತ್ರಜ್ಞಾನಗಳನ್ನು ಕಲಿಯುವ ಅವಕಾಶಗಳನ್ನು ನೀಡಲಾಗುತ್ತಿದೆ. ತಂತ್ರಜ್ಞರ ಕೆಲಸವನ್ನು ಕಡಿಮೆ ಮಾಡಲು ಆಟೋಮೇಷನ್ ಬಳಸಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ ಅಂತರರಾಷ್ಟ್ರೀಯ ಡೇಟಾ ಸೆಂಟರ್ ಉದ್ಯಮದಲ್ಲಿ ಭಾರತ ಪ್ರಮುಖ ಸ್ಥಾನ ಪಡೆಯಲು ಸಾಧ್ಯವಿದೆ.



ಪ್ರಾಣಿ ಪಕ್ಷಿ ಕೀಟಗಳ ರಾತ್ರಿದೃಷ್ಟಿ...



ಸುಧೀರ ಎಚ್. ಎಸ್.

ಸೂರ್ಯೋದಯದ ಬೆಳಕು ಮತ್ತು ಸೂರ್ಯಾಸ್ತವಾದ ಮೇಲೆ ಕತ್ತಲು – ಇವುಗಳಿಗೆ ತಕ್ಕಂತೆ ನಾವು ಮನುಷ್ಯರು ನಮ್ಮ ಜೀವನಶೈಲಿಯನ್ನು ರೂಪಿಸಿಕೊಂಡಿದ್ದೇವೆ. ರಾತ್ರಿಯೆಲ್ಲ ಎದ್ದಿರುವವವರಿಗೆ 'ನಿಶಾಚರಿ' ಎಂದೂ ಹೇಳುತ್ತೇವೆ. ಹಾಗೆಯೇ ಗೂಬೆಯೂ ನಿಶಾಚರಿ ಎಂದು ಎಲ್ಲರಿಗೂ ತಿಳಿದಿರುವ ವಿಷಯವೇ. ಅದು ಸರಿ, ಆದರೆ ಗೂಬೆ ಮತ್ತು ಇನ್ನೂ ಹಲವು ಪ್ರಾಣಿ-ಪಕ್ಷಿ-ಕೀಟಗಳಿಗೆ ರಾತ್ರಿ ಹೊತ್ತು ಹೇಗೆ ಕಣ್ಣು ಕಾಣುವುದು ಎಂಬುದು ಸ್ವಾಭಾವಿಕವಾದ ಪ್ರಶ್ನೆ.

ಇನ್ನೊಂದೆಡೆ ನಾವೇನಾದರೂ ಕೆಲವು ಪ್ರಾಣಿಗಳಿಗೆ ರಾತ್ರಿ ಹೊತ್ತು ಟಾರ್ಚ್‌ನ ಬೆಳಕನ್ನು ಹಾರಿಸಿದರೆ, ಅವುಗಳ ಕಣ್ಣು ಫಳಫಳ ಹೊಳೆಯುತ್ತವೆ. ಇದಕ್ಕೆ ಇವುಗಳಲ್ಲಿ 'ಟಪೆಟಮ್ ಲುಸಿಡಮ್' ಎಂಬ ರೆಟಿನಾದ ಹಿಂದೆ ಕೆಲವು ವಿಶೇಷ ಪ್ರತಿಫಲಕದೊಂದಿಗೆ ಕೆಲವು ಪ್ರಾಣಿ-ಪಕ್ಷಿಗಳು ವಿಕಸನಗೊಂಡಿವೆ. ಇದು ಯಾವುದೇ ಗೋಚರಿಸಿದ ಬೆಳಕನ್ನು ರೆಟಿನಾದ ಮೂಲಕ ಪ್ರತಿಬಿಂಬಿಸಲು ಸಹಾಯ ಮಾಡುತ್ತದೆ ಮತ್ತು ದ್ಯುತಿಗ್ರಾಹಕ (ಫೋಟೋ ರಿಸೆಪ್ಟರ್)ಗಳಿಗೆ ಬೆಳಕಿನ ಲಭ್ಯತೆಯನ್ನು ಹೆಚ್ಚಿಸುತ್ತದೆ. ಇದರಿಂದ ಕಡಿಮೆ ಬೆಳಕಿನಲ್ಲಿಯೂ ರಾತ್ರಿಯ ದೃಷ್ಟಿಯನ್ನು ಸುಗಮಗೊಳಿಸುತ್ತದೆ.

ಹಾಗಾಗಿ ರಾತ್ರಿಯಲ್ಲಿ ನಾವು ಕೆಲವು ಪ್ರಾಣಿಗಳಲ್ಲಿ ನೋಡುವ ಕಣ್ಣಿನ ಹೊಳಪು ಅವುಗಳ 'ಟಪೆಟಮ್ ಲೂಸಿಡಮ್'ನಿಂದ. ಇದರಿಂದ ಅವುಗಳ 'ಪ್ಯೂಪಿಲ್' ಬೆಳಕಿನಿಂದ ಹೊಳೆಯುವಂತೆ ಕಾಣುತ್ತದೆ. ಮೂಲಭೂತವಾಗಿ ಇದು ನೋಟದ ಪ್ರಕ್ರಿಯೆಗೆ ಲಭ್ಯವಿರುವ ಬೆಳಕಿನ ತೀವ್ರತೆಯನ್ನು ಹೆಚ್ಚಿಸುತ್ತದೆ. ಅಂದ ಹಾಗೆ, ಮನುಷ್ಯರಲ್ಲಿ ಟಪೆಟಮ್ ಲುಸಿಡಮ್ ಇಲ್ಲ, ಹಾಗಾಗಿ ನಮಗೆ ರಾತ್ರಿ ಹೊತ್ತು 'ನೋಡು'ವುದಕ್ಕೆ ಆ ಸಮಯದಲ್ಲಿನ ಬೆಳಕು ಸಾಕಾಗುವುದಿಲ್ಲ.



ನೋಟ ಅಥವಾ ದೃಷ್ಟಿಯನ್ನು ವೃದ್ಧಿಸಲು ಇನ್ನೊಂದು ಮಾರ್ಗವಿದೆ. ಈ ಹಿಂದೆ ತಿಳಿಸಿದಂತೆ, ನಾವು ಮನುಷ್ಯರು ಕಾಣುವ ಬೆಳಕು ವಿದ್ಯುತ್ಕಾಂತೀಯ ಸ್ಪೆಕ್ಟ್ರಮ್ ಅಲ್ಲಿ ವಿಸಿಬಲ್ ಬ್ಯಾಂಡ್‌ಗೆ ಸೇರಿದ ಬಣ್ಣಗಳು ಮಾತ್ರ. ಇದನ್ನು ಜನಪ್ರಿಯವಾಗಿ 'VIBGYOR' ಎಂದು ಕರೆಯಲಾಗುತ್ತದೆ (ನೇರಳೆ, ಇಂಡಿಗೊ, ನೀಲಿ, ಹಸಿರು, ಹಳದಿ, ಕಿತ್ತಳೆ ಮತ್ತು ಕೆಂಪು ಬಣ್ಣಗಳಿಗೆ). ಮನುಷ್ಯರ ಕಣ್ಣುಗಳು ಈ ಬಣ್ಣಗಳ ಸಮ್ಮಿಶ್ರಿತ ತರಂಗಾಂತರದ ಮಾಹಿತಿಯನ್ನು ಗ್ರಹಿಸಲು ವಿನ್ಯಾಸಗೊಂಡಿದೆ. ಅಂದರೆ ಸೂರ್ಯಾಸ್ತದೊಡನೆ ಬೆಳಕಿನ ಮೂಲ ಕ್ಷೀಣಿಸಿದಂತೆ ನಮ್ಮ ನೋಟಕ್ಕೆ ಬೆಳಕು ಸಾಕಾಗುವುದಿಲ್ಲ. ಹಾಗಾಗಿ ನಾವು ಕೃತಕವಾಗಿ ದೀಪಗಳ (ಬೀದಿ ದೀಪಗಳು/ ಮನೆಯಲ್ಲಿನ ದೀಪಗಳು) ಮೊರೆ ಹೋಗುತ್ತೇವೆ.

ಮಾನವರಂತೆ ಇತರೆ ಪ್ರಾಣಿ-ಪಕ್ಷಿ-ಕೀಟಗಳ ದೃಷ್ಟಿಗೋಚರ ಗ್ರಹಿಕೆ 'ವಿಸಿಬಲ್ ಬ್ಯಾಂಡ್'ಗೆ ಸೀಮಿತವಾಗಿರಬೇಕು ಎಂದು ನಾವು ಸಾಮಾನ್ಯವಾಗಿ ಭಾವಿಸುತ್ತೇವೆ. ಆದರೆ ಕೆಲವು ಪ್ರಾಣಿ-ಪಕ್ಷಿ-ಕೀಟಗಳು ವಿದ್ಯುತ್ಕಾಂತೀಯ ಸ್ಪೆಕ್ಟ್ರಮ್ ಅನ್ನು ವಿಭಿನ್ನವಾಗಿ ಸೆರೆಹಿಡಿಯಬಹುದು ಎಂದು ತಿಳಿದುಬಂದಿದೆ. ಕೆಲವು ಜೀವಿಗಳು ಕೇವಲ ಎರಡು ಬಣ್ಣಗಳನ್ನು ಮಾತ್ರ ನೋಡಬಹುದು; ಕೆಲವು ನೇರಳಾತೀತದಲ್ಲಿ ನೋಡಬಹುದು (ನೇರಳೆಬಣ್ಣಕ್ಕಿಂತ ಕಡಿಮೆ ತರಂಗಾಂತರಗಳು) ಮತ್ತು ಕೆಲವರು ಅತಿಗೆಂಪು ಬಣ್ಣದಲ್ಲಿ (ಕೆಂಪುಬಣ್ಣಕ್ಕಿಂತ ಹೆಚ್ಚಿನ ತರಂಗಾಂತರಗಳು) ನೋಡಬಹುದು. ಹಾವುಗಳು ಅತಿಗೆಂಪು ಬೆಳಕಿನಲ್ಲಿ ನೋಡಬಹುದು. ಹಾಗಾಗಿ ಕೆಲವು ಜೀವಿಗಳು ರಾತ್ರಿಯಾದರೂ ಆ ಕತ್ತಲಿನಲ್ಲೂ ಬೇರೆ ವಸ್ತು-ಜೀವಿಗಳನ್ನು ನೋಡಬಲ್ಲವು; ಮನುಷ್ಯರಿಗೆ ಹೀಗೆ ಸಾಧ್ಯವಾಗದು.

ಇದರ ಜೊತೆ ಕೆಲವು ಪ್ರಾಣಿ-ಪಕ್ಷಿ-ಕೀಟಗಳಲ್ಲಿ ಇನ್ನೊಂದು ವಿಶೇಷ ಗುಣಲಕ್ಷಣ ಇದೆ. ಅದರ ಚರ್ಮ ಕೂಡ ವಿಶೇಷವಾಗಿ ವಿಕಸನಗೊಂಡಿದೆ. ಇವು ಸಾಧಾರಣ ಬೆಳಕಿನಲ್ಲಿ ಏನೂ ವಿಶೇಷವಾಗಿ ಕಾಣದಿದ್ದರೂ ಬೇರೆ ತರಂಗಾಂತರಗಳ ಬೆಳಕಿಗೆ ವಿಭಿನ್ನವಾಗಿ ಪ್ರತಿಫಲಿಸುತ್ತದೆ. ಕೆಲವು ಕೀಟಗಳು ಮತ್ತು ಜೇಡಗಳು ನೇರಳಾತೀತ ಬೆಳಕಿನಲ್ಲಿ ಹೊಳೆಯುತ್ತದೆ. ಉದಾಹರಣೆಗೆ, ಚೇಳಿಗೆ ನೇರಳಾತೀತ ಬೆಳಕನ್ನು ಹಾರಿಸಿದರೆ, ಅದು ವಿಶೇಷವಾಗಿ ಹೊಳೆಯುತ್ತದೆ. ಕೀಟಗಳಲ್ಲಿ ಬೇರೆ ಕೀಟಗಳ ಇರುವಿಕೆ ನಮಗೆ ರಾತ್ರಿಯಲ್ಲೂ ಚೆನ್ನಾಗಿ ಗೋಚರಿಸುವುದು. ಬಹುಶಃ ಈ ಗುಣಲಕ್ಷಣಗಳನ್ನು ಆಧರಿಸಿಯೇ ಪ್ರಾಣಿ-ಪಕ್ಷಿ-ಕೀಟಗಳಲ್ಲಿ ಅವುಗಳ ಆಹಾರವ್ಯವಸ್ಥೆ ಕೂಡ ರೂಪುಗೊಂಡಿರಬಹುದು. ಇದನ್ನೇ ಒಂದು ರೀತಿಯಲ್ಲಿ 'ನೈಟ್ ವಿಶನ್' ಎಂದೆನ್ನಬಹುದು. ಇದನ್ನು ಆಧರಿಸಿ ಈಗ ವಿಜ್ಞಾನಿಗಳು ರಾತ್ರಿ ಹೊತ್ತು ನೇರಳಾತೀತ ಮತ್ತು ಅತಿಗೆಂಪು ಬೆಳಕನ್ನು ಹಾರಿಸಬಲ್ಲ ಟಾರ್ಚ್‌ಗಳನ್ನು ಬಳಸುತ್ತಿದ್ದಾರೆ. ಇದರಿಂದ ಅವುಗಳ ಚಲನ-ವಲನ ಮತ್ತು ಇತರೆ ಚಟುವಟಿಕೆಗಳನ್ನು ಅಧ್ಯಯನ ಮಾಡಲು ಅನುಕೂಲವಾಗಿದೆ.

ಇರುವೆಗಳಿಗೂ ನೈಟ್ ವಿಶನ್ ಇದೆಯಂತೆ. ಯಾವ ಜೀವಿಗಳು ಯಾವ ಬಣ್ಣಗಳು ಮತ್ತು ಯಾವ ತರಂಗಾಂತರಗಳಲ್ಲಿ ವಿದ್ಯುತ್ಕಾಂತೀಯ ಸ್ಪೆಕ್ಟ್ರಮ್ ಅನ್ನು ಗ್ರಹಿಸಬಹುದು ಮತ್ತು ಪ್ರಕ್ರಿಯೆಗೊಳಿಸಬಹುದು ಎಂದು ನಮಗೆ ಇನ್ನೂ ಪೂರ್ತಿ ತಿಳಿದಿಲ್ಲ. ಆದರೆ ಬೆಳಕಿನ ಆಟ ಮತ್ತು ಆ ಆಟದಲ್ಲಿ ಜೀವಿಗಳು ಜಗತ್ತನ್ನು ಎಷ್ಟು ವಿಭಿನ್ನವಾಗಿ ನೋಡುತ್ತವೆ ಎಂಬುದನ್ನು ಊಹಿಸುವುದು ಖಂಡಿತವಾಗಿಯೂ ರೋಮಾಂಚನಕಾರಿಯಾದ ಸಂಗತಿ.

ನಗರದಲ್ಲಿ ನಾಗರಪಂಚಮಿ ಸಂಭ್ರಮ



ಹೊಸಕೆರೆಹಳ್ಳಿಯಲ್ಲಿ ನಾಗರ ಪಂಚಮಿ ಪ್ರಯುಕ್ತ ಮಂಗಳವಾರ ಮಹಿಳೆಯರು ನಾಗರ ಕಲ್ಲಿಗೆ ಹಾಲೆರೆದು ಪೂಜೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ/ ರಂಜು ಪಿ



ನಗರದ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಭಕ್ತರು ನಾಗರ ಕಲ್ಲಿಗೆ ಹಾಲಿನಭಿಷೇಕ ಮಾಡಿ ಪೂಜೆ ಮಾಡಿದರು –ಪ್ರಜಾವಾಣಿ ಚಿತ್ರ ಕೃಷ್ಣಕುಮಾರ್ ಪಿ.ಎಸ್



ಚಾಮರಾಜಪೇಟೆಯ ರಾಮೇಶ್ವರ ದೇವಸ್ಥಾನದದಲ್ಲಿ ಚಿಣ್ಣರು ಪೂಜೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್‌.ಜಿ

ತಿರಂಗಾ ಯಾತ್ರೆ: ಅಮೃತಾಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೇಶದಾದ್ಯಂತ ‘ತಿರಂಗಾ ಯಾತ್ರೆ’ ಕೈಗೊಂಡಿರುವ ಕಾಸರಗೋಡಿನ ಅಮೃತಾ ಜೋಶಿ ನಗರಕ್ಕೆ ಆಗಮಿಸಿದ್ದು, ಅವರನ್ನು ಬಿಬಿಎಂಪಿ ವತಿಯಿಂದ ಸನ್ಮಾನಿಸಲಾಯಿತು.

ನಾಲ್ಕು ತಿಂಗಳಿನಿಂದ 22 ಸಾವಿರ ಕಿ.ಮೀ. ಸಂಚರಿಸುತ್ತಿರುವ ಕನ್ನಡತಿ ಅಮೃತಾ, ‘ಹರ್ ಘರ್ ತಿರಂಗಾ’ ಅಭಿಯಾನದ ಮಹತ್ವವನ್ನು ಜನರಿಗೆ ತಿಳಿಸಲು ಈ ಯಾತ್ರೆ ನಡೆಸುತ್ತಿದ್ದಾರೆ. ಬೆಂಗಳೂರಿಗೆ ಮಂಗಳವಾರ ಬಂದಾಗ, ಬಿಬಿಎಂಪಿ ಮತ್ತು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ವಿಕಾಸ ಟ್ರಸ್ಟ್‌ನಿಂದ ಸನ್ಮಾನಿಸಲಾಯಿತು.

ರಾಜ್‌ಕುಮಾರ್ ಗಾಜಿನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, ’ದೇಶದ ಎಲ್ಲ ಭಾಗಗಳಿಗೆ ಹೋಗಿ ಎಲ್ಲ ಸಂಸ್ಕೃತಿಯನ್ನು ಕಂಡಿದ್ದಾರೆ. ಉತ್ತರ ಭಾರತ ಸೇರಿದಂತೆ ಎಲ್ಲ ಭಾಗಗಳ ಮಹತ್ವವನ್ನೂ ತಿಳಿಸುತ್ತಿರುವುದು ಒಳ್ಳೆಯ ಕೆಲಸ’ ಎಂದು ಶ್ಲಾಘಿಸಿದರು.

‘ಚಿಕ್ಕವಳಿದ್ದಾಗಿನಿಂದ ಮೇಘಾಲಯ ನೋಡಬೇಕೆಂಬ ಆಸೆ ಇತ್ತು. ಕ್ಲಬ್‌ನವರಿಗೆ ಈ ಬಗ್ಗೆ ತಿಳಿಸಿದಾಗ ಅವರು ಈಶಾನ್ಯ ಭಾರತ ಚೆನ್ನಾಗಿದೆ. ಅಲ್ಲಿ ಪ್ರವಾಸ ಮಾಡಿ ಎಂದು ಹೇಳಿದರು. ನನ್ನ ಪ್ಯಾಷನ್ ಬೈಕ್. ಪ್ರಾಂತೀಯ ತಾರತಮ್ಯದ ವಿಷಯವಾಗಿ ಎಲ್ಲೆಡೆ ಅರಿವು ಮೂಡಿಸುವ ಗುರಿಯೊಂದಿಗೆ ಈ ಸಂಚಾರ ಆರಂಭಿಸಿದೆ’ ಎಂದು ಅಮೃತಾ ತಿಳಿಸಿದರು.

‘ಈಶಾನ್ಯ ಭಾರತದಲ್ಲಿ ಸಂಚಾರ ಮುಗಿಯುವ ವೇಳೆಗೆ ಅಲ್ಲಿನ ಜನರು ತುಂಬಾ ಆಪ್ತರಾದರು. ಅವರು ಎಲ್ಲರಿಗೂ ಸಹಾಯ ಮಾಡುತ್ತಾರೆ. ಅವರ ಪ್ರೀತಿ ಕಂಡಮೇಲೆ 8 ಸಾವಿರ ಕಿ.ಮೀಗೆ ಮುಗಿಸಬೇಕಿದ್ದ ಸಂಚಾರವನ್ನು ವಿಸ್ತರಿಸಿದೆ. ಬಾಂಗ್ಲಾದೇಶ, ಮ್ಯಾನ್ಮಾರ್, ಚೀನಾ ಗಡಿಗಳಲ್ಲೂ ಸಂಚಾರ ಮಾಡಿದೆ. ಬಿಎಸ್‌ಎಫ್‌ನವರ ಕರ್ತವ್ಯವನ್ನು ಕಂಡು ಬೆರಗಾದೆ’ ಎಂದರು.

‘ಏಪ್ರಿಲ್ 25ಕ್ಕೆ ಉತ್ತರ ಪ್ರದೇಶದಲ್ಲಿ ಅಪಘಾತವಾಯಿತು. ಹಿಂದಿನಿಂದ ಕಾರ್ ಗುದ್ದಿತು. ಹೀಗಾಗಿ ನಾನು ಒಂದು ತಿಂಗಳು ವಿಶ್ರಾಂತಿ ತೆಗೆದುಕೊಂಡೆ. ಈ ಪ್ರವಾಸವನ್ನು ಮುಗಿಸಲೇಬೇಕು ಎಂದು ಅದೇ ಸ್ಥಳದಿಂದ ಸಂಚಾರ ಆರಂಭಿಸಿದೆ. ಇದಕ್ಕೆ ಸಂಸದ ತೇಜಸ್ವಿ ಸೂರ್ಯ ಹಾಗೂ ಅವರ ಕಡೆಯವರು ಸಹಾಯ ಮಾಡಿದರು. ಇನ್ನೊಂದು ವಾರವಷ್ಟೆ ಸಂಚಾರ ಇದೆ. ಶಿವಮೊಗ್ಗಗೆ ಹೋಗುತ್ತೇನೆ’ ಎಂದು ಹೇಳಿದರು.

ಮಣಿಪಾಲ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಟಿ.ವಿ.ಮೋಹನ್ ದಾಸ್ ಪೈ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸಿ. ಸೋಮಶೇಖರ್ ಇದ್ದರು.

ಬಿಬಿಎಂಪಿ ಅಧಿಕಾರಿ/ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಮೃತಾ ಜೋಶಿ ಅವರಿಗೆ ₹1 ಲಕ್ಷ ಗೌರವ ಸಹಾಯಧನ ನೀಡಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಅಮೃತ್ ರಾಜ್ ತಿಳಿಸಿದರು.



ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೇಶದಾದ್ಯಂತ ‘ತಿರಂಗಾ ಯಾತ್ರೆ’ ಕೈಗೊಂಡಿರುವ ಕಾಸರಗೋಡಿನ ಅಮೃತಾ ಜೋಶಿ ನಗರಕ್ಕೆ ಬಂದಾಗ ಬಿಬಿಎಂಪಿ ವತಿಯಿಂದ ಸನ್ಮಾನಿಸಲಾಯಿತು –ಪ್ರಜಾವಾಣಿ ಚಿತ್ರ

‘ಡಿಜಿಟಲ್ ಮಾರುಕಟ್ಟೆ ತರಬೇತಿ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಭಾಗದ ಕರಕುಶಲ ಕರ್ಮಿಗಳು ಹಾಗೂ ಸಣ್ಣ ಉದ್ದಿಮೆದಾರರಿಗೆ ಡಿಜಿಟಲ್ ಮಾರುಕಟ್ಟೆಯ ಬಳಕೆ ಕುರಿತು ಸಮರ್ಪಕ ತರಬೇತಿಯ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಉಬುಂಟು ಹಾಗೂ ಎಸ್‌ಕ್ಯಾಪ್ ಸಹಯೋಗದಲ್ಲಿ ಮಹಿಳಾ ಉದ್ದಿಮೆದಾರರಿಗಾಗಿ ಡಿಜಿಟಲ್ ಮಾರುಕಟ್ಟೆ ಕುರಿತು ಹಮ್ಮಿಕೊಂಡಿರುವ ಎರಡು ದಿನಗಳ ತರಬೇತಿ ಕಾರ್ಯಾಗಾರಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

ಕೋವಿಡ್ ನಂತರದ ಕಾಲಘಟ್ಟದಲ್ಲಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಡಿಜಿಟಲ್ ಮಾರುಕಟ್ಟೆಯು ದೈತ್ಯ ಸ್ವರೂಪದಲ್ಲಿ ಬೆಳೆಯುತ್ತಿದೆ. ಎಲ್ಲ ಉದ್ದಿಮೆದಾರರು ಮತ್ತು ವ್ಯಾಪಾರಿಗಳು ಸುಲಭವಾಗಿ ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಳ್ಳಲು ಇದು ಸಹಕಾರಿಯಾಗಿದೆ. ಗ್ರಾಮೀಣ ಭಾಗದ ಕರಕುಶಲ ಕರ್ಮಿಗಳು ಮತ್ತು ಸಣ್ಣ ಉದ್ದಿಮೆದಾರರಿಗೆ ಡಿಜಿಟಲ್ ಮಾರುಕಟ್ಟೆಯ ಕುರಿತು ಜ್ಞಾನ ದೊರಕಿದರೆ ಅವರು ಯಶಸ್ಸು ಕಾಣಲು ಸಾಧ್ಯವಾಗುತ್ತದೆ ಎಂದರು.

ಪ್ರಸಕ್ತ ವರ್ಷ 33,000 ಮಹಿಳಾ ಸ್ವಸಹಾಯ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ. ಇದು ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ಚಟುವಟಿಕೆಗಳ ಭಾಗವಾಗಿದೆ. ಇಂತಹ ತರಬೇತಿ ಕಾರ್ಯಾಗಾರಗಳ ಮೂಲಕ ಮಹಿಳೆಯರು ಉದ್ಯಮ ರಂಗದಲ್ಲೂ ಯಶಸ್ಸು ಸಾಧಿಸಲು ನೆರವಾಗಬೇಕಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಉಬುಂಟು ಸಂಸ್ಥಾಪಕ ಅಧ್ಯಕ್ಷೆ ಕೆ. ರತ್ನಪ್ರಭಾ ಮಾತನಾಡಿ, ಇ-ಕಾಮರ್ಸ್ ಕ್ಷೇತ್ರದಲ್ಲಿ ಇರುವ ಅವಕಾಶಗಳನ್ನು ಪರಿಚಯಿಸಲು ಭಾರತದಾದ್ಯಂತ ಮೂರು ವರ್ಷಗಳಲ್ಲಿ 10,000 ಮಹಿಳೆಯರಿಗೆ ತರಬೇತಿ ನೀಡಲಾಗುವುದು ಎಂದರು.

ಕ್ಯಾನ್ ಫಿನ್ ಹೋಮ್ಸ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಿರೀಶ್ ಕೌಸ್ಗಿ, ಕೇಂದ್ರ ಸರ್ಕಾರದ ಕೆಪಿಎಂಜಿ ಸರ್ಕಾರಿ ಮತ್ತು ಸಲಹಾ ಸೇವೆಗಳ ನಿರ್ದೇಶಕ ರೆಬ್ಬಾಪ್ರಗಡ ಪ್ರಸಾದ್, ಎಸ್‌ಕ್ಯಾಪ್ ದಕ್ಷಿಣ ಮುಖ್ಯಸ್ಥೆ ಮಿಕಿಕೊ ತನಕಾ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ಅಧ್ಯಕ್ಷ ಸಿಐಎ ಪ್ರಸಾದ್ ಉಪಸ್ಥಿತರಿದ್ದರು.



ಉಬುಂಟು ಮಹಿಳಾ ಉದ್ದಿಮೆದಾರರ ಸಂಘಟನೆ ವತಿಯಿಂದ ಬೆಂಗಳೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ‘ಡಿಜಿಟಲ್ ಮಾರುಕಟ್ಟೆ ತರಬೇತಿ ಕಾರ್ಯಾಗಾರ’ವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಎಸ್‌ಕ್ಯಾಪ್ ದಕ್ಷಿಣ ವಿಭಾಗದ ಮುಖ್ಯಸ್ಥೆ ಮಿಕಿಕೊ ತನಕಾ, ಉಬುಂಟು ಅಧ್ಯಕ್ಷೆ ಕೆ. ರತ್ನಪ್ರಭಾ ಮತ್ತು ಮಹಿಳಾ ಉದ್ಯಮಿಗಳು ಇದ್ದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು


ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭವ, ಸಿದ್ಧಾಂತ ಶಿಖಾಮಣಿ- ವಚನ ಪ್ರವಚನ ಕಾರ್ಯಕ್ರಮ: ಸ್ಥಳ: ವಿಭೂತಿಪುರ ವೀರಸಿಂಹಾಸನ ಸಂಸ್ಥಾನಮಠ, ಬೆಂಗಳೂರು

ಬಸವ ಪಂಚಮಿ, ಬಸವಣ್ಣನವರ ಹಾಗೂ ನೀಲಾಂಬಿಕಾ ಅವರ 827ನೇ ಲಿಂಗೈಕ್ಯ ಸಂಸ್ಮರಣೆ: ಸಾನ್ನಿಧ್ಯ: ಮಾತೆ ಗಂಗಾದೇವಿ, ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಗೋವಿಂದ ಕಾರಜೋಳ, ಅತಿಥಿಗಳು: ನಿರ್ಮಲಾ.ಸಿ. ಯಲಿಗಾರ, ಎಂ. ಪ್ರಕಾಶಮೂರ್ತಿ, ಸಾಲುಮರದ ತಿಮ್ಮಕ್ಕ, ಜೆ. ಜೈರಾಜ, ಆಯೋಜನೆ: ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ರಾಷ್ಟ್ರೀಯ ಬಸವದಳ, ಲಿಂಗಾಯತ ಧರ್ಮ ಮಹಾಸಭಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

ರೆಡ್ ಸ್ಟಾರ್ 11ನೇ ಕರ್ನಾಟಕ ರಾಜ್ಯ ಸಮ್ಮೇಳನದ ಉದ್ಘಾಟನೆ: ಅತಿಥಿಗಳು: ಕೆ.ಎನ್. ರಾಮಚಂದ್ರನ್, ಪಿ.ಜೆ. ಜೇಮ್ಸ್, ಬಿ.ರುದ್ರಯ್ಯ , ಕೋಟಗಾನಹಳ್ಳಿ ರಾಮಯ್ಯ, ನೂರ್ ಶ್ರೀಧರ್, ಎಸ್. ಬಾಲನ್, ಮಾವಳ್ಳಿ ಶಂಕರ, ಎಂ.ಡಿ. ಅಮೀರ್ ಅಲಿ, ಡಿ.ಎಸ್. ನಿರ್ವಾಣಪ್ಪ, ಪೂರ್ಣಿಮಾ, ಡಿ.ಎಚ್. ಪೂಜಾರ, ಆಯೋಜನೆ: ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ-ಲೆನಿನ್‌ವಾದಿ), ಸ್ಥಳ: ಶಿಕ್ಷಕರ ಸದನ, ಕೆ.ಜೆ. ರಸ್ತೆ, ಬೆಳಿಗ್ಗೆ 11

ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್ ಉದ್ಘಾಟನೆ: ಸಾನ್ನಿಧ್ಯ: ವಿನಯ್ ಗುರೂಜಿ, ಉದ್ಘಾಟನೆ: ಆರಗ ಜ್ಞಾನೇಂದ್ರ, ರವೀಂದ್ರ ಕೃಷ್ಣಪ್ಪ, ಅಚ್ಯುತ್‌ಗೌಡ, ಆಯೋಜನೆ ಮತ್ತು ಸ್ಥಳ: ಫ್ರೀಡಂ ಆ್ಯಪ್, ಕೇಂದ್ರ ಕಚೇರಿ ಬನಶಂಕರಿ, ಮಧ್ಯಾಹ್ನ 12.30

ಬನ್ನಂಜೆ ಗೋವಿಂದಾಚಾರ್ಯರ ಜನ್ಮಾರಾಧನೆ: ಅತಿಥಿಗಳು: ರೋಹಿತ್ ಚಕ್ರತೀರ್ಥ, ಕೃಷ್ಣರಾಜ ಕುತ್ಪಾಡಿ, ಗಾನ ನಮನ: ಎಂ.ವೆಂಕಟೇಶ್ ಕುಮಾರ್, ಹಾರ್ಮೋನಿಯಂ: ಸತೀಶ ಕೊಳ್ಳಿ, ತಬಲಾ: ಕೇಶವ ಜೋಷಿ, ಆಯೋಜನೆ: ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ: ಜೆ.ಎಸ್.ಎಸ್ ಸಭಾಂಗಣ, ಸಂಜೆ 4.30



ಬನ್ನಂಜೆ

ಜೆ ಆ್ಯಂಡ್ ಕೆ ಬ್ಯಾಂಕ್: ಕ್ಲಸ್ಟರ್ ಕಚೇರಿ ಉದ್ಘಾಟನೆ

ಬೆಂಗಳೂರು: ಹೆಚ್ಚಿನ ಕಾರ್ಯದಕ್ಷತೆ ಹಾಗೂ ಉತ್ಪಾದಕತೆ ಸಾಧಿಸುವ ಉದ್ದೇಶದಿಂದ ಜೆ ಆ್ಯಂಡ್ ಕೆ ಬ್ಯಾಂಕ್ ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದ ಕ್ಲಸ್ಟರ್ ಕಚೇರಿಯನ್ನು ಉದ್ಘಾಟಿಸಿದೆ.

ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಬಲದೇವ್ ಪ್ರಕಾಶ್ ಅವರು ಕಚೇರಿಯನ್ನು ಮಂಗಳವಾರ ಉದ್ಘಾಟಿಸಿದರು. ‘ಕ್ಲಸ್ಟರ್ ಕಚೇರಿಯ ಉದ್ಘಾಟನೆಯು ಬ್ಯಾಂಕ್‌ನ ವಹಿವಾಟುಗಳಲ್ಲಿ ಸ್ವಾಗತಾರ್ಹ ಬದಲಾವಣೆಗೆ ಕಾರಣವಾಗುತ್ತದೆ’ ಎಂದು ಪ್ರಕಾಶ್ ಹೇಳಿದರು.

ಆರೋಪಿಗಳು ಪ್ರಭಾವಿ: ವಕೀಲರ ಸಂಘದ ಆಕ್ಷೇಪ

ಸಂಘರ್ಷಕ್ಕೆ ಕಾರಣ ಹಲ್ಲೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಕೀಲರ ಸಂಘದ ಮಾಜಿ ಖಜಾಂಚಿ ಎಚ್.ವಿ.ಪ್ರವೀಣ್ ಗೌಡ ಅವರ ಮೇಲೆ ಹಲ್ಲೆ ನಡೆಸಿದ ಆರೋಪಿಗಳ ಜಾಮೀನು ಅರ್ಜಿಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸುವುದಕ್ಕೆ ಬೆಂಗಳೂರು ವಕೀಲರ ಸಂಘ ಆಕ್ಷೇಪ ವ್ಯಕ್ತಪಡಿಸಿದ ಘಟನೆಗೆ ಸಿಟಿ ಸಿವಿಲ್ ಕೋರ್ಟ್ ಮಂಗಳವಾರ ಸಾಕ್ಷಿಯಾಯಿತು.

ಜಾಮೀನು ಕೋರಿ ಆರೋಪಿಗಳಾದ ರಂಗನಾಥ್ ಮತ್ತು ರಾಕೇಶ್ ಸಲ್ಲಿಸಿರುವ ಅರ್ಜಿಗಳನ್ನು ಸಿಟಿ ಸಿವಿಲ್ ಕೋರ್ಟ್‌ನ 59ನೇ ನ್ಯಾಯಾಲಯದ ನ್ಯಾಯಾಧೀಶ ಎನ್.ಕೃಷ್ಣಯ್ಯ ವಿಚಾರಣೆಗೆ ನಿಗದಿಪಡಿಸಿದ್ದರು. ಆದರೆ, ಅರ್ಜಿದಾರರ ಪರ ವಕೀಲ ಸಿ.ಎಚ್. ಹನುಮಂತರಾಯ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಹಾಜರಾಗಿದ್ದನ್ನು ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಬಲವಾಗಿ ಆಕ್ಷೇಪಿಸಿದರು.

'ಆರೋಪಿಗಳಿಗೆ ವಿಐಪಿ ಆತಿಥ್ಯ ನೀಡಲಾಗುತ್ತಿದೆ. ಅವರಿಗೆ ವಿಶೇಷ ಅವಕಾಶ ಯಾಕೆ, ಈ ಅರ್ಜಿ ವಿಚಾರಣೆ ಮುಕ್ತ ಕಲಾಪದಲ್ಲೇ ನಡೆಯಲಿ' ಎಂದು ಆಗ್ರಹಿಸಿದರು. ಇದರಿಂದಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಸಲ್ಲಿಸಬೇಕಾಗಿದ್ದ ತಕರಾರು ಸಲ್ಲಿಸದೇ ಹೋದರು. ಈ ಸಂದರ್ಭ ಉಂಟಾದ ಗುಜುಗುಜು ಮಧ್ಯದಲ್ಲೇ ನ್ಯಾಯಾಧೀಶರು ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿದರು.

ಮುಖ್ಯಾಂಶಗಳು

- ಆರೋಪಿಗಳ ಪರ ವಕಾಲತ್ತಿಗೆ ವಿರೋಧ
- ಸಿ.ಎಚ್.ಹನುಮಂತರಾಯ ವಿರುದ್ಧ ಸಂಘದ ತಕರಾರು
- ಹಲ್ಲೆಗೊಳಗಾದವರು ಸಂಘದ ಮಾಜಿ ಖಜಾಂಚಿ



ಪ್ರಕರಣವೇನು?: ಎಚ್.ವಿ. ಪ್ರವೀಣ್ ಗೌಡ ಜುಲೈ 5ರಂದು ರಾತ್ರಿ 11 ಗಂಟೆ ವೇಳೆ ಬೈಕಿನಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದಿನ ಸರ್ಕಲ್‌ನಲ್ಲಿ ಸಿಗ್ನಲ್ ದಾಟಬೇಕಿತ್ತು. ಆಗ ಅವರ ಬಲ ಬದಿಯಲ್ಲಿ ಸಿಗ್ನಲ್ ತೆರವಿಗಾಗಿ ಕಾಯುತ್ತಾ ನಿಂತಿದ್ದ ಬೆಂಜ್ ಕಾರಿನಲ್ಲಿದ್ದ ಅಪರಿಚಿತರ ಜೊತೆ ವಾಗ್ವಾದ ನಡೆದಿತ್ತು. ಬೈಕ್ ಕಾರಿಗೆ ತಗುಲಿದೆ ಎಂಬ ಕಾರಣಕ್ಕೆ ಪರಸ್ಪರ ಕೈಕೈ ಮಿಲಾಯಿಸಿಕೊಂಡ ಪರಿಣಾಮ ಪ್ರವೀಣ್ ಗೌಡ ಅವರ ಒಂದು ಹಲ್ಲು ಮುರಿದಿತ್ತು. ಈ ಸಂಬಂಧ ಅವರು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಮೊದಲಿಗೆ, 'ಪೊಲೀಸರು ದೂರು ದಾಖಲಿಸಿಕೊಳ್ಳಲು ವಿಳಂಬ ಮಾಡಿದ್ದಾರೆ' ಎಂದು ಆಕ್ಷೇಪಿಸಿದ್ದ ಬೆಂಗಳೂರು ವಕೀಲರ ಸಂಘ, ಕಬ್ಬನ್ ಪಾರ್ಕ್ ಸೆಂಟ್ರಲ್ ಡಿಸಿಪಿಗೆ ವಿಷಯ ಮನದಟ್ಟು ಮಾಡಿ; 'ದೂರು ದಾಖಲಿಸಿಕೊಳ್ಳದೇ ಹೋದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸುತ್ತೇವೆ' ಎಂದು ಎಚ್ಚರಿಸಿತ್ತು. ಇದರಿಂದ ಪೊಲೀಸರು ಅಪರಿಚಿತ ಆರೋಪಿಗಳ ವಿರುದ್ಧ ಐಪಿಸಿ ಕಲಂ 341 (ವ್ಯಕ್ತಿಯ ಚಲನೆಗೆ ಅಡ್ಡಿಪಡಿಸುವುದು), 326 (ಗಂಭೀರ ಗಾಯಗೊಳಿಸುವುದು) ಅಂತೆಯೇ 34ರ (ಸಮಾನ ಮನಸ್ಕರಾಗಿ ಮಾಡು) ಅನುಸಾರ ದೂರು ದಾಖಲಿಸಿದ್ದರು.

ಜುಲೈ 13ರಂದು ಆರೋಪಿಗಳನ್ನು ಬಂಧಿಸಿದ್ದ ಪೊಲೀಸರು ಅಂದು ಅವರನ್ನು ಕೋರ್ಟ್‌ಗೆ ಹಾಜರುಪಡಿಸಲು ಮುಂದಾದಾಗ ಕೋರ್ಟ್ ಹಾಲ್‌ನಲ್ಲಿ ಸಾಕಷ್ಟು ವಕೀಲರು ಜಮಾಯಿಸಿದ್ದರು. ಇದರಿಂದಾಗಿ ಮ್ಯಾಜಿಸ್ಟ್ರೇಟ್ ಮನೆಯಲ್ಲಿ ಹಾಜರುಪಡಿಸಲಾಯಿತು. ಆರೋಪಿಗಳನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ನಂತರ ಆರೋಪಿಗಳ ಪರ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಹಾಜರಾಗಿ, ಕಳೆದ ತಿಂಗಳು 25ರಂದು ಜಾಮೀನು ಅರ್ಜಿ ಸಲ್ಲಿಸಿದ್ದರು.

ಈ ಸಂದರ್ಭದಲ್ಲಿ ಸ್ವತಃ ವಿವೇಕ್ ರೆಡ್ಡಿ ಕೋರ್ಟ್ ಹಾಲ್‌ನಲ್ಲಿ ಹಾಜರಿದ್ದು, 'ಈ ಪ್ರಕರಣದಲ್ಲಿ ವಕೀಲರು ಹಲ್ಲೆಗೊಳಗಾಗಿದ್ದಾರೆ. ದೂರು ಕೊಟ್ಟು ಎಂಟು ದಿನವಾದರೂ ಪೊಲೀಸರು ಪ್ರಕರಣ ಎಂದು ದಾಖಲಿಸಿರಲಿಲ್ಲ. ಪೊಲೀಸರು ತನಿಖೆ ಮಾಡಿ ಆರೋಪಿಗಳನ್ನು ಬಂಧಿಸಲೇ ಇಲ್ಲ. ಪ್ರವೀಣ್ ಗೌಡ ಅವರೇ ಆರೋಪಿಗಳನ್ನು ಪತ್ತೆ ಹಚ್ಚಿಕೊಟ್ಟಿದ್ದಾರೆ. ಈ ಪ್ರಕರಣದಲ್ಲಿ ಆರೋಪಿಗಳು ಪ್ರಭಾವಿಗಳು ಎಂಬ ಕಾರಣಕ್ಕೆ ಪೊಲೀಸರು ಪೂರ್ವಗ್ರಹ ಪೀಡಿತರಾಗಿದ್ದಾರೆ' ಎಂದು ದೂರಿದ್ದರು.

ಇದಕ್ಕೆ ಹನುಮಂತರಾಯ ಅವರು ವಿವೇಕ್ ರೆಡ್ಡಿ ಅವರಿಗೆ, 'ಈ ಕೇಸಿನಲ್ಲಿ ನೀವು ಫಿರ್ಯಾದುದಾರರಲ್ಲ, ಹಲ್ಲೆಗೆ ಒಳಗಾದವರಲ್ಲ, ಪ್ರಾಸಿಕ್ಯೂಟರ್ರೂ ಅಲ್ಲ, ಫಿರ್ಯಾದುದಾರರ ಪರ ವಕೀಲರೂ ಅಲ್ಲ. ಪ್ರಕರಣವನ್ನು ಕುರಿತು ಏನೊಂದನ್ನೂ ಹೇಳುವಂತಹ ಅಥವಾ ಪ್ರಕರಣದ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿಲ್ಲ. ರಾಜಕೀಯ ಲಾಭದ ಕಾರಣಕ್ಕಾಗಿ ಬರುತ್ತಿದ್ದೀರಿ' ಎಂದು ದೂರಿದ್ದರು.

ಈ ಸಂದರ್ಭ ಹನುಮಂತರಾಯ ಮತ್ತು ವಿವೇಕ್ ರೆಡ್ಡಿ ಮಧ್ಯ ಮಾತಿನ ಚಕಮಕಿ ನಡೆದಿತ್ತು. ನಂತರ ರಿಜಿಸ್ಟ್ರಾರ್ ಅವರು ಈ ಪ್ರಕರಣ ವಿಡಿಯೊ ಕಾನ್ಫರೆನ್ಸ್ ಮೂಲಕವೇ ನಡೆಯಲಿ ಎಂದು ಹನುಮಂತರಾಯ ಅವರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದರು.

ದಿವ್ಯಾ ಸಲ್ಲಿಸಿದ್ದ ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ವಿಜ್ಞಾನ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರಕ್ಕೆ ಡಾ.ಎನ್.ರಾಮಕೃಷ್ಣ ರೆಡ್ಡಿ ಅವರನ್ನು ವಿಶೇಷ ಅಧಿಕಾರಿಯಾಗಿ ನೇಮಿಸಿದ್ದನ್ನು ಪ್ರಶ್ನಿಸಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಆರೋಪಿಯಲ್ಲಿ ಒಬ್ಬರಾದ ದಿವ್ಯಾ ರಾಜೇಶ್ ಹಾಗರಗಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.



ಹಂಗಾಮಿ ಮುಖ್ಯ ನ್ಯಾಯ ಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ಅರ್ಜಿಯ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ದಿವ್ಯಾ ಪರ ವಕೀಲರು, 'ಅರ್ಜಿದಾರರನ್ನು ಯಾವ ಕಾರಣಕ್ಕಾಗಿ ಬಂಧಿಸಲಾಗಿದೆ ಎಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಲಾಗುವುದು. ಅದಕ್ಕಾಗಿ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಒಪ್ಪದ ನ್ಯಾಯಪೀಠ, 'ದಿವ್ಯಾ, ಕರ್ನಾಟಕ ನರ್ಸಿಂಗ್ ಕೌನ್ಸಿಲ್ ನಾಮ ನಿರ್ದೇಶಿತ ಸದಸ್ಯೆಯಾಗಿದ್ದಾರೆ. ಆದರೆ, ಅವರು ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿಯಾಗಿ ಈಗ ಜೈಲಿನಲ್ಲಿದ್ದಾರೆ. ಹಾಗಾಗಿ, ಸೇವೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಈ ಅರ್ಜಿಯನ್ನು ಪರಿಗಣಿಸಲು ಸಾಧ್ಯವಿಲ್ಲ' ಎಂದು ಅರ್ಜಿ ವಜಾಗೊಳಿಸಿತು.

ಪಿಎಸ್‌ಐ ನೇಮಕಾತಿ ಹಗರಣದ 18ನೇ ಆರೋಪಿಯಾದ ದಿವ್ಯಾ, ಏ.29ರಂದು ಪುಣೆಯಲ್ಲಿ ಸೆರೆ ಸಿಕ್ಕಿದ್ದು, ಸದ್ಯ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿದ್ದಾರೆ. ಪ್ರಕರಣದ ಸಂಬಂಧ ಸಿಐಡಿ ಆಗಲೇ 2 ಸಾವಿರಕ್ಕೂ ಹೆಚ್ಚು ಪುಟಗಳ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದೆ.

484 ಮಕ್ಕಳು ನಾಪತ್ತೆ: ಹೈಕೋರ್ಟ್‌ಗೆ ವರದಿ

ಬೆಂಗಳೂರು: 'ರಾಜ್ಯದಲ್ಲಿನ ವಿವಿಧ ಬಾಲಮಂದಿರಗಳಿಂದ ಈವರೆಗೆ 484 ಮಕ್ಕಳು ನಾಪತ್ತೆಯಾಗಿದ್ದಾರೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತು ಕೋಲಾರದ ಸಾಮಾಜಿಕ ಕಾರ್ಯಕರ್ತ ಕೆ.ಸಿ. ರಾಜಣ್ಣ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ನ್ಯಾಯಪೀಠಕ್ಕೆ ಅನುಪಾಲನಾ ವರದಿ ನೀಡಿದರು. ವರದಿ ದಾಖಲಿಸಿಕೊಂಡ ನ್ಯಾಯಪೀಠ, 'ಈ ವರದಿಯ ನಂತರ ಕೈಗೊಂಡಿರುವ ಕ್ರಮಗಳ ವಸ್ತುಸ್ಥಿತಿ ವರದಿಯನ್ನು 4 ವಾರಗಳಲ್ಲಿ ಸಲ್ಲಿಸಿ' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ವಕೀಲ ಎಸ್. ಉಮಾಪತಿ ವಾದ ಮಂಡಿಸಿದರು.

ಸರ್ಕಾರದ ಅಧೀನದಲ್ಲಿರುವ ಬಾಲ ಮಂದಿರಗಳಿಂದ ಕೆಲ ವರ್ಷಗಳಲ್ಲಿ 141 ಮಕ್ಕಳು ನಾಪತ್ತೆಯಾಗಿದ್ದಾರೆ' ಎಂದು ಅರ್ಜಿದಾರರು ಆರೋಪಿಸಿದ್ದರು. 'ನಾಪತ್ತೆಯಾದ ಮಕ್ಕಳನ್ನು ಪತ್ತೆ ಹಚ್ಚಲು ಕೈಗೊಂಡಿರುವ ಕ್ರಮಗಳ ವರದಿ ಸಲ್ಲಿಸಿ' ಎಂದು 2022ರ ಫೆ. 22ರಂದು ನ್ಯಾಯಪೀಠ ಆದೇಶಿಸಿತ್ತು.

4 ವರ್ಷ ಜೈಲು ವಿಧಿಸಿದ ಕೋರ್ಟ್: ಪತ್ನಿಗೂ 3 ವರ್ಷ ಶಿಕ್ಷೆ

ನಿವೃತ್ತ ಪೊಲೀಸ್ ಅಧಿಕಾರಿಗೆ ₹ 50 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಪ್ರಕರಣದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಶಮಿ ಉರ್ ರೆಹಮಾನ್ ಅಪರಾಧಿ ಎಂದು ಸಾರಿರುವ ನ್ಯಾಯಾಲಯ, ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ.

ಅಧಿಕಾರಿಗೆ ₹ 50 ಲಕ್ಷ ದಂಡ ವಿಧಿಸುವುದರ ಜತೆಗೆ, ಅಕ್ರಮ ಆಸ್ತಿ ಸಂಪಾದನೆಗೆ ನೆರವು ನೀಡಿದ ಅಪರಾಧಕ್ಕಾಗಿ ನಿವೃತ್ತ ಅಧಿಕಾರಿಯ ಪತ್ನಿಗೆ ಮೂರು ವರ್ಷ ಸಾಮಾನ್ಯ ಜೈಲು ಶಿಕ್ಷೆ ವಿಧಿಸಲಾಗಿದೆ.

ಶಮಿ ಉರ್ ರೆಹಮಾನ್ 2006ರಲ್ಲಿ ಸಿಸಿಬಿ ಇನ್‌ಸ್ಪೆಕ್ಟರ್ ಆಗಿದ್ದರು. ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಮೇಲೆ ಅವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದ ಲೋಕಾಯುಕ್ತ ಪೊಲೀಸರು, 2006ರ ಮಾರ್ಚ್ 14ರಂದು ದಾಳಿಮಾಡಿ ಶೋಧ ನಡೆಸಿದ್ದರು.

₹ 79.79 ಲಕ್ಷದಷ್ಟು (ಶೇಕಡ 230.96ರಷ್ಟು) ಅಕ್ರಮ ಆಸ್ತಿ ಹೊಂದಿದ ಆರೋಪದಡಿ ಶಮಿ ಉರ್ ರೆಹಮಾನ್ ಮತ್ತು ಅವರ ಪತ್ನಿ ಬಿಲ್‌ಕಿಶ್ ಜಹಾನ್ ಅಲಿಯಾಸ್ ಸರ್ತಾಜ್ ಬೇಗಂ ವಿರುದ್ಧ ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆಯನ್ನು ಜುಲೈ 30ರಂದು ಪೂರ್ಣಗೊಳಿಸಿದ ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್, 'ಶಮಿ ಉರ್ ರೆಹಮಾನ್ ದಂಪತಿ ಅಪರಾಧಿಗಳು' ಎಂದು ಸಾರಿದರು.

ನಿವೃತ್ತ ಪೊಲೀಸ್ ಅಧಿಕಾರಿಗೆ ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 50 ಲಕ್ಷ ದಂಡ ವಿಧಿಸಿದ ನ್ಯಾಯಾಲಯ, ದಂಡ ಪಾವತಿಗೆ ತಪ್ಪಿದಲ್ಲಿ ಆರು ತಿಂಗಳ ಸಾಮಾನ್ಯ ಶಿಕ್ಷೆ ವಿಧಿಸುವಂತೆ ಆದೇಶಿಸಿತು. ಪತ್ನಿಗೆ ಮೂರು ವರ್ಷಗಳ ಸಾಮಾನ್ಯ ಜೈಲು ಶಿಕ್ಷೆ ಮತ್ತು ₹ 50,000 ದಂಡ ವಿಧಿಸಿತು. ದಂಡ ಪಾವತಿಗೆ ತಪ್ಪಿದಲ್ಲಿ ಎರಡು ತಿಂಗಳ ಸಾಮಾನ್ಯ ಜೈಲು ಶಿಕ್ಷೆ ವಿಧಿಸುವಂತೆ ಆದೇಶಿಸಿತು.

ಲೋಕಾಯುಕ್ತ ಪೊಲೀಸರು ದಾಳಿಮಾಡಿದ ಸಂದರ್ಭದಲ್ಲಿ ಸಿಸಿಬಿ ಇನ್‌ಸ್ಪೆಕ್ಟರ್ ಹುದ್ದೆಯಲ್ಲಿ ಶಮಿ ಉರ್ ರೆಹಮಾನ್, ನಂತರ ಡಿವೈಎಸ್‌ಪಿ ಹುದ್ದೆಗೆ ಬಡ್ತಿ ಪಡೆದು ನಿವೃತ್ತರಾಗಿದ್ದರು.



ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ವಾರ್ಡ್ ವ್ಯಾಪ್ತಿಯ ಕಟ್ಟಿಗೇನಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಕೆ.ಎ.ಮುನೀಂದ್ರಕುಮಾರ್ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಿದರು. ಕೋಗಿಲು ವಾರ್ಡ್ ಬಿಜೆಪಿ ಅಧ್ಯಕ್ಷ ಗೋವಿಂದರಾಜ್, ಮುಖಂಡರಾದ ಆಂಜಿನಪ್ಪ, ಶ್ರೀನಿವಾಸ್, ಸುದರ್ಶನ್, ಗಂಗಾಧರ್ ಇದ್ದರು.

ಕಟ್ಟಿಗೇನಹಳ್ಳಿ: ಬಡವರಿಗೆ ಸೌಲಭ್ಯ ವಿತರಣೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ವಾರ್ಡ್ ವ್ಯಾಪ್ತಿಯ ಕಟ್ಟಿಗೇನಹಳ್ಳಿಯಲ್ಲಿ ಬಿಜೆಪಿ ಮುಖಂಡ ಕೆ.ಎ.ಮುನೀಂದ್ರಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಡಜನರಿಗೆ ಸೌಲಭ್ಯಗಳನ್ನು ವಿತರಿಸಲಾಯಿತು.

ಒಟ್ಟು 51 ಹೊಲಿಗೆಯಂತ್ರ, 30 ತಳ್ಳುಗಾಡಿ, 3 ಸೆಲೂನ್ ಕುರ್ಚಿ ಹಾಗೂ 200 ಹೆಲ್ಮೆಟ್‌ಗಳನ್ನು ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಮುನೀಂದ್ರಕುಮಾರ್, 'ಮನೆಗಳಲ್ಲಿ ಸಣ್ಣ ವೃತ್ತಿ ಆರಂಭಿಸಲು ಅನುಕೂಲವಾಗುವಂತೆ ಮಹಿಳೆಯರಿಗೆ ಹೊಲಿಗೆ ಯಂತ್ರ ಹಾಗೂ ಸುರಕ್ಷಿತವಾಗಿ ವಾಹನ ಚಲಾಯಿಸಲೆಂದು ಯುವಕರಿಗೆ ಹೆಲ್ಮೆಟ್‌ಗಳನ್ನು ನೀಡಲಾಗಿದೆ ಎಂದರು.

ಕೋಗಿಲು ವಾರ್ಡ್ ಬಿಜೆಪಿ ಅಧ್ಯಕ್ಷ ಗೋವಿಂದರಾಜ್, ಮುಖಂಡರಾದ ಆಂಜಿನಪ್ಪ, ಶ್ರೀನಿವಾಸ್, ಸುದರ್ಶನ್, ಗಂಗಾಧರ್ ಉಪಸ್ಥಿತರಿದ್ದರು.

ಚಾಣಕ್ಯ ವಿ.ವಿಗೆ ನೋಟಿಸ್

ಬೆಂಗಳೂರು: 'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) ಸೇರಿದ ಬೆಲೆಬಾಳುವ ಜಮೀನನ್ನು ಕಾನೂನುಬಾಹಿರವಾಗಿ ಖಾಸಗಿ ವಿಶ್ವವಿದ್ಯಾಲಯ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿದೆ' ಎಂದು ಆರೋಪಿಸಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ (ಪಿಐಎಲ್) ಸಂಬಂಧಿಸಿದಂತೆ ಕೆಐಎಡಿಬಿ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ವಕೀಲೆ ಸುಧಾ ಕಾಟ್ವಾ ಸಲ್ಲಿಸಿರುವ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಪ್ರಕರಣದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕೆಐಎಡಿಬಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಏನಿದು ಅರ್ಜಿ?: 'ಚಾಣಕ್ಯ ವಿಶ್ವವಿದ್ಯಾಲಯ ನಿರ್ಮಾಣದ ಉದ್ದೇಶಕ್ಕಾಗಿ ಪ್ರಕರಣದ ನಾಲ್ಕನೇ ಪ್ರತಿವಾದಿಯಾದ ಸಮಾಜ ವಿಜ್ಞಾನಗಳ ಅಧ್ಯಯನ ಕೇಂದ್ರಕ್ಕೆ (ಸೆಸ್) ರಾಜ್ಯ ಸರ್ಕಾರ 2021ರ ಏಪ್ರಿಲ್ 28ರಂದು ಹೊರಡಿಸಿರುವ ಆದೇಶ ರದ್ದುಗೊಳಿಸಬೇಕು. ಸೆಸ್ ಒಂದು ಖಾಸಗಿ ಸಂಸ್ಥೆಯಾಗಿದ್ದು, ಈ ಸಂಸ್ಥೆಯ ವತಿಯಿಂದ ಖಾಸಗಿ ವಿಶ್ವವಿದ್ಯಾಲಯ ನಿರ್ಮಿಸಲು 116 ಎಕರೆ 16 ಗುಂಟೆ ಜಮೀನನ್ನು ನೀಡಿರುವುದು ಕಾನೂನುಬಾಹಿರ' ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

'ದೇವನಹಳ್ಳಿ ಕೈಗಾರಿಕಾ ವಲಯದ ವ್ಯಾಪ್ತಿಯಲ್ಲಿ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಎರಡನೇ ಹಂತದ ನಿರ್ಮಾಣಕ್ಕಾಗಿ ಕೆಐಎಡಿಬಿ ಕಾಯ್ದೆ–1966ರ ಅನುಸಾರ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಈ ಜಮೀನು ಬಹುಕೋಟಿ ರೂಪಾಯಿಗಳ ಮೌಲ್ಯ ಹೊಂದಿದೆ. ಆದರೆ, ರಾಜ್ಯ ಸರ್ಕಾರ ಜಮೀನು ಮಂಜೂರು ಮಾಡುವಲ್ಲಿ ಯಾವುದೇ ಪಾರದರ್ಶಕ ಪ್ರಕ್ರಿಯೆ ಅನುಸರಿಸದೆ ರಿಯಾಯ್ತಿ ದರದಲ್ಲಿ ನೀಡಿದೆ. ಈ ಜಮೀನು ಮಂಜೂರು ಮಾಡಿರುವುದು ಕೆಐಎಡಿಬಿ ರಿಯಲ್ ಎಸ್ಟೇಟ್ ಏಜೆನ್ಸಿ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ತೋರಿಸುತ್ತಿದೆ. ಆದ್ದರಿಂದ, ಸರ್ಕಾರ ಜಮೀನು ಮಂಜೂರು ಮಾಡಿರುವ ಆದೇಶ ರದ್ದುಗೊಳಿಸಬೇಕು' ಎಂದು ಕೋರಿದ್ದಾರೆ. ಅರ್ಜಿದಾರರ ಪರ ವಕೀಲ ಎಸ್.ಉಮಾಪತಿ ಹಾಜರಿದ್ದರು.

ರಕ್ತಕ್ಕಿಂತಲೂ ರೊಟ್ಟಿಯೇ ದುಬಾರಿ...!

ತಬರನ ಕಥೆಗೆ ಹೈಕೋರ್ಟ್ ಮುಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಬರನ ಕಥೆಯನ್ನು ನೆನಪಿಸುವಂತೆ ನಿವೃತ್ತ ಸರ್ಕಾರಿ ನೌಕರರೊಬ್ಬರು ಪಿಂಚಣಿಗಾಗಿ ಕಾಯುತ್ತಿರುವ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಕಿವಿ ಹಿಂಡಿರುವ ಹೈಕೋರ್ಟ್, 'ರಕ್ತಕ್ಕಿಂತ ರೊಟ್ಟಿಯೇ ದುಬಾರಿಯಾಗಿರುವ ಇಂದಿನ ದಿನಮಾನದಲ್ಲಿ ಇಂತಹ ವಿದ್ಯಮಾನ ನಡೆಯುತ್ತಿರುವುದು ಸರ್ವಥಾ ಸಹನೀಯವಲ್ಲ' ಎಂದು ಕಿಡಿಕಾರಿದೆ.

'ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ನೀಡಿರುವ ಆದೇಶ ರದ್ದುಗೊಳಿಸಬೇಕು' ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಮತ್ತು ನ್ಯಾಯಮೂರ್ತಿ ಪಿ.ಕೃಷ್ಣ ಭಟ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತು ಆದೇಶಿಸಿದೆ.

'ಅರ್ಜಿದಾರ ಎಸ್.ಎಸ್. ಜಾಧವ್ (63) ಸುದೀರ್ಘ 35 ವರ್ಷ ಸರ್ಕಾರಿ ಸೇವೆ ಸಲ್ಲಿಸಿದ್ದಾರೆ. ಅವರಿಗೆ ಸೇವಾ ಸೌಲಭ್ಯ ಕಲ್ಪಿಸುವುದು ಎಂದರೆ ಸರ್ಕಾರ ಅವರಿಗೆ ಉಪಕಾರ ಮಾಡಿದಂತಲ್ಲ. ಜೀವನದ ಸಂಧ್ಯಾಕಾಲದಲ್ಲಿರುವ ಅವರು, ಪಿಂಚಣಿಗಾಗಿ ಇನ್ನೆಷ್ಟು ದಿನ ಕಾನೂನು ಹೋರಾಟ ಮಾಡಬೇಕು' ಎಂದು ಖಾರವಾಗಿ ಪ್ರಶ್ನಿಸಿದೆ.


'ಎಂಟು ವಾರಗಳಲ್ಲಿ ಜಾಧವ್ ಅವರಿಗೆ ಸಂಭಾವ್ಯ ಪಿಂಚಣಿ ಹಣ ಮಂಜೂರು ಮಾಡಬೇಕು. ವಿಳಂಬ ಮಾಡಿದರೆ ಶೇ 2ರಷ್ಟು ಬಡ್ಡಿ ಪಾವತಿಸಬೇಕು. ಆ ಮೊತ್ತವನ್ನು ತಪ್ಪೆಸಗಿದ ಅಧಿಕಾರಿಯಿಂದ ವಸೂಲಿ ಮಾಡಬೇಕು' ಎಂದು ಸರ್ಕಾರಕ್ಕೆ ತಾಕೀತು ಮಾಡಿದೆ.

ಪ್ರಕರಣವೇನು?: ಜಾಧವ್ 1983ರಲ್ಲಿ ಕರ್ನಾಟಕ ನೀರಾವರಿ ನಿಗಮದ ಕಾರ್ಯಕಾರಿ ಎಂಜಿನಿಯರ್ ಕಚೇರಿಯಲ್ಲಿ ದಿನಗೂಲಿ ನೌಕರರಾಗಿ ನೇಮಕಗೊಂಡಿದ್ದರು. 1993ರಲ್ಲಿ ಅವರ ಸೇವೆ ಕಾಯಂಗೊಂಡಿತ್ತು. 2018ರಲ್ಲಿ ನಿವೃತ್ತಿ ಹೊಂದಿದ್ದರು. ಸೇವೆಗೆ ಅನುಗುಣವಾಗಿ ಪಿಂಚಣಿ ಸೇರಿದಂತೆ ಸೇವಾ ಸೌಲಭ್ಯ ನೀಡಲು ಸರ್ಕಾರಕ್ಕೆ ಕೋರಿದ್ದರು. ಆದರೆ, 2013ರಲ್ಲಿ ಕಾಯಾಮಾತಿ ಆದೇಶ ಹಿಂಪಡೆದಿದ್ದ ಕಾರಣ ಸರ್ಕಾರ ಅವರಿಗೆ ಪಿಂಚಣಿ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ಜಾಧವ್ ಕೆಎಟಿಗೆ ಅರ್ಜಿ ಸಲ್ಲಿಸಿದ್ದರು.

'ಜಾಧವ್ ಅವರಿಗೆ ಎರಡು ತಿಂಗಳಲ್ಲಿ ಪಿಂಚಣಿ ಪಾವತಿಸಬೇಕು' ಎಂದು ಕೆಎಟಿ 2021ರ ಅಕ್ಟೋಬರ್ 29ರಂದು ಸರ್ಕಾರಕ್ಕೆ ಆದೇಶಿಸಿತ್ತು.

ಜವಾಹಿರಿ ಹತ್ಯೆ: ನಿಖರ ದಾಳಿಯ ಹಿಂದೆ ಹತ್ತು ವರ್ಷಗಳ ಶ್ರಮ

ಅಯ್‌ಮನ್ ಅಲ್ ಜವಾಹಿರಿ ಹತ್ಯೆ ಕಾರ್ಯಾಚರಣೆಯು ಅತ್ಯಂತ ಸುದೀರ್ಘವಾದುದಾಗಿತ್ತು ಎಂದು ಅಮೆರಿಕದ ಸಿಐಎ ಅಧಿಕಾರಿಗಳು ಹೇಳಿದ್ದಾರೆ. ಜವಾಹಿರಿ ಹತ್ಯೆಗೆ ಕಾರ್ಯಾಚರಣೆ ಆರಂಭಿಸಿ 10 ವರ್ಷಗಳಿಗೂ ಹೆಚ್ಚು ಕಾಲ ಸಂದಿದೆ. ಅಷ್ಟು ದೀರ್ಘಾವಧಿಯ ಕಾರ್ಯಾಚರಣೆ ಆಗಿದ್ದಕ್ಕೆ, ಅದರ ನಿಖರತೆ ಹೆಚ್ಚು. ಹೀಗಾಗಿಯೇ ನಾಗರಿಕರು ಮತ್ತು ಜವಾಹಿರಿ ಕುಟುಂಬದ ಸದಸ್ಯರಲ್ಲಿ ಯಾರೊಬ್ಬರಿಗೂ ಗಾಯವಾಗದಂತೆ ಆತನನ್ನು ಕೊಲ್ಲಲು ಸಾಧ್ಯವಾಗಿದೆ ಎಂದು ಸಿಐಎ ಅಧಿಕಾರಿಗಳು ಹೇಳಿದ್ದಾರೆ. ಈ ಕಾರ್ಯಾಚರಣೆಯ ಪ್ರಮುಖ ಘಟ್ಟಗಳು ಹೀಗಿವೆ



1. 2011–12ರಲ್ಲಿ, ಜವಾಹಿರಿಯನ್ನು ಪತ್ತೆ ಮಾಡಲು ಸಿಐಎ ಅಧಿಕಾರಿಗಳನ್ನು ಅಫ್ಗಾನಿಸ್ತಾನದ ವಿವಿಧೆಡೆ ನಿಯೋಜಿಸಲಾಗಿತ್ತು. ಈ ಅಧಿಕಾರಿಗಳು, ಜವಾಹಿರಿ ಸಂಪರ್ಕದಲ್ಲಿದ್ದ ಅಲ್‌ಕೈದಾದ ನಾಯಕರು ಮತ್ತು ಸದಸ್ಯರ ಜಾಲದ ಬೆನ್ನು ಹತ್ತಿದ್ದರು. ಜವಾಹಿರಿ ಅಜ್ಞಾತವಾಗಿದ್ದ ಕಾರಣ, ಈ ಜಾಲದ ಮೂಲಕವೇ ಆತನ ಇರುವಿಕೆಯನ್ನು ಪತ್ತೆಹಚ್ಚಬೇಕಿತ್ತು
2. ಈ ಜಾಲದ ಬೆನ್ನುಹತ್ತಿದ ಪರಿಣಾಮವಾಗಿ ಜವಾಹಿರಿಯ ಪತ್ನಿ ಮತ್ತು ಕುಟುಂಬದ ಸದಸ್ಯರ ಎಸರು ಮತ್ತು ಕುಟುಂಬದ ಮಾಹಿತಿಯನ್ನು ಕಲೆಹಾಕಲಾಗಿತ್ತು. ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ಪಡೆಯುವ ಕೆಲವೇ ತಿಂಗಳು ಮೊದಲು, ಕಾಬೂಲ್‌ನ ಕೇಂದ್ರ ಭಾಗದಲ್ಲಿರುವ ಶೇರ್‌ಪುರ್ ಬಡಾವಣೆಯಲ್ಲಿ ಜವಾಹಿರಿಯ ಪತ್ನಿ ಮತ್ತು ಕುಟುಂಬದ ಸದಸ್ಯರು ಪತ್ತೆಯಾಗಿದ್ದರು
3. ಶೇರ್‌ಪುರದ ನಿವಾಸಕ್ಕೆ ಭಾರಿ ಭದ್ರತೆ ಇತ್ತು. ದೊಡ್ಡ ಬಂಗಲೆಯ ಸುತ್ತ ಹತ್ತು ಅಡಿಗೂ ಎತ್ತರದ ಗೋಡೆ ಮತ್ತು ಅದರ ಮೇಲೆ ಮುಳ್ಳು ಬೇಲಿ ಅಳವಡಿಸಲಾಗಿತ್ತು. ಜವಾಹಿರಿ ಕುಟುಂಬದ ಸದಸ್ಯರ ಓಡಾಟ ಇರಲಿಲ್ಲ. ಆದರೆ ಸರಿಯಾಗಿ ವರ್ಷದ ಹಿಂದೆ ಜವಾಹಿರಿ, ಈ ಬಂಗಲೆಗೆ ಬಂದಿದ್ದ. ನಂತರ ಒಮ್ಮೆಯೂ ಆತ ಬಂಗಲೆಯಿಂದ ಹೊರಗೆ ಬಂದಿರಲಿಲ್ಲ
4. ಈ ಬಂಗಲೆಯಲ್ಲಿ ಜವಾಹಿರಿ ಇರುವುದು ಖಚಿತವಾಗಿದ್ದರೂ, ಏಕಾಏಕಿ ದಾಳಿ ನಡೆಸದೇ ಇರಲು ನಿರ್ಧರಿಸಲಾಗಿತ್ತು. ಕಾರ್ಯಾಚರಣೆ ವೇಳೆ ನಾಗರಿಕರು, ಜವಾಹಿರಿ ಕುಟುಂಬದ ಸದಸ್ಯರಿಗೆ ಹಾನಿಯಾಗಬಾರದು ಮತ್ತು ಸಾರ್ವಜನಿಕ ಸ್ವತ್ತಿಗೆ ಹಾನಿಯಾಗಬಾರದು ಎಂಬುದನ್ನು ತಲೆಯಲ್ಲಿಟ್ಟುಕೊಳ್ಳಲಾಗಿತ್ತು. ಹೀಗಾಗಿ ಜವಾಹಿರಿ ದೈನಂದಿನ ಚಟುವಟಿಕೆಗಳನ್ನು ಗಮನಿಸಲು ಆರಂಭಿಸಲಾಯಿತು
5. ಜವಾಹಿರಿ ಪ್ರತಿದಿನ ಈ ಬಂಗಲೆಯ ಬಾಲ್ಕನಿಗೆ ಬಂದು ಕೆಲ ಗಂಟೆಗಳನ್ನು ಕಳೆಯುತ್ತಿದ್ದ. ಪ್ರತಿದಿನ ಅವನ ಕುಟುಂಬದ ಸದಸ್ಯರೂ ಅವನ ಜತೆಗೆ ಇರುತ್ತಿದ್ದರು. ಆದರೆ, ಕೆಲ ಸಮಯ ಆತ ಏಕಾಂಗಿಯಾಗಿರುತ್ತಿದ್ದ. ಆತ ಏಕಾಂಗಿಯಾಗಿ ಇರುವ ಸಮಯದಲ್ಲೇ ದಾಳಿ ನಡೆಸಬೇಕು ಎಂದು ಯೋಜಿಸಲಾಯಿತು
6. ಜವಾಹಿರಿಯ ಇರುವಿಕೆ, ಆತನ ದೈನಂದಿನ ಚಟುವಟಿಕೆ ಮತ್ತು ಕಾರ್ಯಾಚರಣೆಯ ಸಾಧ್ಯತೆಗಳ ಬಗ್ಗೆ ಸಿಐಎ ಅಧಿಕಾರಿಗಳು ಅಮೆರಿಕದ ರಕ್ಷಣಾ ಸಚಿವಾಲಯದ ಹಿರಿಯ ಅಧಿಕಾರಿಗಳಿಗೆ 2022ರ ಏಪ್ರಿಲ್‌ನಲ್ಲಿ ಮಾಹಿತಿ ನೀಡಿದ್ದರು. ಅಧ್ಯಕ್ಷ ಜೋ ಬೈಡನ್ ಅವರಿಗೂ ಮಾಹಿತಿ ನೀಡಲಾಗಿತ್ತು. ನಂತರ ಕಾರ್ಯಾಚರಣೆ ಯೋಜನೆಯ ವಿವರಗಳನ್ನು ಅಧ್ಯಕ್ಷ ಬೈಡನ್ ಅವರಿಗೆ ಹಲವು ಬಾರಿ ನೀಡಲಾಗಿತ್ತು. 'ಈ ಮಾಹಿತಿಯನ್ನು ಕಲೆಹಾಕಿದ್ದು ಹೇಗೆ ಮತ್ತು ಅದು ಎಷ್ಟು ಸತ್ಯ' ಎಂದು ಬೈಡನ್ ಪ್ರಶ್ನಿಸಿದ್ದರು
7. ಜವಾಹಿರಿ ಉಳಿದುಕೊಂಡಿರುವ ಮನೆಯ ಮಾದರಿಯನ್ನು ರಚಿಸಿ, ಕಾರ್ಯಾಚರಣೆಯ ಪ್ರಾತ್ಯಕ್ಷಿಕೆಯನ್ನು ಬೈಡನ್ ಅವರಿಗೆ ತೋರಿಸಲಾಗಿತ್ತು. ಕಾರ್ಯಾಚರಣೆ ನಡೆಸುವ ಬಗ್ಗೆ ಬೈಡನ್ ಅವರು ತಮ್ಮ ಸಂಪುಟದ ಸದಸ್ಯರ ಜತೆ ಬುಧವಾರ ಸಮಾಲೋಚನೆ ನಡೆಸಿದ್ದರು. ಕಾರ್ಯಾಚರಣೆಯ ನಂತರ ಒದಗಬಹುದಾದ ರಾಜತಾಂತ್ರಿಕ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದರು. ನಂತರ ಕಾರ್ಯಾಚರಣೆಗೆ ಒಪ್ಪಿಗೆ ನೀಡಲಾಗಿತ್ತು
8. ಜುಲೈ 31ರ ಭಾನುವಾರ ಬೆಳಿಗ್ಗೆ 6.18ರ ಹೊತ್ತಿಗೆ, ಜವಾಹಿರಿ ಈ ಬಂಗಲೆಯ ಬಾಲ್ಕನಿಯಲ್ಲಿ ಏಕಾಂಗಿಯಾಗಿ ಇದ್ದ. ಆಗ ಡ್ರೋನ್‌ಗಳ ಮೂಲಕ 'ಹೆಲ್‌ಫೈರ್ ಆರ್‌9ಎಕ್ಸ್' ಕ್ಷಿಪಣಿಗಳನ್ನು ಉಡಾಯಿಸಲಾಯಿತು. ಕಾರ್ಯಾಚರಣೆಯಲ್ಲಿ ಜವಾಹಿರಿ ಹತನಾದ

ಆಧಾರ: ರಾಯಿಟರ್ಸ್, ಗೂಗಲ್ ನಕ್ಷೆ, ಗೂಗಲ್ ಅರ್ಥ್

ಕಾಬೂಲ್ ಹೃದಯಭಾಗದಲ್ಲಿ ಇದ್ದ ಜವಾಹಿರಿ

ಅಲ್ ಕೈದಾ ಸೇರಿದಂತೆ ಯಾವುದೇ ಉಗ್ರ ಸಂಘಟನೆಯು ಅಫ್ಗಾನಿಸ್ತಾನದಲ್ಲಿ ನೆಲೆಯೂರಲು ಅವಕಾಶ ನೀಡುವುದಿಲ್ಲ ಎಂದು ತಾಲಿಬಾನ್ ಹೇಳಿತ್ತು. ಆದರೆ, ಕಾಬೂಲ್‌ನ ಹೃದಯಭಾಗದಲ್ಲೇ ಜವಾಹಿರಿಯು ಬಂಗಲೆ ಇತ್ತು ಮತ್ತು ಆತ ಒಂದು ವರ್ಷದಿಂದ ಅಲ್ಲಿಯೇ ನೆಲೆಸಿದ್ದ ಎಂಬುದು ಈ ಕಾರ್ಯಾಚರಣೆಯಿಂದ ಬಹಿರಂಗವಾಗಿದೆ. ಜವಾಹಿರಿ ಇದ್ದ ಬಂಗಲೆಯ ಸುತ್ತ ಅಫ್ಗಾನಿಸ್ತಾನ ಸರ್ಕಾರದ ಪ್ರಮುಖ ಕಚೇರಿಗಳು, ಹಲವು ಸಚಿವಾಲಯಗಳು ಮತ್ತು ವಿವಿಧ ದೇಶಗಳ ರಾಯಭಾರ ಕಚೇರಿಗಳು ಇವೆ. ಆ ಬಂಗಲೆಯಿಂದ ಕೇವಲ 350 ಮೀಟರ್ ದೂರದಲ್ಲಿ ಬ್ರಿಟನ್ ರಾಯಭಾರ ಕಚೇರಿ ಇದೆ.

ಉತ್ತರಾಧಿಕಾರಿ ಯಾರು?

ಲಾಡೆನ್ ಬಳಿಕ ಜವಾಹಿರಿ ಅಲ್ ಕೈದಾ ನೇತೃತ್ವ ವಹಿಸಿದ್ದ. ಜವಾಹಿರಿಯ ಬಳಿಕ ಉತ್ತರಾಧಿಕಾರಿ ಯಾರು ಎಂಬ ಚರ್ಚೆ ಈಗಿನ ಶುರುವಾಗಿದೆ. ಲಾಡೆನ್‌ನ ನಿಕಟವರ್ತಿ ಹಾಗೂ ಈಜಿಪ್ಟ್ ಇಸ್ಲಾಂ ಜಿಹಾದ್‌ನ ಸದಸ್ಯ ಸೈಫ್ ಅಲ್ ಅದೆಲ್‌ನತ್ತ ಬೊಟ್ಟು ಮಾಡಲಾಗುತ್ತಿದೆ.

ಲಾಡೆನ್‌ನ ಭದ್ರತೆಯ ಜವಾಬ್ದಾರಿಯನ್ನು ಸೈಫ್ ಹೊತ್ತಿದ್ದ. ಅಮೆರಿಕದ ಎಫ್‌ಬಿಐನ ಜಾಗತಿಕ ಉಗ್ರರ ಪಟ್ಟಿಯಲ್ಲಿ 2001ರಲ್ಲಿ ಈತನನ್ನು ಸೇರಿಸಲಾಗಿತ್ತು. ಈತನ ಹತ್ಯೆಗೆ ₹80 ಕೋಟಿ ಬಹುಮಾನ ಘೋಷಿಸಲಾಗಿತ್ತು. 1993ರಿಂದಲೂ ಅಮೆರಿಕ ಇವನಿಗಾಗಿ ಹುಡುಕುತ್ತಿದೆ. ಸೊಮಾಲಿಯಾದ ಮಗದಿಶುವಿನಲ್ಲಿ ಅಮೆರಿಕದ ಪಡೆಗಳ ಮೇಲೆ ದಾಳಿ ನಡೆಸಿ, 18 ಅಮೆರಿಕನ್ನರ ಸಾವಿಗೆ ಕಾರಣನಾದ ಆರೋಪ ಸೈಫ್ ಮೇಲಿದೆ. ಆಗ ಈತನಿಗೆ 30 ವರ್ಷ ವಯಸ್ಸಾಗಿತ್ತು. ಲಾಡೆನ್ ಹತ್ಯೆ ಬಳಿಕ ಸಂಘಟನೆಯ ಕಾರ್ಯತಂತ್ರ ರೂಪಿಸುವ ಜವಾಬ್ದಾರಿ ಹೊತ್ತುಕೊಂಡಿದ್ದ.

'ಸ್ಥಳೀಯ ಅಭ್ಯರ್ಥಿಗಳಿಗೆ ಶೇ 100ರಷ್ಟು ಮೀಸಲಾತಿ ಕಲ್ಪಿಸಲು ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜ್ಯ ಸರ್ಕಾರವು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿರುವ ಅಭ್ಯರ್ಥಿಗಳಿಗೆ ಉದ್ಯೋಗದಲ್ಲಿ ಶೇ 100ರಷ್ಟು ಮೀಸಲಾತಿ ಕಲ್ಪಿಸಲು ಸಾಧ್ಯವಿಲ್ಲ. ಹಾಗೇನಾದರೂ ಮಾಡಿದರೆ ಅದು ಮೂಲಭೂತ ಹಕ್ಕಿನ ಉಲ್ಲಂಘನೆಯಾಗಲಿದೆ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

'ನಿರ್ದಿಷ್ಟ ವರ್ಗಕ್ಕೆ ಅವಕಾಶ ಕಲ್ಪಿಸುವ ಸಲುವಾಗಿ ಇತರರನ್ನು ಕಡೆಗಣಿಸುವುದು ಸರಿಯಲ್ಲ. ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾದುದು. ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳಿವೆ' ಎಂದು ನ್ಯಾಯಮೂರ್ತಿ ಎಂ.ಆರ್. ಶಾ ಹಾಗೂ ಬಿ.ವಿ.ನಾಗರತ್ನ ಅವರಿದ್ದ ಪೀಠವು ತಿಳಿಸಿದೆ.

'ನಿರ್ದಿಷ್ಟ ಜಿಲ್ಲೆ/ಪ್ರದೇಶದ ನಿವಾಸಿಗಳಿಗೆ ಶೇ 100ರಷ್ಟು ಮೀಸಲಾತಿ ಒದಗಿಸುವುದು ಸಂವಿಧಾನದ ವಿಧಿ 16 (2)ರ ಉಲ್ಲಂಘನೆ ಮಾಡಿದಂತೆ' ಎಂದು ನ್ಯಾಯಮೂರ್ತಿ ಶಾ ಅಭಿಪ್ರಾಯಪಟ್ಟಿದ್ದಾರೆ. ಜಿಲ್ಲಾ ಮಟ್ಟದ 3 ಮತ್ತು 4ನೇ ದರ್ಜೆಯ ಹುದ್ದೆಗಳ ನೇಮಕಾತಿಯಲ್ಲಿ ಸ್ಥಳೀಯರಿಗೆ ಶೇ 100ರಷ್ಟು ಮೀಸಲಾತಿ ಕಲ್ಪಿಸುವ ಸಂಬಂಧ ಜಾರ್ಖಂಡ್ ಸರ್ಕಾರ 2016ರಲ್ಲಿ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದೆ.

ಸಂಕ್ಷಿಪ್ತ ಸುದ್ದಿ

ಐವರ ಬಂಧನ

ಭೋಪಾಲ್/ಜಬಲ್‌ಪುರ (ಪಿಟಿಐ): ಮಧ್ಯಪ್ರದೇಶದ ದಮೋಹ ನಾಕಾ ಬಳಿಯ ನ್ಯೂ ಲೈಫ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೋಮವಾರ ಸಂಭವಿಸಿದ ಅಗ್ನಿ ದುರಂತದಲ್ಲಿ ನಾಲ್ವರು ರೋಗಿಗಳು ಸೇರಿ, 8 ಮಂದಿ ಮೃತಪಟ್ಟ ಘಟನೆ ಸಂಬಂಧ ಆಸ್ಪತ್ರೆಯ ಮಾಲೀಕರೂ ಆದ ನಾಲ್ವರು ವೈದ್ಯರು ಮತ್ತು ಆಸ್ಪತ್ರೆಯ ವ್ಯವಸ್ಥಾಪಕನನ್ನು ಪೊಲೀಸರು ಬಂಧಿಸಿದ್ದಾರೆ.

ಧರಣಿ ಕೈಗೊಂಡ ಮೋದಿ ಸೋದರ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಸಹೋದರ, ಅಖಿಲ ಭಾರತ ನ್ಯಾಯಬೆಲೆ ಅಂಗಡಿ ಡೀಲರ್‌ಗಳ ಒಕ್ಕೂಟದ (ಎಐಎಫ್‌ಪಿಎಸ್‌ಡಿಎಫ್) ಉಪಾಧ್ಯಕ್ಷರೂ ಆಗಿರುವ ಪ್ರಹ್ಲಾದ್ ಮೋದಿ ಅವರು ನ್ಯಾಯಬೆಲೆ ಅಂಗಡಿಗಳ ಡೀಲರ್‌ಗಳ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜೈಪುರದ ಜಂತರ್ ಮಂತರ್‌ನಲ್ಲಿ ಇತರ ಸದಸ್ಯರ ಜೊತೆ ಮಂಗಳವಾರ ಧರಣಿ ನಡೆಸಿದರು.

ಸೆ.1ರಿಂದ 11ರವರೆಗೆ ಸಿಯುಇಟಿ–ಪಿಜಿ

ನವದೆಹಲಿ (ಪಿಟಿಐ): ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ (ಸಿಯುಇಟಿ–ಪಿಜಿ) ಸೆಪ್ಟೆಂಬರ್ 1ರಿಂದ 11ರವರೆಗೆ ನಡೆಯಲಿದೆ ಎಂದು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ (ಯುಜಿಸಿ) ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಅವರು ಮಂಗಳವಾರ ತಿಳಿಸಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಕಚೇರಿಯಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಿದ ಒಂದು ವಾರದ ಬಳಿಕ, ಜಾರಿ ನಿರ್ದೇಶನಾಲಯವು (ಇ.ಡಿ) ಕಾಂಗ್ರೆಸ್ ಒಡೆತನದ ನ್ಯಾಷನಲ್ ಹೆರಾಲ್ಡ್ ಕಚೇರಿ ಹಾಗೂ ಇತರ 11 ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿದೆ. ಇದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ನ್ಯಾಷನಲ್ ಹೆರಾಲ್ಡ್ ಹಾಗೂ ಇತರೆ ಸಂಸ್ಥೆಗಳ ಮಧ್ಯೆ ನಡೆದಿರುವ ವ್ಯವಹಾರ ಹಾಗೂ ಹಣ ಅಕ್ರಮ ವರ್ಗಾವಣೆಯ ತನಿಖೆಯ ಭಾಗವಾಗಿ ಶೋಧ ಕಾರ್ಯಾಚರಣೆ ನಡೆದಿದೆ. ಪ್ರಕರಣದಲ್ಲಿ ಹೆಚ್ಚುವರಿ ಸಾಕ್ಷ್ಯಗಳನ್ನು ಸಂಗ್ರಹಿಸಲು ಶೋಧ ನಡೆಸಲಾಗಿದೆ ಎಂದು ಇ.ಡಿ. ಅಧಿಕಾರಿಗಳು ಹೇಳಿದ್ದಾರೆ. ಇದೇ ಪ್ರಕರಣದಲ್ಲಿ ನಿಗಾ ಇರಿಸಲಾಗಿರುವ ಕೋಲ್ಕತ್ತದ ಶೆಲ್ ಕಂಪನಿಗೆ (ಹಣ ಅಕ್ರಮ ವರ್ಗಾವಣೆಗಾಗಿ ಸೃಷ್ಟಿಸಲಾಗಿರುವ ಕಂಪನಿ) ಸೇರಿದ ಜಾಗದಲ್ಲೂ ಶೋಧ ನಡೆದಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಮುಖಂಡರಾದ ರಾಹುಲ್ ಗಾಂಧಿ, ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಪವನ್ ಬನ್ಸಾಲ್ ಅವರನ್ನು ವಿಚಾರಣೆಗೆ ಒಳಪಡಿಸಿದ ಬಳಿಕ ಸಿಕ್ಕ ಮಾಹಿತಿ ಆಧರಿಸಿ, ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಳೆದ ವಾರ, ಸೋನಿಯಾ ಅವರನ್ನು 11 ಗಂಟೆ ವಿಚಾರಣೆ ನಡೆಸಲಾಗಿತ್ತು. ಜೂನ್ ತಿಂಗಳಲ್ಲಿ, ರಾಹುಲ್ ಅವರನ್ನು 50 ಗಂಟೆ ವಿಚಾರಣೆಗೆ ಒಳಪಡಿಸಲಾಗಿತ್ತು. ಏಪ್ರಿಲ್‌ನಲ್ಲಿ ಖರ್ಗೆ ಹಾಗೂ ಬನ್ಸಾಲ್ ಅವರನ್ನೂ ವಿಚಾರಣೆ ನಡೆಸಲಾಗಿತ್ತು.

> **ಇ.ಡಿ. ಶೋಧ, ಕಾಂಗ್ರೆಸ್ ವಿರುದ್ಧದ ದಾಳಿಯ ಮುಂದುವರಿದ ಭಾಗ. ಮೋದಿ ಸರ್ಕಾರದ ಬಗ್ಗೆ ಮಾತನಾಡಿದವರ ವಿರುದ್ಧ ನಡೆಯುತ್ತಿರುವ ರಾಜಕೀಯ ಷಡ್ಯಂತ್ರ. ಇದರಿಂದ ಸುಮ್ಮನಿರಿಸಲಾಗದು**
> **ಜೈರಾಮ್ ರಮೇಶ್,** ಕಾಂಗ್ರೆಸ್ ಮುಖಂಡ

> **ಭ್ರಷ್ಟರಾದ ಸೋನಿಯಾ ಹಾಗೂ ರಾಹುಲ್ ಅವರು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್‌ನ ದುಡ್ಡು ಲೂಟಿ ಮಾಡಿದ್ದಾರೆ ಎಂಬ ಕಾರಣಕ್ಕೆ ಇ.ಡಿ.ಯಿಂದ ಕ್ರಮ ಎದುರಿಸುತ್ತಿದ್ದಾರೆ.**
> **ಸಿ.ಟಿ. ರವಿ,** ಬಿಜೆಪಿ ಪ್ರಧಾನ ಕಾರ್ಯದರ್ಶಿ

ಪಿಂಚಣಿ: ವಿಚಾರಣೆ ಆರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: 1995ರ ನೌಕರರ ಭವಿಷ್ಯ ನಿಧಿ (ಇಪಿಎಸ್ 95) ಕಾಯ್ದೆಯ ತಿದ್ದುಪಡಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ 67 ಅರ್ಜಿಗಳು ಹಾಗೂ ನೌಕರರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಮಂಗಳವಾರ ಆರಂಭವಾಯಿತು.



ನ್ಯಾಯಮೂರ್ತಿಗಳಾದ ಯು.ಯು ಲಲಿತ್, ಅನಿರುದ್ಧ ಬೋಸ್ ಹಾಗೂ ಸುಧಾಂಶು ದುಲಿಯಾ ಅವರನ್ನು ಒಳಗೊಂಡ ತ್ರಿಸದಸ್ಯ ಪೀಠವು ಇಪಿಎಫ್‌ಒ ವಕೀಲರ ವಾದವನ್ನು ಆಲಿಸಿತು. ಪೀಠವು ಮೂರು ದಿನಗಳ ಕಾಲ ವಾದ ಹಾಗೂ ಪ್ರತಿವಾದಗಳನ್ನು ಆಲಿಸಲಿದೆ.

ಈ ಯೋಜನೆಯಡಿ ಕಡಿಮೆ ಪಿಂಚಣಿ ನಿಗದಿ ಮಾಡಲಾಗಿದೆ ಎಂದು ಆರೋಪಿಸಿ ನಿವೃತ್ತ ನೌಕರ ಆರ್. ಸಿ. ಗುಪ್ತ ಎಂಬವರು 2014ರಲ್ಲಿ ನ್ಯಾಯಾಲಯದ ಮೊರೆ ಹೋಗಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು ಗುಪ್ತ ಅವರಿಗೆ ಮಾಸಿಕ ₹28 ಸಾವಿರ ಪಿಂಚಣಿ ನೀಡಬೇಕು ಎಂದು 2016ರಲ್ಲಿ ಆದೇಶ ಹೊರಡಿಸಿತ್ತು. ಇದರ ಬೆನ್ನಲ್ಲೇ, ಕಡಿಮೆ ಪಿಂಚಣಿಯನ್ನು ಪ್ರಶ್ನಿಸಿ ಹಲವು ಮಂದಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಕರ್ನಾಟಕ ಹೈಕೋರ್ಟ್ ಸಹ ಪಿಂಚಣಿದಾರರ ಪರವಾಗಿ ತೀರ್ಪು ನೀಡಿತ್ತು.

ಹಲವು ಪ್ರಕರಣಗಳಲ್ಲಿ ಪಿಂಚಣಿದಾರರ ಪರ ಆದೇಶ ನೀಡಿರುವುದನ್ನು ಪ್ರಶ್ನಿಸಿ ನೌಕರರ ಭವಿಷ್ಯ ನಿಧಿ ಸಂಸ್ಥೆಯು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತು. ಪಿಂಚಣಿದಾರರು ಸಹ ಸುಪ್ರೀಂ ಕೋರ್ಟ್ ಮೊರೆ ಹೋದರು.

ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ಪ್ರಕರಣದ ವಿಚಾರಣೆ ನಡೆಸಿ, 'ಇದು ಸೂಕ್ಷ್ಮ ಪ್ರಕರಣವಾಗಿದ್ದು, ವ್ಯಾಪಕ ಚರ್ಚೆ ನಡೆಯಬೇಕಿದೆ. ಹೀಗಾಗಿ, ವಿಸ್ತೃತ ಪೀಠಕ್ಕೆ ವರ್ಗಾಯಿಸಬೇಕು' ಎಂದು ಸಲಹೆ ನೀಡಿತು. ಬಳಿಕ ತ್ರಿಸದಸ್ಯ ಪೀಠಕ್ಕೆ ವರ್ಗಾಯಿಸಲಾಯಿತು.

'ದೇಶದಲ್ಲಿ 78 ಲಕ್ಷಕ್ಕೂ ಅಧಿಕ ಮಂದಿ ಕಡಿಮೆ ಪಿಂಚಣಿ ಪಡೆಯುತ್ತಿದ್ದಾರೆ. 95ರ ಪಿಂಚಣಿ ಯೋಜನೆಯಿಂದ ದೊಡ್ಡ ಮಟ್ಟದಲ್ಲಿ ಅನ್ಯಾಯವಾಗಿದೆ. ಇದನ್ನು ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ್ದೇವೆ' ಎಂದು ಇಪಿಎಸ್‌–95 ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಶಂಕರ್ ಕುಮಾರ್ ತಿಳಿಸಿದರು.



ಅಮೆರಿಕ ಸಂಸತ್‌ನ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ಮಂಗಳವಾರ ರಾತ್ರಿ ತೈವಾನ್‌ನ ತೈಪೆ ವಿಮಾನ ನಿಲ್ದಾಣಕ್ಕೆ ಬಂದಿಳಿದರು — ಎಪಿ/ಪಿಟಿಐ ಚಿತ್ರ

ಚೀನಾ ಲೆಕ್ಕಿಸದೇ ತೈವಾನ್ ತಲುಪಿದ ಪೆಲೋಸಿ

ತೈಪೆ (ಎಪಿ/ರಾಯಿಟರ್ಸ್): ಚೀನಾ ತನ್ನದೆಂದು ವಾದಿಸುತ್ತಿರುವ ಸ್ವತಂತ್ರ ದ್ವೀಪ ರಾಷ್ಟ್ರ ತೈವಾನ್ ರಾಜಧಾನಿ ತೈಪೆಗೆ ಅಮೆರಿಕ ಸಂಸತ್ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ಮಂಗಳವಾರ ಅಧಿಕೃತ ಭೇಟಿ ನೀಡಿದ್ದು, ನಿರೀಕ್ಷೆಯಂತೆಯೇ ತೈವಾನ್–ಚೀನಾ ಗಡಿಯಲ್ಲಿ ಬಿಗುವಿನ ಪರಿಸ್ಥಿತಿ ಸೃಷ್ಟಿಯಾಗಿದೆ.

ಪೆಲೋಸಿ ಅವರ ಭೇಟಿಗೆ ಚೀನಾ ವ್ಯಗ್ರಗೊಂಡಿದ್ದು, ಚೀನಾದ ಯುದ್ಧ ವಿಮಾನಗಳು ತೈವಾನ್ ಜಲಸಂಧಿ ಬಳಿ ವಾಯು ಗಡಿ ದಾಟಿ ಹಾರಾಟ ನಡೆಸಿವೆ. ಜಲಸಂಧಿಯ ಬಳಿ ಸಮುದ್ರದಲ್ಲಿ ಚೀನಾದ ಹಲವು ಯುದ್ಧನೌಕೆಗಳೂ ಬೀಡುಬಿಟ್ಟಿವೆ. ಸೇನಾ ತಾಲೀಮು, ಕ್ಷಿಪಣಿ ಪರೀಕ್ಷಿಸುವುದಾಗಿ ಘೋಷಿಸಿದೆ. ಯಾವುದೇ ಕ್ಷಣದಲ್ಲಿ ಡ್ರ್ಯಾಗನ್ ಪಡೆ ದ್ವೀಪ ರಾಷ್ಟ್ರದ ಮೇಲೆ ಮುಗಿಬೀಳುವ ಬೆದರಿಕೆ ಎದುರಾಗಿದೆ.

ತೈವಾನ್ ಸೇನೆ ಕೂಡ ತನ್ನ ಯುದ್ಧ ವಿಮಾನಗಳನ್ನು ಸನ್ನದ್ಧವಾಗಿರಿಸಿದೆ. 'ಯಾವುದೇ ಶತ್ರುವಿನಿಂದ ಅಪಾಯ ಎದುರಾದರೆ, ಅದಕ್ಕೆ ತಕ್ಕ ಉತ್ತರ ನೀಡಲು ಸೇನೆ ಸಂಪೂರ್ಣ ಸನ್ನದ್ಧವಾಗಿದೆ' ಎಂದು ತೈವಾನ್ ರಕ್ಷಣಾ ಸಚಿವಾಲಯ ಹೇಳಿದೆ.

ಅಪರಿಚಿತ ಹ್ಯಾಕರ್‌ಗಳು ತೈವಾನ್ ಮೇಲೆ ಸೈಬರ್ ದಾಳಿ ನಡೆಸಿದ್ದಾರೆ. ಅಧ್ಯಕ್ಷರ ಕಚೇರಿಯ ವೆಬ್‌ಸೈಟ್ ಸೈಬರ್ ದಾಳಿಗೆ ತುತ್ತಾಗಿದೆ.

ನಾಗರಿಕ ಯುದ್ಧದಿಂದಾಗಿ 1949ರಲ್ಲಿ ಚೀನಾದಿಂದ ತೈವಾನ್ ಬೇರ್ಪಟ್ಟು ಸ್ವತಂತ್ರ ಆಡಳಿತ ನಡೆಸುತ್ತಿದೆ. ಅಮೆರಿಕ ಜತೆಗೆ ರಕ್ಷಣಾ ಸಹಕಾರ ಸಂಬಂಧ ಹೊಂದಿದೆ.

> **'ಬೆದರಿಕೆಗೆ ಜಗ್ಗಲ್ಲ'**
> ಚೀನಾದ ನಿರಂತರ ಎಚ್ಚರಿಕೆಗೆ ಮಣಿಯದೇ ನ್ಯಾನ್ಸಿ ಪೆಲೋಸಿ ಅವರು ವಾಯುಪಡೆಯ ಬೋಯಿಂಗ್ ಸಿ-40ಸಿ ವಿಮಾನದಲ್ಲಿ ತೈಪೆ ವಿಮಾನ ನಿಲ್ದಾಣಕ್ಕೆ ಸ್ಥಳೀಯ ಕಾಲಮಾನ ರಾತ್ರಿ 10.40ಕ್ಕೆ ಬಂದಿಳಿದರು. ತೈವಾನ್‌ಗೆ ಕಳೆದ 25 ವರ್ಷಗಳಲ್ಲಿ ಅಮೆರಿಕದ ಉನ್ನತ ನಾಯಕರೊಬ್ಬರು ಭೇಟಿ ನೀಡಿರುವುದು ಇದೇ ಮೊದಲು.
> 'ಚೀನಾ ತನ್ನ ಸೇನೆಯಿಂದ ನಮ್ಮನ್ನು ಬೆದರಿಸಲು ಸಾಧ್ಯವಿಲ್ಲ' ಎಂದು ಅಮೆರಿಕವು ಚೀನಾಕ್ಕೆ ಖಡಕ್ ಆಗಿ ಹೇಳಿದೆ.

> **ಅಮೆರಿಕ ತೈವಾನ್ ವಿಚಾರದಲ್ಲಿ ಬೆಂಕಿ ಜತೆಗೆ ಆಟವಾಡುತ್ತಿದೆ. ಅಮೆರಿಕ ವಿಶ್ವಾಸ ಕಳೆದುಕೊಂಡಿದೆ. ಶಾಂತಿ ಭಂಗಗೊಳಿಸುವ ಅದರ ಬೆದರಿಕೆಯ ಮುಖ ಮತ್ತೊಮ್ಮೆ ಬೆತ್ತಲಾಗಿದೆ**
> **ವಾಂಗ್ ಯೀ,** ಚೀನಾ ವಿದೇಶಾಂಗ ಸಚಿವ

> **ಪ್ರಜಾಪ್ರಭುತ್ವ ಮತ್ತು ನಿರಂಕುಶಾಧಿಕಾರದಲ್ಲಿ ಒಂದನ್ನು ಆಯ್ದುಕೊಳ್ಳಬೇಕಾದ ಸನ್ನಿವೇಶದಲ್ಲಿ ಜಗತ್ತು ಇರುವಾಗ ತೈವಾನ್‌ಗೆ ಅಮೆರಿಕದ ಬೆಂಬಲ ಈಗ ಅತ್ಯಂತ ಅಗತ್ಯ**
> **ನ್ಯಾನ್ಸಿ ಪೆಲೋಸಿ,** ಅಮೆರಿಕ ಸಂಸತ್ ಸ್ಪೀಕರ್

‘ಸಾಹಿತ್ಯಮುಖಿ’, ‘ಸಮಾಜಮುಖಿ’ ಸಂಪುಟಗಳ ಬಿಡುಗಡೆ • ಸಿ.ಎಂ ಬೊಮ್ಮಾಯಿ ಕಳವಳ

‘ಮರೆಯಾಗುತ್ತಿರುವ ಅಂತಃಕರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಫಲವಾಗಿ ಭಾರತದಲ್ಲಿ ಅಂತಃಕರಣ ಮರೆಯಾಗುತ್ತಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳವಳ ವ್ಯಕ್ತಪಡಿಸಿದರು.

ಡಿ.ಎಸ್.ವಿ ಫೌಂಡೇಷನ್ ಆಯೋಜಿಸಿದ್ದ ಡಿ.ಎಸ್.ವೀರಯ್ಯ ಅವರ ‘ಸಾಹಿತ್ಯಮುಖಿ’ ಮತ್ತು ‘ಸಮಾಜಮುಖಿ’ ಸಂಪುಟಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

‘90ರ ದಶಕದಲ್ಲಿ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಒಪ್ಪಿಕೊಂಡ ಬಳಿಕ ದೇಶದ ರಾಜಕಾರಣ, ಆಡಳಿತ, ಸಾಹಿತ್ಯ ಸೇರಿ ಎಲ್ಲ ವಲಯಗಳ ಆದ್ಯತೆ ಬದಲಾಗಿದೆ. ಮಾನವೀಯ ಮೌಲ್ಯವೇ ಕಡಿಮೆಯಾಗುತ್ತಿದೆ. ಹೊರದೇಶಗಳಿಗೆ ಹೋಲಿಸಿದರೆ ಸ್ವಲ್ಪಮಟ್ಟಿನ ಸತ್ವ ಉಳಿದಿದ್ದರೆ ಅದಕ್ಕೆ ಭಾರತದ ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸ ಕಾರಣ’ ಎಂದರು.

‘ಚಳವಳಿಗೆ ಸಾಹಿತ್ಯದ ಸ್ವರೂಪ ಇದ್ದರೆ ಅದರಲ್ಲಿ ನೀತಿ ಇರುತ್ತದೆ. ಮಹತ್ವಾಕಾಂಕ್ಷೆಯ ಗುರಿ ಇರುತ್ತದೆ. ಚಳವಳಿ ಮತ್ತು ಸಾಹಿತ್ಯವನ್ನು ಒಟ್ಟೊಟ್ಟಿಗೆ ತೆಗೆದುಕೊಂಡು ಹೋದ ಕೀರ್ತಿ ಡಿ.ಎಸ್.ವೀರಯ್ಯ ಅವರಿಗೆ ಸಲ್ಲುತ್ತದೆ. ದಮನಿತರ ಧ್ವನಿಯಾಗಿ ಕಠಿಣ ಹಾದಿ ಸವೆಸಿದ್ದಾರೆ. ಅವರಿಗೆ ದೆಹಲಿ ರಾಜಕಾರಣದ ಅವಕಾಶ ತಪ್ಪಿದೆ. ಮುಂದೊಂದು ದಿನ ಬೇರೆ ಅವಕಾಶ ಸಿಗಲಿದ್ದು, ಅದಕ್ಕೆ ಒತ್ತಾಸೆಯಾಗಿ ನಾನೂ ನಿಲ್ಲುತ್ತೇನೆ’ ಎಂದು ಭರವಸೆ ನೀಡಿದರು.



'ಸಾಹಿತ್ಯಮುಖಿ' ಮತ್ತು 'ಸಮಾಜಮುಖಿ' ಪುಸ್ತಕಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. (ಎಡದಿಂದ) ಸಾಹಿತಿಗಳಾದ ದೊಡ್ಡರಂಗೇಗೌಡ, ಚಂದ್ರಶೇಖರ ಕಂಬಾರ, ಡಿ.ಎಸ್.ವೀರಯ್ಯ, ಶಿವಮೂರ್ತಿ ಮುರುಘಾ ಶರಣರು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಇದ್ದರು – ಪ್ರಜಾವಾಣಿ ಚಿತ್ರ

ಬಿಡುಗಡೆಯಾದ ಕೃತಿಗಳ ಕುರಿತು ಮಾತನಾಡಿದ ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ‘ಡಿ.ಎಸ್.ವೀರಯ್ಯ ಅವರ ಕೃತಿಗಳಲ್ಲಿ ಕಥೆ, ಕವಿತೆ, ಆತ್ಮಕಥೆ, ವ್ಯಕ್ತಿಚಿತ್ರ ಎಲ್ಲವೂ ಇವೆ. 40 ವರ್ಷಗಳ ಅವರ ಬರಹವನ್ನು ಸಾಹಿತ್ಯ ವಲಯ ಗುರುತಿಸಲೇ ಇಲ್ಲ. ಅವರ ಸಾಹಿತ್ಯದಲ್ಲಿ ಅಂತಃಕರಣ ಇದೆ ಎಂಬುದನ್ನು ಈಗಲಾದರೂ ಸಾರಸ್ವತಲೋಕ ಗುರುತಿಸಬೇಕಿದೆ’ ಎಂದರು.

ಚಿತ್ರದುರ್ಗದ ಮುರುಘರಾಜೇಂದ್ರ ಮಠದ ಶಿವಮೂರ್ತಿ ಮುರುಘಾ ಶರಣರು ಮಾತನಾಡಿ, ‘ಜನರ ನಡುವೆ ಹೋರಾಟಗಳಲ್ಲಿ ಬೆಳೆದ ಡಿ.ಎಸ್. ವೀರಯ್ಯ ಅವರು ಸಮಾಜವನ್ನೇ ಓದುತ್ತಾ ಬೆಳೆದವರು. ಅನುಭವ ಮುಖಿಯಾಗಿದ್ದರಿಂದ ‘ಸಮಾಜಮುಖಿ’ ಮತ್ತು ‘ಸಾಹಿತ್ಯಮುಖಿ’ ಗ್ರಂಥಗಳನ್ನು ರಚಿಸಲು ಸಾಧ್ಯವಾಯಿತು. ಅವರ ಬರಹಗಳನ್ನು ಯುವ ಸಮೂಹ ಓದಿದರೆ ಅರಿವು ಹೆಚ್ಚಿಸಿಕೊಳ್ಳಲು ಸಾಧ್ಯ’ ಎಂದರು.

ರಾಜಕಾರಣಿಗಳ ಮಾತಿನ ಇರಿತವೂ ಹಿಂಸೆ: ಹಂಪನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಹಿಂಸಾ ಪರಮೋ ಧರ್ಮ ಎನ್ನುವ ಧರ್ಮವಾಕ್ಯ ಮರೆತಿರುವ ರಾಜಕಾರಣಿಗಳು, ನಿತ್ಯವೂ ಪರಸ್ಪರ ಮಾತುಗಳಲ್ಲಿ ಇರಿಯುವುದೂ ಒಂದು ರೀತಿಯ ಹಿಂಸೆ ಎಂದು ಸಾಹಿತಿ ಹಂಪ ನಾಗರಾಜಯ್ಯ ಪ್ರತಿಪಾದಿಸಿದರು.

ಶೇಷಾದ್ರಿಪುರಂ ವಾಣಿಜ್ಯ ಮತ್ತು ವ್ಯವಸ್ಥಾಪನಾ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಜೈನ ಧರ್ಮ; ಅಹಿಂಸೆಯ ಪರಿಕಲ್ಪನೆಗಳು’ ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಜಗತ್ತಿನ ಎಲ್ಲ ಧರ್ಮಗಳೂ ಅಹಿಂಸೆಗೆ ಮಹತ್ವ ನೀಡಿವೆ. ನೀನು ಬದುಕು, ಇತರರಿಗೂ ಬದುಕಲು ಬಿಡು ಎನ್ನುವುದು ಬದುಕಿನ ಧ್ಯೇಯವಾಗಬೇಕಿದೆ. ಅಹಿಂಸೆಗೆ ಹಲವು ಆಯಾಮಗಳಿವೆ. ಮಹಾವೀರ, ಬುದ್ಧ, ಗಾಂಧೀಜಿ ಅವರು ಮಹತ್ವವನ್ನು ಜಗತ್ತಿಗೆ ಸಾರಿದ್ದಾರೆ ಎಂದು ಶ್ಲಾಘಿಸಿದರು.

ಯುದ್ಧದ ಪರಿಣಾಮ ಇಂದಿಗೂ ಸಾವಿರಾರು ಜನರು ಜೀವ ಕಳೆದುಕೊಳ್ಳುತ್ತಿರುವ ಈ ಸಮಯದಲ್ಲಿ ಆಯುಧ ಬಳಸದೇ ಯುದ್ಧ ಮಾಡಬಹುದು ಎನ್ನುವುದನ್ನು ಜಗತ್ತಿಗೆ ತೋರಿಕೊಟ್ಟವರು ಭರತ ಮತ್ತು ಬಾಹುಬಲಿ ಸಹೋದರರು. ಹಣ, ಅಧಿಕಾರ ವಿವೇಕ ಮರೆಸುತ್ತದೆ ಎನ್ನುವ ನೀತಿಪಾಠ ಹೇಳಿದ್ದಾರೆ. ಆದರೂ, ಜಗತ್ತು ಪಾಠ ಕಲಿತಿಲ್ಲ ಎಂದು ವಿಷಾದಿಸಿದರು.



ಶೇಷಾದ್ರಿಪುರಂ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಜೈನ ಧರ್ಮ; ಅಹಿಂಸೆಯ ಪರಿಕಲ್ಪನೆಗಳು’ ಕುರಿತ ವಿಚಾರ ಸಂಕಿರಣದಲ್ಲಿ ಕನ್ನಡ ವಿವಿ ಕಾರ್ಯಕಾರಿ ಸಮಿತಿ ಸದಸ್ಯ ಸಮಿಉಲ್ಲಾಖಾನ್, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಕುಲಪತಿ ಸ.ಚಿ.ರಮೇಶ, ಸಾಹಿತಿ ಹಂಪ ನಾಗರಾಜಯ್ಯ ಇದ್ದಾರೆ

ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿ ತಾರಿಹಳ್ಳಿ ಹನುಮಂತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಸ.ಚಿ.ರಮೇಶ ಅಧ್ಯಕ್ಷತೆ ವಹಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸದಸ್ಯರಾದ ಸಮಿಉಲ್ಲಾಖಾನ್, ಓ.ಓಬಯ್ಯ, ಪ್ರಾಂಶುಪಾಲರಾದ ವಿದ್ಯಾ ಶಿವಣ್ಣನವರ್ ಉಪಸ್ಥಿತರಿದ್ದರು.

ವಿರಕ್ತಮಠ, ಶಿವಾನಂದಪ್ಪಗೆ ‘ಸಿಎನ್‌ಆರ್ ರಾವ್’ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಿ.ಎ. ವಿರಕ್ತ ಮಠ ಮತ್ತು ಬಿ. ಶಿವಾನಂದಪ್ಪ ಅವರಿಗೆ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ 2022ನೇ ಸಾಲಿನ ‘ಸಿ.ಎನ್. ಆರ್. ರಾವ್ ಜೀವಮಾನ ಸಾಧನೆ’ ಪ್ರಶಸ್ತಿಯನ್ನು ಮಂಗಳವಾರ ಪ್ರದಾನ ಮಾಡಲಾಯಿತು.

ಪ್ರೊ.ಕೆ.ವಿ. ರಾವ್ ಮತ್ತು ಡಾ.ನಾ. ಸೋಮೇಶ್ವರ ಅವರಿಗೆ ವಿಜ್ಞಾನ ಸಂವಹನೆಗಾಗಿ ಅಕಾಡೆಮಿ ವತಿಯಿಂದ ಕೊಡ ಮಾಡುವ ಜೀವಮಾನ ಪುರಸ್ಕಾರ ನೀಡಲಾಯಿತು.

ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಐಟಿ- ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಅಕಾಡೆಮಿ ಪ್ರಶಸ್ತಿ ಮತ್ತು ಫೆಲೋಶಿಪ್‌ಗಳನ್ನು ಪ್ರದಾನ ಮಾಡಿದರು.

ಗೌರವ ಫೆಲೋಶಿಪ್ ಪಡೆದವರು: ಸಿಎಲ್‌ಎಲ್ ಗೌಡ, ಡಿ.ಜೆ. ಭಾಗ್ಯರಾಜ್, ಸಿ.ಎಸ್. ಪ್ರಸಾದ್, ಎಸ್.ಎಸ್. ಹೊನ್ನಪ್ಪಗೋಳ್, ಲಲಿತ ಆರ್. ಗೌಡ, ಕೆ.ಎಂ. ಶಂಕರ್, ಬಿ. ತಿಮ್ಮೇಗೌಡ, ಮನೋಹರ ಕುಲಕರ್ಣಿ, ಬಾಲಸುಬ್ರಮಣಿಯನ್, ಟಿ.ವಿ. ರಾಮಚಂದ್ರ, ಎಸ್.ವಿಶ್ವನಾಥ್, ನವಕಾಂತ್ ಭಟ್, ಎ. ಆದಿಮೂರ್ತಿ, ಜಿ.ಡಿ. ವೀರಪ್ಪಗೌಡ, ಎ.ವಿ. ಕುರುಪದ್, ಆರ್.ಆರ್. ನವಲಗುಂದ, ಎ.ಕೆ. ಸೂದ್, ಎಸ್.ಪಿ. ದಂಡಿನ್, ಆರ್. ಉಮಾಶಂಕರ್, ಎಚ್. ಸುದರ್ಶನ್, ಎಚ್. ರಾಮಕೃಷ್ಣರಾವ್ ಮತ್ತು ಶ್ರೀದೇವಿ ಸಿಂಗ್.

ಫೆಲೋಶಿಪ್ ಪುರಸ್ಕೃತರು: ಅಬ್ರಹಾಂ ವರ್ಗೀಸ್, ಕೆ.ಎಂ. ಇಂದಿರೇಶ, ಎನ್. ಕೆ.ಎಸ್. ಗೌಡ, ಎಸ್.ಆರ್. ರಮೇಶ್, ಬಿ. ರಂಗಸ್ವಾಮಿ, ಕೆ. ವೆಂಕಟರಾಮನ್, ಎಚ್. ರೇವಣ್ಣ ಸಿದ್ದಪ್ಪ, ಎಸ್. ಜಿ. ಶ್ರೀಕಂಠೇಶ್ವರ ಸ್ವಾಮಿ, ಎಂ.ಬಿ. ರಜನಿ, ಎಂ.ಜೆಡ್. ಸಿದ್ದಿಕಿ, ಕೆ.ಎನ್. ಬಿ. ಮೂರ್ತಿ, ಕೆ.ಎಂ. ರೂಪಾ, ಎನ್.ಬಿ. ನಡುವಿನಮನಿ, ಅರುಣ್ ಇನಾಮ್ದಾರ್, ಸುಪರ್ಣ ರಾಯ್, ಜಿ. ಜಗದೀಶ್, ಎಂ.ಕೆ. ರಬಿನಾಯ್, ಕೆ.ಎನ್. ಅಮೃತೇಶ್, ರವಿಶಂಕರ್ ರೈ, ಕೃಷ್ಣ ಇಸಲೂರು, ವಿಶಾಲ್ ರಾವ್, ವಿಜಯಲಕ್ಷ್ಮಿ ಡೇಗಾ ಮತ್ತು ಜಗದೀಶ್ ಆರ್. ತೋನಣ್ಣನವರ್.

ಈ ವೇಳೆ ಮಾತನಾಡಿದ ಅಶ್ವತ್ಥ ನಾರಾಯಣ, ‘ರಾಜ್ಯವು ಸಂಶೋಧನೆ ಮತ್ತು ನಾವಿನ್ಯತೆಯಲ್ಲಿ ಇಡೀ ದೇಶಕ್ಕೆ ಪ್ರಥಮ ಸ್ಥಾನದಲ್ಲಿದೆ. ಇದನ್ನು ಬೇರೆ ರಾಜ್ಯಗಳಿಗೆ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ. ಸಂಶೋಧನೆ ಮತ್ತು ನಾವೀನ್ಯತೆಗೆ ಸರ್ಕಾರ ಸಾಕಷ್ಟು ಉತ್ತೇಜನ ನೀಡುತ್ತಿದೆ’ ಎಂದು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Walk-in

ACCORPLUS
It's not just a Job, It's a Career
Tele-sales Specialist
Apply Now :
- International Sales Experience preferred
- Freshers can Apply,
- Fluent English with Neutral Accent
- Graduate & Under Grad.
- Shift Timing : DAY SHIFT

What We Offer :
- Fixed Sunday off
- Salary : 20K to 35K
- Unlimited Bonus for Sales
- Career development opportunities across India

WALK-IN
Urban Vault, 3rd Floor, 1133, 100 feet Road, HAL 2nd Stage, Indiranagar, Bengaluru 560008
+91 88845 54788
+91 95132 47915
nida.afreen@accorplus.com

Accounts & Finance

WANTED LADIES For Accounts (Married) B.com with Tally Knowledge in&Around Jayanagar And JP-Nagar Contact: 9980921763/ 9632201671

Engg/ Production Technical

WANTED ENGINEERS for PRODUCTION, B.E/ Diploma (Mechanical). minimum 5 years experience. 'VINUMAC' 205A, Peenya 3rd phase, Bangalore-58 Phone: 080-28391959, 28394512 admin@vinumac.com

WANTED EXPERIENCED TURNER and LASER CUTTING MACHINE OPERATOR. Factory at Peenya. Contact: 7259936823

Marketing & Sales

REQUIRED TEAMLEADER, Telecaller, & FieldExecutive For BankLoan collection. direct recruitment to company Contact:- 9620206756, 9620200756.

General

WANTED MAINTENANCE Supervisors Manpower Recruitment Graduates/ Undergraduates Experience Minimum 5years Free Family Accommodation Facility Age Between 30-40years Salary Rs.20,000/- + Incentive Call:7338084555 9845053636 Email:glprojects7889@gmail.com

WANTED GRAPHIC DESIGNER, Computer Typist Male & Female & Supervisor Jayanagar 9th Block Call: 9845934508

FRESH-GRADUATES - Office Assistants needed for a Manufacturing Company in Peenya for diverse functions in Accounts/ HR/ Reception/ Sales/ Commercial. In-house training will be provided. Send your application to freshcareer839@gmail.com

Multiple Vacancy

OPPORTUNITY FOR Retired Officials,Bankers,NRI, Teachers, Professionals, Homemakers, CAs. Earn salary+ Incentives. CALL:8095301555

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

Receptionist/ Secretary

"WANTED FEMALE Receptionist and Office Assistant" for Builders office in HSR Layout. Contact: 9886294610

Teachers/ Professors

REQUIRED
Full Time Faculty with Ph.D/NET & Experience
UG
Commerce, French, Mathematics, Computer Science & Journalism
PG
(Experience at PG level)
Psychology
Management
St. CLARET COLLEGE & INSTITUTE OF MANAGEMENT
Jalahalli Post, Bengaluru - 560013
Contact: 080-23454755
Mob: 9620912639
Send your resumes to:
scc@claretcollege.edu.in
www.claretcollege.edu.in

SONA VALLIAPPA PUBLIC SCHOOL (ICSE) Hejjala, Bidadi requires Science/ Maths/ English/ Computer Science Highschool Teachers 9880439138/ 7259322368

BEST PRINCIPAL and English, Social Science, PE TEACHERS for reputed CBSE School, Bangalore. 9449835744/ 9535601743

REQUIRED TEACHERS- Kindergarten, Primary, High School, English, Kannada, Clerk Head-Mistress Interview: 4th August Thursday @11.00 am 9845474479. MOTHER'S TOUCH SCHOOL, LIC Colony, 3rd Block East Jayanagar.

St. Benedict's Academy
School (State & CBSE) , PU & Degree College
Asirvanam, Anchepalya, Mysore Road, Bangalore-74
Requires Trained & Experienced
LECTURERS
Computer Science (MCA/MSc)
Finance/ Accountancy/ Taxation (MCom)
NURSING TUTORS
MSc Nursing OBO, Community Health
TEACHERS
CBSE Primary School
KG, Science, English, PT
State Primary & High School
Hindi, EVS, Maths, Biology
OFFICE STAFF
Call: 9740245828
Mail your resume to: jeromeosb@gmail.com

AGROTIE, A Practical Training Center for Horticulture, is Looking For AGRICULTURAL TEACHERS with a Bachelor's Degree or Diploma in Agriculture. Candidates in South Bangalore Preferred. Interested Candidates Can Send their Resume to: info@agrotie.in www.agrotie.in

CAMBRIDGE PUBLIC SCHOOL, Yelahanka NewTown, Bangalore-64 needs trained, experienced LADY GRADUATES to handle English, Social, Maths, Computer Applications and LADY OFFICE ASSISTANT. Contact for immediate appointment. 9632047616/ khannigar@rocketmail.com

SVN ENGLISH High School, Thanisandra Main Road, Nagawara, Bangalore-77, (Opposite Elements Mall), Requires ENGLISH TEACHERS (BA/MA,BEd) for High School.Call: 9392303764/ 9686200200 Mail: svnschool@gmail.com

SCIENCE AND PT TEACHER FOR HIGH SCHOOL Near Yelachenahalli Metro SALARY 15000-18000 WALK-IN 7892630186

KRJS GROUP OF INSTITUTIONS
REQUIRES
I. Vemana Institute of Technology
1) Professors: CSE / ISE / ECE / AI & ML
2) Associate Professors: CSE & ISE
3) Assistant Professors: CSE/ ISE / ECE / AI & ML & English
II. RJS - Institute Of Management Studies
Assistant Professor: English
III. DBM & RJS School, Koramangala
Teachers: Primary, High School Pre-Primary
IV. CJR RJS Marathalli College: PET Master -1
Office Staff : Asst. Placement officer -1, Lab Instructors, Accountants, FDC, Attenders
Apply within 10 days.
For more details visit:
www.reddyjanasangha.org
krjsestablishment@gmail.com
Ph : 080-25534194
Contact : 9901801138

WANTED TRAINED LADY TEACHERS to teach English, Computer, Chemistry and Biology in English Medium Primary and High Schools and NTT Trained/ Untrained for NURSERY Classes. Attractive Salary for Talented Candidates. Walk-in Interview on 04.08.2022 between 2.00 PM and 4.00 PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080 26710170/ 74833-77387

WANTED TEACHERS with BA/MA (Eng, Hindi and SS) with BEd, BCA/MCA. Salary 14000 to 25000. Contact Sidhartha International School, Peenya, Dasarahalli. Contact No. 9620100046, 9964670328.

REAL ESTATE BUYING

Sites

Banashankari

BDA SITES WANTED BANASHANKARI 6TH STAGE.,ANJANAPURA, J.P NAGAR 8TH-9TH PHASE,..BCC LAYOUT IMMEDIATE SETTIEMENT CALL:9845444588

HSR Layout

WANTED 40X60 HSR 1st to 7th Sector Residential Property only. Immediate Sattlement Contact Ullas Aswath 9845074355

REAL ESTATE SELLING

Flat

Magadi Road

RESIDENTIAL FLAT bearing No.302, Ground Floor measuring super builtup area of 700sq.ft. comprising of Two Bedroom, Bathroom and Kitchen situated in Janapriya Bharat Enclave Dasarahalli (near Magadi-Road) is for immediate sale-Interested Parties may Call-9538237635

House

Kanakapura Road

30X50 WEST Facing Site, North Facing Door Independent House with 4 BHK Duplex House for Sale near Umamaheshwara Temple, KR Road. 8296762498

PUBLIC NOTICE

MAHESHWARI SOUHARDA CREDIT CO-OPERATIVE SOCIETY LTD
#69, Sirsi Circle, Chamrajpet, Bangalore
Phone No : 080-48544445 / 26704425
E mail: mscctd2016@gmail.com
Regd. No. RSR/SOUKA/REG/100/4371/2015-2016
NOTICE OF AGM
Notice is hereby given that 6th Annual General Body Meeting of the co-operative for the F.Y 2021-22 will be held on Sunday 28.08.2022 at 11.00 AM
Venue: Maheshwari Bhavan, Okalipuram, Bangalore - 21
By The Order of Board of Directors
Sd/- C G Shivakumar, CEO

BUSINESS

Business to Business

Finance

WE ARRANGE Mortgage, Purchase of Properties, Construction and Completion of Construction, Site Mortgage Loans from Banks. Contact: 9353705002

Business Offers

Finance

WE FINANCE to NPA/ Default Properties to Release from Banks and Sell at Best Market Price.Call Verna Developers, MG-Road. 9916310226/ 9353128035

FINANCE AGAINST Land & Building Properties Industries Schools Hospitals Projects & NRI Funds.7358729820

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATIONAL

Admission

FAILED STUDENTS immediately Join College. Save One Year. Regular/ Correspondence Approved. Fulfill Educational Dreams. 9341273990.

PERSONAL

Change of Name

I, GOPALAPPA.C, R/o. Yediyur Village, Bagalur Post, Jala Hobli, Mahadevakondigehalli, Bangalore- 562149 have changed my name to GOPALAPPA.C.K. affidavit 29.07.2022 notary T.Narayanawamy Bangalore.

I, ROOPA PRAVIN WESLEY JOHN residing at B-303 Century Marvel Apartments, Hebbal Kempapura, Bangalore- 560024, have changed my name to ROOPA JOHN vide affidavit dated 01.08.2022 before Notary Sivakumara M.N, Bangalore. Henceforth I shall be called ROOPA JOHN only.

SUMANGALA, MOTHER/O. JC671606L, NB SUB/CLK (SD), BALAKRISHNA GIRIYAN, Vill – Bailur, Murudeshwar, Bhatkal Uttar Kannada, Karnataka changed name from SUMANGALA to SUMANGALA SHIVU GIRIYAN 01/08/2022 Notary K.V. Mani Bangalore

D SEYASTYAMAL, Mother/o. JC672966N, SUB, D LOUIS AROCKIA RAJ, Vill - Ariyakudi, Karaikudi, Sivaganga, Tamil Nadu changed name from D SEYASTYAMAL to SEBASTHIYAMMAL DAVEED, 01/08/2022 Notary K.V. Mani Bangalore

I, REHAMAN FAYAZ AHMED Residing at #433/1, Masjid Street, Andersonpet, KGF-563113, have changed my name to R FAYAZ AHAMED vide affidavit dated 02.08.2022, before notary N. Srinivasa, KGF.

CHANGE OF NAME
I, Roshni Devi, DOB: 16.05.1951 (Aadhar No: 261914788318) legally wedded spouse of Brig RS Jatrana presently retired and staying at House No. 94, Sect-6, Bhadurgarh, Haryana declare that my actual name is Roshni Devi as mentioned in Aadhar Card, Pan Card, Passport, Bank Acc. and house regn. documents have changed my name from Roshni Jatrana to Rohni Devi, vide affidavit dated: 02.08.2022 before Notary S. Ramesh, Bangalore.

I, CHANDANA HERAGANAHALLI SUDHARSHAN R/a#594, 8th Main Road, 2nd D Cross, 3rd Block 3rd Stage Basaveshwaranagar, Bengaluru-79 have Changed Name to CHANDANA GAUTHAM GOWDA vide Affidavit 03.08.2022 before Notary Hemalatha Bangalore.

HEMA, WIFE/O, JC671606L, NB SUB/CLK (SD), BALAKRISHNA GIRIYAN, Vill- Bailur, Murudeshwar, Bhatkal, Uttar Kannada, Karnataka, changed name from HEMA to HEMA GIRIYAN 01/08/2022 Notary K.V. Mani Bangalore

S PRABHU, 6497332K, SEP/ASH, Vill - Muniyappan Kovilkottai, Kalvehalli, Krishnagiri, Tamil Nadu, changed Son's name from THILOSANTH P to TEJESHWAR P, 02/08/2022 Notary K.V. Mani Bangalore

I, BHANWAR DAS SWAMI F/o 14870058M– Sep/MT– SHARWAN KUMAR SWAMI, R/a Dholiya, Dholia, Nagaur, Rajasthan changed name from BHANWAR DAS SWAMI to BHANWAR DAS notary K.V.Mani, Bangalore.

I, SHANTOSH DEVI M/o 14870058M– Sep/MT– SHARWAN KUMAR SWAMI, R/a Dholiya, Dholia, Nagaur, Rajasthan changed name from SHANTOSH DEVI to SANTOSH DEVI notary K.V.Mani, Bangalore.

ಶಂಕಿತ ಉಗ್ರರ ಬಂಧನ ಪ್ರಕರಣ ಎನ್‌ಐಎಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲ್‌ಕೈದಾ' ಉಗ್ರ ಸಂಘಟನೆ ಸೇರಲು ಮುಂದಾಗಿದ್ದ ಶಂಕಿತ ಉಗ್ರರಾದ ಅಖ್ತರ್ ಹುಸೇನ್ ಲಷ್ಕರ್ ಹಾಗೂ ಅಬ್ದುಲ್ ಅಲೀಂ ಮಂಡಲ್ ಬಂಧನ ಪ್ರಕರಣವನ್ನು ಸಿಸಿಬಿ ಪೊಲೀಸರು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಅಧಿಕೃತವಾಗಿ ವರ್ಗಾವಣೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ದೆಹಲಿ ಹಾಗೂ ಚೆನ್ನೈನ ಎನ್‌ಐಎ ಅಧಿಕಾರಿಗಳು ರಾಜಧಾನಿಗೆ ಬಂದು ಮಾಹಿತಿ ಪಡೆದುಕೊಂಡಿದ್ದರು. ಸಿಸಿಬಿ ಪೊಲೀಸರು ಗೃಹ ಇಲಾಖೆಗೆ ಪ್ರಕರಣದ ಸಂಪೂರ್ಣ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶಂಕಿತರು ಸಿಸಿಬಿ ಕಸ್ಟಡಿಯಲ್ಲಿದ್ದಾರೆ.

ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರಗಾಮಿ ಸಂಘಟನೆ ಜತೆ ನಂಟು ಹೊಂದಿದ್ದ ಆರೋಪದ ಮೇಲೆ ರಾಜ್ಯದ ಭಟ್ಕಳ ಹಾಗೂ ತುಮಕೂರಿನಲ್ಲೂ ಕಳೆದ ವಾರ ಎನ್‌ಐಎ ಅಧಿಕಾರಿಗಳು ಇಬ್ಬರನ್ನು ವಶಕ್ಕೆ ಪಡೆದು ಶೋಧ ನಡೆಸಿದ್ದರು. ಹೀಗಾಗಿ, ಈ ಪ್ರಕರಣವನ್ನೂ ಎನ್‌ಐಎಗೆ ಹಸ್ತಾಂತರಿಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಜನ್ಮದಿನ ಗಿಫ್ಟ್ ಕವರ್, ವೈದ್ಯಕೀಯ ಕಿಟ್' ಹೆಸರಿನಲ್ಲಿ ಮಾದಕ ವಸ್ತು ಮನೆಗೆ ಪೂರೈಸುವ ದಂಧೆ

₹2 ಕೋಟಿ ಮೌಲ್ಯದ ಡ್ರಗ್ಸ್ ವಶ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಗೊರೆ ಹಾಗೂ ವೈದ್ಯಕೀಯ ಕಿಟ್ ಹೆಸರಿನಲ್ಲಿ ಮನೆಯ ಬಾಗಿಲಿಗೇ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ದೆಹಲಿ ಹಾಗೂ ಬಿಹಾರದ ಐವರು ಆರೋಪಿಗಳನ್ನು ಕೇಂದ್ರ ಅಪರಾಧ ವಿಭಾಗದ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಸುಕಜಿತ್ ಸಿಂಗ್, ಸಾಗರ್ ಮೆಹ್ತಾ, ಹಿಮಾನ್ಶು ಠಾಕೂರ್, ಮಹಾಬಲಿ ಸಿಂಗ್ ಕುಶ್ವ ಹಾಗೂ ವಿಶಾಲ್‌ಕುಮಾರ್ ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿ ₹ 2 ಕೋಟಿ ಮೌಲ್ಯದ ಮಾದಕ ವಸ್ತು ವಶಕ್ಕೆ ಪಡೆದಿದ್ದಾರೆ.

'ದೆಹಲಿಯ ಮೂವರು, ಬಿಹಾರದ ಇಬ್ಬರು ಆರೋಪಿಗಳು ನಗರದ ವೈಟ್‌ಫೀಲ್ಡ್ ಹಾಗೂ ಮಾರತ್‌ಹಳ್ಳಿಯಲ್ಲಿ ನೆಲೆಸಿದ್ದರು. ಬಂಧಿತರಿಂದ ಎಂಡಿಎಂಎ ಕ್ರಿಸ್ಟಲ್, ಎಂಡಿಎಂಎ ಮಾತ್ರೆಗಳು, ಎಲ್‌ಎಸ್‌ಡಿ ಸ್ಟ್ರಿಪ್‌ಗಳು, ಕೊಕೈನ್, ಹ್ಯಾಶಿಶ್ ಆಯಿಲ್, ಚರಸ್ ಹಾಗೂ ಗಾಂಜಾ ವಶಕ್ಕೆ ಪಡೆಯಲಾಗಿದೆ. ಆರೋಪಿಗಳು ಹಣಕಾಸಿನ ವ್ಯವಹಾರ ನಡೆಸುತ್ತಿದ್ದ 5 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿ, ಇತರೆ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಸಿಸಿಬಿ ಪೊಲೀಸ್ ಮೂಲಗಳು ತಿಳಿಸಿವೆ.

'ವಿದೇಶಿ ಹಾಗೂ ಸ್ಥಳೀಯ ವ್ಯಾಪಾರಿಗಳಿಂದ 'ಕ್ರಿಪ್ಟೊ ಕರೆನ್ಸಿ'ಯ ಮೂಲಕ ಮಾದಕ ವಸ್ತುಗಳನ್ನು ಖರೀದಿಸಿ ಒಂದೆಡೆ ಶೇಖರಣೆ ಮಾಡಿಕೊಳ್ಳುತ್ತಿದ್ದರು. ನಿರುದ್ಯೋಗಿ ಯುವಕರನ್ನು ಡ್ರಗ್ಸ್ ಪೂರೈಕೆಗೆ ನೇಮಕ ಮಾಡಿಕೊಂಡು ಅವರನ್ನು ಬೆಂಗಳೂರು, ಮುಂಬೈ, ಚೆನ್ನೈ, ದೆಹಲಿಯಲ್ಲಿ ನಿಯೋಜಿಸಿ ಬಾಡಿಗೆ ಕೊಠಡಿಯಲ್ಲಿ ವಾಸ್ತವ್ಯ ಮಾಡಿಸುತ್ತಿದ್ದರು. ಅದಾದ ಮೇಲೆ ಗ್ರಾಹಕರಿಗೆ ಇದೇ ಯುವಕರ ಮೂಲಕ ಮಾದಕ ವಸ್ತುಗಳನ್ನು ಗ್ರಾಹಕರಿಗೆ ಮನೆಗೇ ಪೂರೈಸುತ್ತಿದ್ದರು. ಟೆಲಿಗ್ರಾಂ, ಇನ್‌ಸ್ಟಾಗ್ರಾಂ ಮುಂತಾದ ಮಾಧ್ಯಮಗಳ ಮೂಲಕ ಗ್ರಾಹಕರನ್ನು ಸೆಳೆಯುತ್ತಿದ್ದರು. ಜನ್ಮದಿನ ಉಡುಗೊರೆ ಕವರ್, ವೈದ್ಯಕೀಯ ಕಿಟ್, ಕೊರಿಯರ್ ಕವರ್‌ಗಳಲ್ಲಿ ಮಾದಕ ವಸ್ತುಗಳನ್ನಿಟ್ಟು ಮಾರಾಟದ ದಂಧೆ ನಡೆಸುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.



ವಶಕ್ಕೆ ಪಡೆದ ಮಾದಕ ವಸ್ತುಗಳು


ಮಹಾಬಲಿ ಸಿಂಗ್


ವಿಶಾಲ್ ಕುಮಾರ್


ಸುಕಜಿತ್ ಸಿಂಗ್


ಸಾಗರ್ ಮೆಹ್ತಾ


ಹಿಮಾನ್ಶು ಠಾಕೂರ್

ವಿವಿಧ ಕಾರ್ಡ್ ಬಳಸಿ ₹ 6.2 ಲಕ್ಷ ಹಣ ಡ್ರಾ

ಬೆಂಗಳೂರು: ಸೇಂಟ್ ಮಾರ್ಕ್ಸ್ ರಸ್ತೆಯ ಎಸ್‌ಬಿಐನ ಕಿಯೋಸ್ಕ್‌ನಲ್ಲಿ ಹೆಲ್ಮೆಟ್ ಧರಿಸಿದ ವ್ಯಕ್ತಿಯೊಬ್ಬ ವಿವಿಧ ಕಾರ್ಡ್ ಬಳಸಿ ₹ 6.2 ಲಕ್ಷ ಹಣ ಡ್ರಾ ಮಾಡಿರುವ ಸಂಬಂಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ಯಾಂಕ್ ಕ್ಯಾಂಪಸ್‌ನಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾದಲ್ಲಿ ಈ ದೃಶ್ಯ ಸೆರೆಯಾಗಿದೆ. ಆರೋಪಿ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ. ಜುಲೈ 4ರಿಂದ 6ರ ನಡುವೆ ಹೆಲ್ಮೆಟ್‌ಧಾರಿಯು ಹಣ ಡ್ರಾ ಮಾಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯಂತ್ರವನ್ನು ಜಾಮ್ ಮಾಡುವ ಉಪಾಯ ಬಳಸಿ 65 ಬಾರಿ ಹಣ ಡ್ರಾ ಮಾಡಲಾಗಿದೆ. ಯಂತ್ರದಿಂದ ಹಣ ಸ್ವೀಕರಿಸಿದ್ದರೂ ಅದರ ಮಾಹಿತಿ ಬ್ಯಾಂಕ್ ಸಿಬ್ಬಂದಿಗೆ ತಿಳಿಯುತ್ತಿರಲಿಲ್ಲ. ಸಿಸಿಟಿವಿ ಕ್ಯಾಮೆರಾದಲ್ಲಿ ವ್ಯಕ್ತಿಯು ಹಣವನ್ನು ಜೇಬಿಗೆ ಹಾಗೂ ಬ್ಯಾಗ್‌ಗೆ ತುಂಬಿಸಿಕೊಳ್ಳುತ್ತಿರುವ ದೃಶ್ಯ ಸೆರೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಎಟಿಎಂಗೆ ಭದ್ರತಾ ಸಿಬ್ಬಂದಿ ಇರಲಿಲ್ಲ.

ತ್ವರಿತ ವಿಲೇವಾರಿ: ಹೈಕೋರ್ಟ್‌ಗೆ ಸೂಚನೆ

ಆರ್‌ಟಿಐ ಕಾರ್ಯಕರ್ತ ಕೊಲೆ ಪ್ರಕರಣ • ಗೋವಿಂದರಾಜುಗೆ ಜಾಮೀನು

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಆರ್‌ಟಿಐ ಕಾರ್ಯಕರ್ತ ಲಿಂಗರಾಜು ಕೊಲೆ ಪ್ರಕರಣದ ಅಪರಾಧಿಯಾಗಿರುವ ಸಿ. ಗೋವಿಂದರಾಜು (ಬಿಬಿಎಂಪಿ ಮಾಜಿ ಸದಸ್ಯೆ ಗೌರಮ್ಮ ಪತಿ) ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಜಾಮೀನು ನೀಡಿದೆ.

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಅಬ್ದುಲ್ ಎಸ್. ನಜೀರ್ ಹಾಗೂ ಜೆ.ಕೆ. ಮಹೇಶ್ವರಿ ಅವರನ್ನು ಒಳಗೊಂಡ ಪೀಠವು, ಸಹ ಅಪರಾಧಿ ಗೌರಮ್ಮ ಅವರಿಗೆ 2021ರ ಡಿಸೆಂಬರ್‌ನಲ್ಲಿ ಜಾಮೀನು ನೀಡಿರುವುದನ್ನು ಗಮನಿಸಿ ಗೋವಿಂದರಾಜು ಅವರನ್ನು ಬಿಡುಗಡೆ ಮಾಡುವಂತೆ ನಿರ್ದೇಶನ ನೀಡಿತು.

ಅರ್ಜಿದಾರರ ಪರ ವಕೀಲರಾದ ಸಿದ್ಧಾರ್ಥ ಲೂತ್ರಾ ಹಾಗೂ ಸಂಜಯ್ ಎಂ. ನುಲಿ ಅವರ ವಾದವನ್ನು ಆಲಿಸಿದ ನ್ಯಾಯಪೀಠವು, ಜೀವಾವಧಿ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿತು ಹಾಗೂ ಅರ್ಜಿದಾರರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಕರ್ನಾಟಕ ಹೈಕೋರ್ಟ್‌ಗೆ ಸೂಚಿಸಿತು.

ಜೀವಾವಧಿ ಶಿಕ್ಷೆ ವಿಧಿಸಿರುವುದನ್ನು ಪ್ರಶ್ನಿಸಿ ಗೋವಿಂದರಾಜು ಕರ್ನಾಟಕ ಹೈಕೋರ್ಟ್ ಮೊರೆ ಹೋಗಿದ್ದರು. ಅವರ ಅರ್ಜಿಯನ್ನು ತಿರಸ್ಕರಿಸಿ ಹೈಕೋರ್ಟ್ 2021ರ ಡಿಸೆಂಬರ್ 13ರಂದು ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಗೋವಿಂದರಾಜು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

2012ರ ಡಿಸೆಂಬರ್ ತಿಂಗಳಿನಲ್ಲಿ ಚಾಮರಾಜಪೇಟೆಯ ಬಿಎಂಕೆ ಬಡಾವಣೆಯಲ್ಲಿ ಆರ್‌ಟಿಐ ಕಾರ್ಯಕರ್ತ ಲಿಂಗರಾಜು ಹತ್ಯೆಯಾಗಿತ್ತು. ಈ ಸಂಬಂಧ ಚಾಮರಾಜಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಸ್ವಯಂ ಪ್ರಕರಣ ದಾಖಲಿಸಿಕೊಂಡಿದ್ದ ಹೈಕೋರ್ಟ್, ತನಿಖೆಗೆ ವಿಶೇಷ ತನಿಖಾ ದಳ (ಎಸ್‌ಐಟಿ) ನೇಮಿಸಲು ಕರ್ನಾಟಕ ಸರ್ಕಾರಕ್ಕೆ ಸೂಚಿಸಿತ್ತು. ಐಪಿಎಸ್ ಅಧಿಕಾರಿಗಳಾದ ಪ್ರಣವ್ ಮೊಹಂತಿ ಹಾಗೂ ಅಬ್ದುಲ್ ಅಹದ್ ನೇತೃತ್ವದ ಎಸ್‌ಐಟಿ ತಂಡ ಪ್ರಕರಣದ ತನಿಖೆ ನಡೆಸಿ, 12 ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಕಾರ್ಪೊರೇಟರ್ ಆಗಿದ್ದ ವೇಳೆ ಗೌರಮ್ಮ ಹಾಗೂ ಪತಿಯ ಅಕ್ರಮ ಯೋಜನೆಗಳನ್ನು ಲಿಂಗರಾಜು ಪ್ರಶ್ನಿಸಿದ್ದರು. ಇದೇ ವಿಚಾರಕ್ಕೆ ಲಿಂಗರಾಜು ಮೇಲೆ ಗೌರಮ್ಮಗೆ ದ್ವೇಷ ಇತ್ತು. ಈ ಕಾರಣಕ್ಕೆ ಪತಿ ಗೋವಿಂದರಾಜು ಹಾಗೂ ಈಕೆ ಸುಪಾರಿ ಕೊಟ್ಟು ಹತ್ಯೆ ಮಾಡಿಸಿದ್ದರು ಎಂದು ತನಿಖೆಯಲ್ಲಿ ದೃಢಪಟ್ಟಿತ್ತು.

ಈ ಕುರಿತ ಸಾಕ್ಷ್ಯಾಧಾರಗಳನ್ನು ಆಧರಿಸಿ 12 ಅಪರಾಧಿಗಳಿಗೂ ಜೀವಾವಧಿ ಶಿಕ್ಷೆ ವಿಧಿಸಿ, 59ನೇ ಸಿಸಿಎಚ್ ನ್ಯಾಯಾಲಯ ತೀರ್ಪು ನೀಡಿತ್ತು.

₹3.35 ಕೋಟಿ ಮೌಲ್ಯದ ಆಸ್ತಿ ಜಾರಿ ನಿರ್ದೇಶನಾಲಯದ ವಶಕ್ಕೆ

ಬೆಂಗಳೂರು: ಮಾಹಿತಿ ಹಕ್ಕು ಕಾರ್ಯಕರ್ತ ಲಿಂಗರಾಜು ಕೊಲೆ ಪ್ರಕರಣದಲ್ಲಿ ಅಪರಾಧಿಗಳಾಗಿರುವ ಬಿಬಿಎಂಪಿ ಮಾಜಿ ಸದಸ್ಯೆ ಸಿ.ಜಿ. ಗೌರಮ್ಮ ಕುಟುಂಬದ ₹ 3.35 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಗೌರಮ್ಮ ಮತ್ತು ಅವರ ಪತಿ ಸಿ. ಗೋವಿಂದರಾಜು ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪದಡಿ ಪ್ರಕರಣ ದಾಖಲಿಸಿದ್ದ ಲೋಕಾಯುಕ್ತ ಪೊಲೀಸರು, 2012ರ ನವೆಂಬರ್ 12ರಂದು ದಾಳಿ ಮಾಡಿ ಶೋಧ ನಡೆಸಿದ್ದರು. ಆರೋಪಿಗಳು ₹ 3.46 ಕೋಟಿ ಮೌಲ್ಯದ ಅಕ್ರಮ ಆಸ್ತಿ ಹೊಂದಿದ್ದಾರೆ ಎಂದು ತನಿಖಾ ತಂಡ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿತ್ತು.

ಲೋಕಾಯುಕ್ತ ಪೊಲೀಸರು ಆರೋಪಪಟ್ಟಿಯಲ್ಲಿ ನೀಡಿದ್ದ ವಿವರಗಳನ್ನು ಆಧರಿಸಿ ಗೌರಮ್ಮ ದಂಪತಿ ವಿರುದ್ಧ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಇ.ಡಿ ಪ್ರತ್ಯೇಕ ಪ್ರಕರಣ ದಾಖಲಿಸಿತ್ತು. ಗೌರಮ್ಮ ಪಾಲಿಕೆ ಸದಸ್ಯೆಯಾಗಿದ್ದ ಅವಧಿಯಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮ ಆಸ್ತಿ ಸಂಪಾದಿಸಿರುವುದು ದೃಢಪಟ್ಟಿದೆ ಎಂದು ಇ.ಡಿ ಹೇಳಿದೆ.

ಗೌರಮ್ಮ ಕುಟುಂಬಕ್ಕೆ ಸೇರಿದ ಮನೆ, ನಿವೇಶನ, ಕೈಗಾರಿಕಾ ನಿವೇಶನ ಮತ್ತು ಕೃಷಿ ಜಮೀನುಗಳನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ತನಿಖಾ ಸಂಸ್ಥೆ ಮಾಹಿತಿ ನೀಡಿದೆ.

2012ರ ನವೆಂಬರ್ 20ರಂದು ಲಿಂಗರಾಜು ಅವರನ್ನು ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಗೌರಮ್ಮ, ಗೋವಿಂದರಾಜು ಸೇರಿದಂತೆ ಹಲವರಿಗೆ ಜೀವಾವಧಿ ಶಿಕ್ಷೆ ವಿಧಿಸಿ ವಿಚಾರಣಾ ನ್ಯಾಯಾಲಯ 2020ರಲ್ಲಿ ಆದೇಶ ಹೊರಡಿಸಿತ್ತು.

'ಚುನಾವಣೆ ನಂತರವೇ ನಾಯಕತ್ವ ನಿರ್ಧಾರ'



ಹುಬ್ಬಳ್ಳಿ: 'ಕಾಂಗ್ರೆಸ್‌ನಲ್ಲಿ ನಾಯಕತ್ವದ ಬಗ್ಗೆ ಯಾವುದೇ ಗೊಂದಲವಿಲ್ಲ. ವೈಯಕ್ತಿಕ ಹೇಳಿಕೆಗೆ ಮಹತ್ವವಿಲ್ಲ. ಚುನಾವಣೆ ನಂತರವೇ ನಾಯಕತ್ವದ ಬಗ್ಗೆ ನಿರ್ಧಾರ ಮಾಡುವುದು ಪಕ್ಷದ ಸಿದ್ಧಾಂತ. ನಾಯಕತ್ವವನ್ನು ಹೈಕಮಾಂಡ್ ನಿರ್ಧರಿಸಲಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ ಹೇಳಿದರು.

ಇಲ್ಲಿನ ಫಾರ್ಚೂನ್ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿಯ ಮೊದಲ ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

'ನಾಯಕತ್ವದ ಕುರಿತು ಅಲ್ಲಲ್ಲಿ ಕೆಲ ಹೇಳಿಕೆಗಳು ವ್ಯಕ್ತವಾಗಿವೆ. ಕೆಲವು ಮಾಧ್ಯಮಗಳ ಸೃಷ್ಟಿಯೂ ಆಗಿವೆ. ಪಕ್ಷದ ನಾಯಕರು ಇದಕ್ಕೆ ಕಿವಿಗೊಡಬಾರದು. ನಾಯಕರು ಒಟ್ಟಾಗಿರಬೇಕು. ಆಂತರಿಕವಾಗಿ ಅಥವಾ ಬಹಿರಂಗವಾಗಿ ಭಿನ್ನಾಭಿಪ್ರಾಯ ವ್ಯಕ್ತಪಡಿಸಬಾರದು ಎಂದು ಸಭೆಯಲ್ಲಿ ಮುಖಂಡರಿಗೆ ಸಂದೇಶ ನೀಡಲಾಗಿದೆ' ಎಂದು ಹೇಳಿದರು.

'ಆಂತರಿಕವಾಗಿ ಚರ್ಚೆಯಾಗುವ ವಿಚಾರಗಳನ್ನು ಬಹಿರಂಗವಾಗಿ ಹೇಳಿಕೆ ನೀಡಬಾರದು ಎನ್ನುವ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ. ಸಭೆಯಲ್ಲಿ ಹಲವು ವಿಚಾರಗಳ ಕುರಿತು ಸಮಾಲೋಚನೆ ನಡೆದಿದೆ. ಒಕ್ಕೊರಲಿನಿಂದ ಕೆಲವೊಂದು ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಭೆಯಲ್ಲಿ ಭಾಗವಹಿಸಿದ್ದ ರಾಹುಲ್ ಗಾಂಧಿ ಅವರು ಕೂಡ ಹಲವು ಸಲಹೆ ಸೂಚನೆ ನೀಡಿದ್ದಾರೆ' ಎಂದರು.


ಬಿಜೆಪಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆಡಳಿತ ವೈಫಲ್ಯ ಕುರಿತಂತೆ ಉಗ್ರವಾಗಿ ಪ್ರತಿಕ್ರಿಯಿಸಲು ಕರೆಕೊಟ್ಟಿದ್ದಾರೆ. ಶೇ 40ರಷ್ಟು ಕಮಿಷನ್, ಭ್ರಷ್ಟಾಚಾರ, ವ್ಯಾಪಕವಾಗಿರುವ ನಿರುದ್ಯೋಗ, ಬೆಲೆ ಏರಿಕೆ ಸೇರಿದಂತೆ ಇತರ ವಿಷಯಗಳ ಕುರಿತ ಜನರಿಗೆ ಮನಮುಟ್ಟುವಂತೆ ತಿಳಿಸಬೇಕೆಂದು ರಾಹುಲ್ ಸೂಚಿಸಿದ್ದಾರೆ ಎಂದರು.

'ಕಾಂಗ್ರೆಸ್ ಒಂದಾಗಿ ಹೋರಾಟ ಮಾಡಿ ಶಕ್ತಿ ಪ್ರದರ್ಶನ ಮಾಡಲಿದೆ. ರಾಜ್ಯದಲ್ಲಿ ನಡೆಯಲಿರುವ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಪುನಃ ಗೆಲ್ಲಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಭೆಯಲ್ಲಿ ಮುಖಂಡರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಸಲೀಂ ಅಹ್ಮದ್, ಆರ್.ವಿ. ದೇಶಪಾಂಡೆ, ವೀರಪ್ಪ ಮೊಯಿಲಿ, ಕೃಷ್ಣ ಬೈರೇಗೌಡ, ಉಮಾಶ್ರೀ, ದಿನೇಶ ಗುಂಡೂರಾವ್, ಇದ್ದರು.

ಚಿತ್ರಾವಳಿ


ನೆಲಮಂಗಲ ವಿಧಾನಸಭಾ ಕ್ಷೇತ್ರದ ಕೆಪಿಸಿಸಿ ವೀಕ್ಷಕ ಶ್ರೀನಿವಾಸ್ ಚನ್ನೋಹಳ್ಳಿ ಗ್ರಾಮದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್‌ಗಳನ್ನು ವಿತರಿಸಿದರು. ತಾ.ಪಂ ಮಾಜಿ ಅಧ್ಯಕ್ಷ ಗೋವಿಂದರಾಜು ಇದ್ದರು


ಬೆಂಗಳೂರು–ಮೈಸೂರು ಹೆದ್ದಾರಿಯ ಕೆಂಗೇರಿ ಸಮೀಪ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ಸೋಮವಾರ ರಾತ್ರಿ ಉರುಳಿ ಬಿದ್ದು, ಸಂಚಾರ ಅಸ್ತವ್ಯಸ್ತಗೊಂಡಿತ್ತು

ಬೊಮ್ಮಾಯಿ ಬೆಂಬಲಕ್ಕೆ ನಿಂತ ಸ್ವಾಮಿ ಭದ್ರಾನಂದ

ಬೆಂಗಳೂರು: ಕೇರಳ ಮತ್ತು ಪಶ್ಚಿಮ ಬಂಗಾಳಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಉತ್ತಮವಾಗಿದೆ ಎಂದು ತಿರುವನಂತಪುರಂನ ಸನಾತನ ಧರ್ಮ ಪ್ರಚಾರಕ ಸ್ವಾಮಿ ಭದ್ರಾನಂದ ಅಭಿಪ್ರಾಯಪಟ್ಟಿದ್ದಾರೆ.

ಮಂಗಳೂರಿನಲ್ಲಿ ಪ್ರವೀಣ್ ನೆಟ್ಟಾರು ಹತ್ಯೆ ಬಳಿಕ ನಡೆದ ಫಾಜಿಲ್ ಕೊಲೆ ದುರದೃಷ್ಟಕರ. ಆದರೆ ಈ ಕೊಲೆಗಳು ಸಂಭವಿಸಿದ ನಂತರ ಮಂಗಳೂರಿನಲ್ಲಿ ಬಿಗಿ ಪೊಲೀಸ್ ವ್ಯವಸ್ಥೆ ಮಾಡುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಕಾಪಾಡಿದ್ದಾರೆ. ಹಿಂದೂಗಳು ಈ ರಾಜ್ಯದಲ್ಲಿ ಸುರಕ್ಷಿತ. ಆದರೆ ಕೇರಳ ರಾಜ್ಯದಲ್ಲಿ ಇದಕ್ಕೆ ತದ್ವಿರುದ್ಧ ಪರಿಸ್ಥಿತಿ ಇದೆ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪ್ರವೀಣ್ ನೆಟ್ಟಾರು ಹತ್ಯೆ ನಂತರ ಎಲ್ಲರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಹೊಣೆಗಾರರನ್ನಾಗಿ ಮಾಡುತ್ತಿರುವುದು ವಿಷಾದನೀಯ. ಕಳೆದ ಒಂದು ದಶಕದಲ್ಲಿ ಹಿಂದೂ ಸಂಘಟನೆಗಳ 160ಕ್ಕೂ ಹೆಚ್ಚು ಕಾರ್ಯಕರ್ತರ ಹತ್ಯೆಯಾಗಿದೆ. ಆದರೆ ಅಲ್ಲಿನ ಪಿಣರಾಯಿ ವಿಜಯನ್ ಸರ್ಕಾರ ಹಿಂದೂಗಳಿಗೆ ರಕ್ಷಣೆ ನೀಡುವುದರಲ್ಲಿ ವಿಫಲವಾಗಿರುವುದಲ್ಲದೆ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಬೆನ್ನೆಲುಬಾಗಿ ನಿಂತಂತೆ ವರ್ತಿಸುತ್ತಿದೆ ಎಂದು ಆರೋಪಿಸಿದರು.

ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಬಿಜೆಪಿ ಸರ್ಕಾರ ಈ ತರಹದ ಘಟನೆಗಳನ್ನು ನಿಭಾಯಿಸುವಲ್ಲಿ ಯಶಸ್ವಿಯಾಗಿದೆ. ಹಿಜಾಬ್, ಹಲಾಲ್, ಆಜಾನ್ ನಿರ್ಣಯಗಳನ್ನು ರಾಜ್ಯದಲ್ಲಿ ಶಾಂತ ರೀತಿಯಿಂದ ಅನುಷ್ಠಾನಗೊಳಿಸಿರುವುದು ಉಲ್ಲೇಖನೀಯ. ಹಿಂದೂ, ಮುಸ್ಲಿಮರೆಲ್ಲ ಈಗ ಶಾಂತ ರೀತಿಯಿಂದ ವರ್ತಿಸಬೇಕು ಎಂದರು.

ಬೆಂಗಳೂರಿನ ಎನ್‌ಐಎ ಕಚೇರಿ ಮೇಲ್ದರ್ಜೆಗೇರಿಸಿ: ಶೋಭಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ರಾಷ್ಟ್ರೀಯ ತನಿಖಾ ತಂಡದ (ಎನ್‌ಐಎ) ಕಚೇರಿಯನ್ನು ಮೇಲ್ದರ್ಜೆಗೆ ಏರಿಸಿ ಅದರ ವ್ಯಾಪ್ತಿಯನ್ನು ಹಿಗ್ಗಿಸಬೇಕು ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಒತ್ತಾಯಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನವದೆಹಲಿಯಲ್ಲಿ ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದ ಅವರು, 'ದಕ್ಷಿಣ ಕನ್ನಡದ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಬೇಕು' ಎಂದರು.

'ಕರ್ನಾಟಕದಲ್ಲಿ ಇತ್ತೀಚಿನ ದಿನಗಳಲ್ಲಿ ಹಿಂದೂ ಯುವಕರ ಕೊಲೆ ಪ್ರಕರಣಗಳು ನಿರಂತರವಾಗಿ ನಡೆಯುತ್ತಿವೆ. ದಕ್ಷಿಣ ಕನ್ನಡ, ಬೆಂಗಳೂರು, ಮೈಸೂರು, ಶಿವಮೊಗ್ಗದಲ್ಲಿ ಹಿಂದೂ ಕಾರ್ಯಕರ್ತರನ್ನು ಒಂದೇ ಮಾದರಿಯಲ್ಲಿ ಕೊಲೆ ಮಾಡಲಾಗಿದೆ. ಕೇರಳ ಮಾದರಿಯಲ್ಲಿ ಕೊಲೆಗಳು ನಡೆಯುತ್ತಿವೆ. ಇದು ಕಳವಳಕಾರಿ' ಎಂದು ಶೋಭಾ ಹೇಳಿದರು.

'ಕೊಲೆ ಆರೋಪಿಗಳ ಹಿಂದೆ ಯಾರಿದ್ದಾರೆ, ಅವರಿಗೆ ಎಲ್ಲಿ ತರಬೇತಿ ನೀಡಲಾಗುತ್ತಿದೆ, ಈ ಕೃತ್ಯಗಳಿಗೆ ಹಣಕಾಸಿನ ನೆರವು ಎಲ್ಲಿಂದ ಸಿಗುತ್ತಿದೆ ಎಂಬುದನ್ನು ಪತ್ತೆ ಹಚ್ಚಿ ತೀವ್ರಗತಿಯಲ್ಲಿ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಚಿವರನ್ನು ಒತ್ತಾಯಿಸಲಾಗಿದೆ' ಎಂದರು.

'ಸಿ.ಎಂ ಹೇಳಿಕೆ ಹಿಂಪಡೆಯಲಿ'

ಬೆಂಗಳೂರು: 'ರಾಜ್ಯದಲ್ಲಿ ಉತ್ತರ ಪ್ರದೇಶ ಮಾದರಿ ತರುವುದಾಗಿ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಹೇಳಿಕೆಯನ್ನು ಹಿಂಪಡೆಯಬೇಕು' ಎಂದು ಬಹುತ್ವ ಕರ್ನಾಟಕ ಆಗ್ರಹಿಸಿದೆ.

'ಕರಾವಳಿ ಪ್ರದೇಶಗಳಲ್ಲಿ ನಡೆದ ಸರಣಿ ಹತ್ಯೆಗಳಿಂದ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಸದ್ಯ ರಾಜ್ಯ ಮಾನವ ನಿರ್ಮಿತ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿದೆ. ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅವರ ಮಂತ್ರಿಮಂಡಲವೇ ನೇರ ಹೊಣೆ' ಎಂದು ಹಿರಿಯ ವಕೀಲ ಬಿ.ಟಿ. ವೆಂಕಟೇಶ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಎನ್‌ಕೌಂಟರ್‌ಗೆ ಕರೆ ನೀಡಿರುವ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಸಂವಿಧಾನ, ನ್ಯಾಯಾಂಗ ಮತ್ತು ರಾಜ್ಯದ ಪೊಲೀಸ್ ವ್ಯವಸ್ಥೆಯ ಮೇಲೆ ನಂಬಿಕೆಯಿಲ್ಲದಿರುವುದು ಸ್ಪಷ್ಟವಾಗಿದೆ' ಎಂದರು.

'ರಾಜ್ಯ ಸರ್ಕಾರ ಕೇವಲ ಒಂದು ಪಕ್ಷದ ಕಾರ್ಯಕರ್ತರಿಗೆ ಸೀಮಿತವಾಗಿದೆ. ಹತ್ಯೆಯಾದ ತಮ್ಮ ಕಾರ್ಯಕರ್ತರ ಮನೆಗೆ ಭೇಟಿ ನೀಡಿ, ಕೋಮು ದ್ವೇಷಕ್ಕೆ ಕುಮ್ಮಕ್ಕು ನೀಡುವುದರ ಜೊತೆಗೆ ಹಿಂದುತ್ವ ಕಾನೂನು ಪಾಲಿಸುತ್ತೇನೆ ಎಂಬ ಹೇಳಿಕೆ ನೀಡುತ್ತಿರುವುದು ಖಂಡನೀಯ. ಕೂಡಲೇ ಅವರು ಹತ್ಯೆಯಾದ ಫಾಜಿಲ್, ಮಸೂದ್, ಶಹಬಾಜ್, ಸಮೀರ್ ಅವರ ಮನೆಗಳಿಗೂ ಭೇಟಿ ನೀಡಿ ಪರಿಹಾರ ಘೋಷಿಸಬೇಕು' ಎಂದು ಬಹುತ್ವ ಕರ್ನಾಟಕದ ಸಹ ಸಂಚಾಲಕಿ ಮೈತ್ರೇಯಿ ಒತ್ತಾಯಿಸಿದರು.

ಮೈಸೂರು ರೇಸ್

ಫಾರೆಸ್ಟಿ ಗೆಲ್ಲುವ ನಿರೀಕ್ಷೆ

ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾರೆಸ್ಟಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಂಡಂತಿದೆ:

1ನೇ ರೇಸ್: ಕಪ್ಪಡೋಸಿಯಾ 8, ಗೋಲ್ಡ್ ಚಾರ್ಮ್ 1, ಕಂಟ್ರೆಸ್ ಥಂಡರ್ 12
2ನೇ ರೇಸ್: ಕಂಟ್ರೆಸ್ ಫೇಮ್ 3, ಸ್ಪಿರಿಚ್ಯುಯಲ್ ಫೋರ್ಸ್ 5, ಸರ್ಪ್ರೈಸ್ ಪ್ಯಾಕೇಜ್ 9
3ನೇ ರೇಸ್: ಟ್ರೆಮಂಡಸ್ 1, ಲವ್ಲಿ ಥಾಟ್ಸ್ 7, ವಾಟ್ ಈಸ್ ದಿಸ್ 5
4ನೇ ರೇಸ್: ಪವರ್ ಆಫ್ ಥಿಯಾ 7, ಡಿ ಡಿಯರ್ 14, ಲಾರ್ಡ್ ಕಮಾಂಡರ್ 5
5ನೇ ರೇಸ್: ಫಾರೆಸ್ಟಿ 2, ಅಶ್ವ ಯುದ್ಧೀರ್ 1, ಸ್ಟಿಲ್ ಐ ರೈಸ್ 3
6ನೇ ರೇಸ್: ಮೌಂಟೇನ್ ಲಯನ್ 6, ಕೋರ್ಟ್ ಜೆಸ್ಟರ್ 6, ಬ್ರನ್‌ಹಿಲ್ಡ್ 9
7ನೇ ರೇಸ್: ಕೊಯೊಟೆ ಗರ್ಲ್ 8, ನಿಚೆ ಕನ್ನಾಬಿಸ್ 5, ಮಿಸ್ಟಿಕ್ ಮೌಂಟೇನ್ 4


ಉತ್ತಮ ಬೆಟ್: ಮೌಂಟೇನ್ ಲಯನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಗಿರೀಶ್ ಕಾರ್ನಾಡ್ ನೆನಪಿನ ನಾಟಕೋತ್ಸವ • ನಾರಾಯಣ ಘಟ್ಟ ಹೇಳಿಕೆಗೆ ಆಕ್ಷೇಪ

'ಭೀಮ, ದುರ್ಯೋಧನ ಪಾತ್ರ ಅಪ್ರಸ್ತುತ'

ಪ್ರಜಾವಾಣಿ ವಾರ್ತೆ


ನಾರಾಯಣ ಘಟ್ಟ

ಬೆಂಗಳೂರು: 'ಭೀಮ, ದುರ್ಯೋಧನ ಸೇರಿ ರಾಮಾಯಣ ಮತ್ತು ಮಹಾಭಾರತದಲ್ಲಿನ ಪಾತ್ರಗಳನ್ನು ಒಳಗೊಂಡ ಪೌರಾಣಿಕ ನಾಟಕಗಳು ಈಗ ಅಪ್ರಸ್ತುತ' ಎಂಬ ಕವಿ ಪ್ರೊ. ನಾರಾಯಣ ಘಟ್ಟ ಅವರ ಹೇಳಿಕೆಗೆ ಸಭಿಕರು ಆಕ್ಷೇಪ ವ್ಯಕ್ತಪಡಿಸಿದರು.

ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮೂರು ದಿನಗಳ 'ಗಿರೀಶ್ ಕಾರ್ನಾಡ್ ನೆನಪಿನ ನಾಟಕೋತ್ಸವ'ಕ್ಕೆ ಚಾಲನೆ ನೀಡಿ, ಮಾತನಾಡಿದರು. 'ಸಮಾಜದ ವಸ್ತುಗಳನ್ನೇ ಆಯ್ಕೆ ಮಾಡಿಕೊಂಡು ನಾಟಕಗಳನ್ನು ಪ್ರದರ್ಶಿಸಬೇಕು. ಅದೇ ರಾಮಾಯಣ, ಮಹಾಭಾರತವನ್ನು ಹೇಳಲು ಸಾಧ್ಯವಿಲ್ಲ. ಹೊಸದನ್ನು ಕಟ್ಟಿಕೊಡಬೇಕು. ನಾಟಕಗಳ ಮೂಲಕ ಮಕ್ಕಳಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸಬೇಕು' ಎಂದು ಹೇಳಿದರು.

'ಭೀಮ, ದುರ್ಯೋಧನ ಸೇರಿ ವಿವಿಧ ಪೌರಾಣಿಕ ಪಾತ್ರಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಅವೇ ನಾಟಕಗಳ ಜೀವಾಳ' ಎಂದು ನೆರೆದಿದ್ದ ಸಭಿಕರು ಹಾಗೂ ಕಲಾವಿದರು ಗಟ್ಟಿ ಧ್ವನಿಯಲ್ಲಿ ಹೇಳಿ, ನಾರಾಯಣ ಘಟ್ಟ ಅವರ ಹೇಳಿಕೆಗೆ ಅಸಮಾಧಾನ ವ್ಯಕ್ತಪಡಿಸಿದರು.

ಶಿಕ್ಷಣದ ಭಾಗವಾಗಲಿ: 'ನಾಟಕಗಳು ಜನರ ಮನಸ್ಥಿತಿಯನ್ನು ಸಾತ್ವಿಕದ ಕಡೆಗೆ ಕೊಂಡೊಯ್ಯುತ್ತವೆ. ಆದರೆ, ಇತ್ತೀಚಿನ ದಿನಗಳಲ್ಲಿ ನಾಟಕಗಳು ಮಹತ್ವ ಕಳೆದುಕೊಳ್ಳುತ್ತಿವೆ. ರಂಗಭೂಮಿಯನ್ನು ಒಂದು ಕಲೆಯೆಂದು ಮಾತ್ರ ಪರಿಗಣಿಸಲಾಗುತ್ತಿದೆ. ಇದು ಒಂದು ವಿದ್ಯೆ ಎನ್ನುವುದನ್ನು ಅರಿತುಕೊಳ್ಳಬೇಕು. ನಾಟಕಗಳ ಕಲಿಕೆಯನ್ನು ಪ್ರೌಢ ಶಿಕ್ಷಣದ ಹಂತದಲ್ಲಿ ಅಳವಡಿಸಬೇಕು' ಎಂದು ನಾರಾಯಣ ಘಟ್ಟ ಹೇಳಿದರು.

'ರಂಗಭೂಮಿ ಶಿಕ್ಷಣದ ಭಾಗವಾದರೆ ಉದ್ಯೋಗ ಸೃಷ್ಟಿಯಾಗುತ್ತದೆ. ಮಕ್ಕಳಲ್ಲಿನ ಏಕತಾನತೆ ಹೋಗಲಾಡಿಸಲು ಸಾಧ್ಯವಾಗುತ್ತದೆ. ಆದ್ದರಿಂದ ರಂಗ ಶಿಕ್ಷಣಕ್ಕೆ ಆದ್ಯತೆ ನೀಡಿ, ವಾರದಲ್ಲಿ ಒಂದಷ್ಟು ಅವಧಿ ಮೀಸಲಿಡಬೇಕು' ಎಂದು ಆಗ್ರಹಿಸಿದರು.

ರಂಗಕರ್ಮಿ ಬಿ.ವಿ. ರಾಜಾರಾಮ್, 'ಎಲ್ಲ ರಂಗಭೂಮಿಯನ್ನು ಕರ್ನಾಟಕದಲ್ಲಿ ಪ್ರೋತ್ಸಾಹಿಸಲಾಗಿದೆ. ಗಿರೀಶ್ ಕಾರ್ನಾಡ್ ಅವರು ಆಧುನಿಕ ಚಿಂತನೆಯ ನಾಟಕಗಳನ್ನು ಬರೆದಿದ್ದಾರೆ. ಕನ್ನಡವನ್ನು ಅದ್ಭುತವಾಗಿ ಬಳಸಿದ್ದಾರೆ' ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಂ. ಪ್ರಕಾಶ್‌ಮೂರ್ತಿ, 'ರಂಗಭೂಮಿಯಲ್ಲಿ ಅನೇಕ ಒಳನೋಟ ನೋಡಲು ಸಾಧ್ಯ. ನಾನು ಕೂಡ ಭೀಮ, ದುರ್ಯೋಧನನ ಪಾತ್ರ ಮಾಡಿರುವೆ. ಸಾಂಸ್ಕೃತಿಕ ಲೋಕದ ಮೇಲೆ ಸದಾ ಗದಾಪ್ರಹಾರ ನಡೆಯುತ್ತಿದೆ' ಎಂದರು.

ಸಮುದಾಯ ತಂಡದವರು ಗಿರೀಶ್ ಕಾರ್ನಾಡ್ ಅವರ 'ತುಘಲಕ್' ನಾಟಕ ಪ್ರದರ್ಶಿಸಿದರು.








ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಮಣ್ಯ ಸಮೀಪದ ಹರಿಹರ–ಪಲ್ಲತ್ತಡ್ಕ ರಸ್ತೆಯಲ್ಲಿನ ಸೇತುವೆಗೆ ಸಿಲುಕಿದ್ದ ಮರಗಳನ್ನು ಕ್ರೇನ್ ನೆರವಿನಿಂದ ತೆರವುಗೊಳಿಸಲಾಯಿತು (ಮೊದಲ ಚಿತ್ರ) ಕೋಲಾರದಲ್ಲಿ ಜಲಾವೃತಗೊಂಡಿರುವ ಗದ್ದೆ ಕಣ್ಣೂರು ರಸ್ತೆಯಲ್ಲಿ ವಿದ್ಯಾರ್ಥಿನಿಯೊಬ್ಬಳು ಸೈಕಲ್ ತಳ್ಳಿಕೊಂಡು ತೆರಳಿದ ಕ್ಷಣ (ಎರಡನೇ ಚಿತ್ರ) ಮಂಡ್ಯ ಜಿಲ್ಲೆಯ ಹೊಸಬೂದನೂರು ಕೆರೆ ಒಡೆದು ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ಮೇಲೆ ನೀರು ಹರಿಯುತ್ತಿರುವುದು. (ಮೂರನೇ ಚಿತ್ರ)

ಧಾರಾಕಾರ ಮಳೆ: ನಲುಗಿದ ಜನಜೀವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರ ರಾತ್ರಿ ಮತ್ತು ಮಂಗಳವಾರ ಮಳೆ ಆರ್ಭಟಿಸಿದೆ. ಬಹುತೇಕ ಕಡೆ ರಸ್ತೆ, ಕೃಷಿ ಜಮೀನು ಜಲಾವೃತವಾದರೆ, ಇನ್ನೂ ಕೆಲ ಕಡೆ ಮನೆಗಳಲ್ಲಿ ನೀರು ನುಗ್ಗಿತ್ತು.

ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಧಾರಾಕಾರ ಮಳೆಯಾಯಿತು. ಸಿರವಾರ ತಾಲ್ಲೂಕಿನ ಕವಿತಾಳ ಹೋಬಳಿ ವ್ಯಾಪ್ತಿಯ ಹಾಳಾಪುರದ ಹಳ್ಳಕ್ಕೆ ನಿರ್ಮಿಸಿದ್ದ ಹೊಸ ಸೇತುವೆ ಹಾನಿಗೊಂಡಿದೆ. ಕರಿಯಪ್ಪ ತಾತಾ ಜಾತ್ರೆ ಪ್ರಯುಕ್ತ ನಿರ್ಮಿಸಿದ್ದ ಅಂಗಡಿಗಳಿಗೆ ನೀರು ನುಗ್ಗಿದೆ. ಬಾಗಲವಾಡ ಗ್ರಾಮದಲ್ಲಿ ಗುಡಿಸಲುಗಳಿಗೆ ಮಳೆ ನೀರು ನುಗ್ಗಿ ದವಸ ಧಾನ್ಯ, ಹೊದಿಕೆಗಳು ಹಾನಿಯಾಗಿವೆ.

ಗಂಗಾವತಿ ತಾಲ್ಲೂಕಿನ ಸಾಣಾಪುರ ಭಾಗದಲ್ಲಿ ಭತ್ತ ಮತ್ತು ಬಾಳೆ ತೋಟಕ್ಕೆ ನೀರು ನುಗ್ಗಿದೆ. ಹನುಮನಹಳ್ಳಿ, ಜಂಗ್ಲಿ, ಚಿಕ್ಕರಾಂಪುರ, ಬಸವನದುರ್ಗ, ಹೊಸಳ್ಳಿ ಗ್ರಾಮಗಳ ಭತ್ತದ ನಾಟಿ ಬೆಳೆಗಳು ಜಲಾವೃತವಾಗಿವೆ.

ಯಾದಗಿರಿ ಜಿಲ್ಲೆಯ ಸುರಪುರ, ಶಹಾಪುರ, ಹುಣಸಗಿ, ವಡಗೇರಾ, ಗುರುಮಠಕಲ್, ಯಾದಗಿರಿ, ನಾರಾಯಣಪುರ, ಕೆಂಭಾವಿ ಮತ್ತು ಯರಗೋಳದಲ್ಲಿ ರಭಸದ ಮಳೆಯಾಗಿದೆ. ಶಹಾಪುರ ತಾಲ್ಲೂಕಿನ ಇಟಗಾ ಎಸ್ ಗ್ರಾಮದ ಪುರಾತನ ಪರಮಾನಂದೇಶ್ವರ ದೇವ ಸ್ಥಾನದ ಗೋಪುರ ಕುಸಿದು ಬಿದ್ದಿದೆ. ಹುಣಸಗಿ ತಾಲ್ಲೂಕಿನ ರಾಜನಕೊಳ್ಳುರು-ಪರತುನಾಯಕ ತಾಂಡಾಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಜಲಾವೃತವಾಗಿದೆ.

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಗ್ರಾಮಗಳ ವ್ಯಾಪ್ತಿಯಲ್ಲಿನ ಎರಡು ಸಾವಿರ ಎಕರೆ ಪ್ರದೇಶದಲ್ಲಿ ನೀರು ನುಗ್ಗಿದೆ. ಆಳಂದ ತಾಲ್ಲೂಕಿನ ನಿಂಬರ್ಗಾ ಗ್ರಾಮದಲ್ಲಿ ರಭಸವಾಗಿ ಹರಿಯುತ್ತಿದ್ದ ಹಳ್ಳದಲ್ಲಿ ಕೊಚ್ಚಿ ಹೋಗುತ್ತಿದ್ದ ಶ್ರೀಪತಿ ಜಮಾದಾರ ಎಂಬುವರನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಆಳಂದ ತಾಲ್ಲೂಕಿನ ಬಿಲಗುಂದಾ--ದೇಗಾಂವ ಗ್ರಾಮದ ಸೇತುವೆ ಕುಸಿದು, ಸಂಚಾರ ಕಡಿತಗೊಂಡಿದೆ. ಕಲಬುರಗಿ ತಾಲ್ಲೂಕಿನ ಕಡಣಿ ಗ್ರಾಮದ ಮನೆಗಳಿಗೆ ಹಳ್ಳದ ನೀರು ನುಗ್ಗಿದೆ. ಜಮೀನುಗಳು ಜಲಾವೃತವಾಗಿವೆ.

ಉತ್ತರ ಕನ್ನಡದ ಭಟ್ಕಳ, ವಿಜಯನಗರ, ವಿಜಯಪುರ, ಗದಗ, ಬಾಗಲಕೋಟೆಯಲ್ಲಿ ನೂರಾರು ಎಕರೆ ಬೆಳೆ ಹಾನಿಗೀಡಾಗಿದೆ. ಹತ್ತಾರು ಮನೆಗಳು ನೆಲಕ್ಕುರುಳಿವೆ.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕು ಮಳೆಗೆ ತತ್ತರಿಸಿ ಹೋಗಿದೆ. ಸೋಮವಾರ ತಡರಾತ್ರಿ ಒಂದು ಗಂಟೆಯಿಂದ ನಿರಂತರವಾಗಿ ಸುರಿದ ಮಳೆಯು ಹಿಂದೆಂದೂ ಕಂಡರಿಯದಂಥ ಪ್ರವಾಹ ಸೃಷ್ಟಿಸಿತು. ಗುಡ್ಡದ ಮೇಲಿನಿಂದ ಭಾರಿ ಪ್ರಮಾಣದಲ್ಲಿ ಚಿರೆಕಲ್ಲು ಮಿಶ್ರಿತ ಮಣ್ಣು ಕುಸಿದು, ಮನೆ ಸಂಪೂರ್ಣ ನಾಶವಾಗಿದೆ.

ಚೌಥನಿ ನದಿಯು ಉಕ್ಕಿ ಹರಿದು ಪಟ್ಟಣದ ರಸ್ತೆಗಳಲ್ಲಿ ಆಳೆತ್ತರದ ನೀರು ಹರಿಯಿತು. ಮಳೆಯ ಊಹೆಯೂ ಇಲ್ಲದೇ ಮನೆಯಲ್ಲಿ ನಿದ್ರಿಸುತ್ತಿದ್ದ ಜನ ಕಣ್ಣುಬಿಡುವಷ್ಟರಲ್ಲಿ ನೀರು ಮನೆಯೊಳಗೆ ನುಗ್ಗಿತ್ತು.

ಹಲವು ಕಡೆ ಸ್ಥಳೀಯರೇ ಹಗ್ಗವನ್ನು ಬಳಸಿ ಹಲವರನ್ನು ರಕ್ಷಿಸಿದರು. ಅಗ್ನಿಶಾಮಕದಳದವರು ಮೂಡಭಟ್ಕಳ, ಚೌಥನಿ ಹಾಗೂ ಪುರವರ್ಗ ಪ್ರದೇಶಗಳಲ್ಲಿ ದೋಣಿ ಮೂಲಕ ಕಾರ್ಯಾಚರಣೆ ನಡೆಸಿ ಹಲವರನ್ನು ಸುರಕ್ಷಿತ ಪ್ರದೇಶಕ್ಕೆ ಕರೆತಂದರು.

ಮೀನುಗಾರರ ನೂರಾರು ದೋಣಿಗಳು ನೀರು ಪಾಲಾದವು. ಪ್ರವಾಹದ ರಭಸಕ್ಕೆ ಅದೆಷ್ಟೋ ಆಕಳು, ಕರು, ನಾಯಿ, ಕೋಳಿ ಮುಂತಾದ ಸಾಕುಪ್ರಾಣಿಗಳು ಕೊಚ್ಚಿಕೊಂಡು ಹೋದವು.

ಮಣ್ಕುಳಿ, ಪುರವರ್ಗ, ಹೆಬಳೆ, ದಿ ನ್ಯೂ ಇಂಗ್ಲಿಷ್ ಸ್ಕೂಲ್, ಚೌಥನಿ, ಶಿರಾಲಿ ಹಾಗೂ ಮುಂಡಳ್ಳಿ ಭಾಗಗಳಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಶಿರೂರು ಕರಾವಳಿಯಲ್ಲಿ 20ಕ್ಕೂ ಹೆಚ್ಚು ನಾಡದೋಣಿಗಳು ಕಡಲ ಪಾಲಾಗಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	30,580	30,580
ಹಾರಂಗಿ	2,859	2,857.83	1,200	4,020
ಕಬಿನಿ	2284	2,283.78	10,300	11,000
ಹೇಮಾವತಿ	2,922	2,922	6,962	6,900
ಲಿಂಗನಮಕ್ಕಿ	1,819	1,799	30,756	4,431
ಸೂಪಾ (ಮೀ)	564	541.94	2,919	58
ಮಾಣಿ	595	584	1,526	326
ತುಂಗಭದ್ರಾ	1,633	1,632.44	52,247	62,975
ಮಲಪ್ರಭಾ	2079.5	2,069.70	1,609	394
ಘಟಪ್ರಭಾ	2175	2,158.43	2,987	111
ಭದ್ರಾ	186	184	5,319	5,319
ಆಲಮಟ್ಟಿ (ಮೀ)	519.6	518.67	27,501	18,451
ನಾರಾಯಣಪುರ (ಮೀ)	492.25	492.02	60,000	64,000

* ನೆಲಮಟ್ಟದಿಂದ

ವಾಹನ, ರೈಲು ಸಂಚಾರ ಅಸ್ತವ್ಯಸ್ತ

ದಕ್ಷಿಣ ಮತ್ತು ಉತ್ತರ ಭಾರತ ಬೆಸೆಯುವ ಪ್ರಮುಖ ಕೊಂಡಿಯಾಗಿರುವ ರಾಷ್ಟ್ರೀಯ ಹೆದ್ದಾರಿ 66, ಭಟ್ಕಳದಲ್ಲಿ ಸಂಪೂರ್ಣ ಮುಳುಗಡೆಯಾಯಿತು. ಮೂಡಭಟ್ಕಳ ಪುರವರ್ಗ ಪ್ರದೇಶದಲ್ಲಿ ಗೋಪಿನಾಥ ನದಿ ಉಕ್ಕಿ ಹರಿಯಿತು.

ವೆಂಕಟಾಪುರದ ಹುಲ್ಲುಕ್ಕಿ ಬಳಿ ರೈಲ್ವೆ ಹಳಿಯ ಸ್ಲೀಪರ್‌ಗಳು ನೀರಿನಲ್ಲಿ ಕೊಚ್ಚಿಕೊಂಡು ಹೋದವು. ಒಂದೆರಡು ಕಡೆ ಹಳಿಗಳ ಮೇಲೆ ಗುಡ್ಡದ ಮಣ್ಣು, ಕಲ್ಲುಗಳೂ ಬಿದ್ದವು. ಹಾಗಾಗಿ ಕೊಂಕಣ ರೈಲ್ವೆ ಮಾರ್ಗದಲ್ಲಿ ಸಂಚಾರವು ಅಸ್ತವ್ಯಸ್ತವಾಯಿತು. ಬೆಂಗಳೂರು– ಕಾರವಾರ, ಪುಣೆ ಎಕ್ಸ್‌ಪ್ರೆಸ್ ಸೇರಿದಂತೆ ಹಲವು ರೈಲುಗಳನ್ನು ಸಮೀಪದ ನಿಲ್ದಾಣಗಳಲ್ಲಿ ತಾಸುಗಟ್ಟಲೆ ನಿಲುಗಡೆ ಮಾಡಲಾಗಿತ್ತು. ಸಂಜೆ 5.30ರ ಸುಮಾರಿಗೆ ದುರಸ್ತಿ ಮಾಡಿ, ರೈಲು ಸಂಚಾರ ಪುನರಾರಂಭವಾಯಿತು.

ಮಾರ್ಗ ಬದಲಾವಣೆ

ಮಂಡ್ಯ: ಬೆಂಗಳೂರು–ಮೈಸೂರು ನಡುವಿನ ಸಂಪರ್ಕ ಬಂದ್ ಆಗಿದ್ದು, ಬೆಂಗಳೂರು ಕಡೆಯಿಂದ ಬರುವ ವಾಹನಗಳನ್ನು ಮದ್ದೂರಿನಲ್ಲೇ ತಡೆಯಲಾಗುತ್ತಿದೆ. ಭಾರತೀನಗರ ಮೂಲಕ ಮಂಡ್ಯ ತಲುಪುತ್ತಿವೆ. ಮೈಸೂರು ಕಡೆಯಿಂದ ಬರುವ ವಾಹನಗಳು ಮಂಡ್ಯದ ಗುತ್ತಲು ರಸ್ತೆ, ಭಾರತೀನಗರ ಮೂಲಕ ಮದ್ದೂರು ತಲುಪುತ್ತಿವೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮಳೆ ವಿವರ (ಸೆಂ.ಮೀಗಳಲ್ಲಿ)

ಶಿರೂರು (ಬೈಂದೂರು ತಾ.)	54.8
ಸುಬ್ರಹ್ಮಣ್ಯ	28.35
ಚಕ್ರಾ (ಹೊಸನಗರ)	19
ಸಾವೆಹಕ್ಲು	15.40
ಸಾಗರ	14.51
ಮುರುಂಡಿ	14.5
ಮುಳಬಾಗಿಲು	13.6
ಇಕ್ಕನೂರು	13.5
ಕಾರಟಗಿ	11.06
ಶ್ರೀನಿವಾಸಪುರ	11.2
ಮಂಡ್ಯ	10.8
ಮಸ್ಕಿ	10.4
ಭಾಗಮಂಡಲ	10
ಸಂಪಾಜೆ	14



ತ್ರಿಶ್ಶೂರ್ ಜಿಲ್ಲೆಯ ಚಾಲಕ್ಕುಡಿ ನದಿಯು ಉಕ್ಕಿ ಹರಿಯುತ್ತಿದ್ದು, ನದಿಯ ಮಧ್ಯಭಾಗದಲ್ಲಿ ಆನೆಯೊಂದು ಮಂಗಳವಾರ ಸಿಲುಕಿಕೊಂಡಿತ್ತು. ಐದು ತಾಸು ಪ್ರಯತ್ನಪಟ್ಟು ದಡ ಸೇರುವಲ್ಲಿ ಆನೆ ಯಶಸ್ವಿಯಾಗಿದೆ –ಪಿಟಿಐ ಚಿತ್ರ

ಕೇರಳದಲ್ಲಿ ಭಾರಿ ಮಳೆ: 10 ಜಿಲ್ಲೆಗಳಲ್ಲಿ ರೆಡ್ ಅಲರ್ಟ್

ತಿರುವನಂತಪುರ (ಪಿಟಿಐ): ಕೇರಳದಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಭೂಕುಸಿತ ಉಂಟಾಗಿದೆ. ನದಿಗಳ ನೀರಿನ ಮಟ್ಟವು ಹೆಚ್ಚಿದ್ದು, ಹಲವು ಅಣೆಕಟ್ಟುಗಳು ತುಂಬಿವೆ. ಹವಾಮಾನ ಇಲಾಖೆಯು ರಾಜ್ಯದ ದಕ್ಷಿಣ ಭಾಗದ 10 ಜಿಲ್ಲೆಗಳಲ್ಲಿ ಮಂಗಳವಾರ ರೆಡ್ ಅಲರ್ಟ್ ಘೋಷಿಸಿದೆ.

ಕಣ್ಣೂರು ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಸಂಭವಿಸಿದ ಭೂಕುಸಿತದಲ್ಲಿ ಎರಡೂವರೆ ವರ್ಷದ ಮಗು ಹಾಗೂ 45 ವರ್ಷ ವ್ಯಕ್ತಿ ಮೃತಪಟ್ಟಿದ್ದಾರೆ. 55 ವರ್ಷದ ವ್ಯಕ್ತಿ ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು. ಅಣೆಕಟ್ಟುಗಳ ನೀರಿನ ಮಟ್ಟವು ಹೆಚ್ಚಿದ್ದು, ಇಡುಕ್ಕಿ ಜಿಲ್ಲೆಯ ಐದು ಅಣೆಕಟ್ಟುಗಳು ಮತ್ತು ಪತ್ತನಂತಿಟ್ಟ, ತ್ರಿಶ್ಶೂರ್ ಜಿಲ್ಲೆಯ ಕೆಲವು ಅಣೆಕಟ್ಟುಗಳ ನೀರಿನ ಸಂಗ್ರಹವು ಅಪಾಯದ ಮಟ್ಟ ಮುಟ್ಟಿದೆ.

ಸೋಮವಾರ ತ್ರಿಶ್ಶೂರ್ ಬಂದರಿನಿಂದ ಮೀನುಗಾರಿಕೆಗೆ ತೆರಳಿದ್ದ ಆರು ಮಂದಿ ಮೀನುಗಾರರ ಪೈಕಿ ನಾಲ್ವರು ಸುರಕ್ಷಿತವಾಗಿ ದಡ ಸೇರಿದ್ದಾರೆ. ಆದರೆ, ಇಬ್ಬರು ಮೀನುಗಾರರು ಕಾಣೆಯಾಗಿದ್ದಾರೆ. ಕರಾವಳಿ ಕಾವಲುಪಡೆಯು ಕಾಣೆಯಾದವರ ಹುಡುಕಾಟ ನಡೆಸಿದೆ.

ಆಗಸ್ಟ್ 5ರ ವರೆಗೆ ರಾಜ್ಯದಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ಜಿಲ್ಲಾಡಳಿತವು ಹಲವು ಜಿಲ್ಲೆಗಳಲ್ಲಿ ಪರಿಹಾರ ಶಿಬಿರಗಳನ್ನು ಆರಂಭಿಸಲಾಗಿದೆ. ಇಡುಕ್ಕಿ ಜಿಲ್ಲೆಯ ಪ್ರವಾಸಿತಾಣಗಳನ್ನು ಮುಚ್ಚಲಾಗಿದೆ. ರೆಡ್ ಅಲರ್ಟ್ ಘೋಷಿಸಿರುವ ಬೆನ್ನಲ್ಲೇ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, 'ಜನರು ಬಹಳ ಎಚ್ಚರಿಕೆಯಿಂದ ಇರಬೇಕು. ವಿಪತ್ತು ನಿರ್ವಹಣಾ ಅಧಿಕಾರಿಗಳು ನೀಡುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ಜನರಲ್ಲಿ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ನಾಲ್ಕು ದಿನ ಭಾರಿ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ನಾಲ್ಕು ದಿನಗಳು ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ನೈರುತ್ಯ ಮುಂಗಾರು ದಕ್ಷಿಣ ಒಳನಾಡಿನಲ್ಲಿ ತೀವ್ರವಾಗಿದ್ದು, ಉತ್ತರ ಒಳನಾಡಿನಲ್ಲಿ ಚುರುಕುಗೊಂಡಿದೆ. ಉತ್ತರ ಕನ್ನಡ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ ಬುಧವಾರ 'ರೆಡ್ ಅಲರ್ಟ್' ಘೋಷಿಸಲಾಗಿದೆ. ಶಿವಮೊಗ್ಗ ಜಿಲ್ಲೆಗೆ 'ಆರೆಂಜ್ ಅಲರ್ಟ್', ಬೀದರ್, ಕಲಬುರ್ಗಿ, ವಿಜಯಪುರ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ತುಮಕೂರು, ಹಾಸನ ಹಾಗೂ ಮೈಸೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. 24 ಗಂಟೆಗಳ ಅವಧಿಯಲ್ಲಿ ಕರಾವಳಿಯ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಡಿ.ಕೆ. ಶಿವಕುಮಾರ್‌ಗೆ ಜಾಮೀನು

ಹಣ ಅಕ್ರಮ ವರ್ಗಾವಣೆ: ಇ.ಡಿ ನ್ಯಾಯಾಲಯ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಇತರ ನಾಲ್ವರು ಆರೋಪಿಗಳಿಗೆ ಇಲ್ಲಿನ ಚುನಾಯಿತ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ (ಇ.ಡಿ. ನ್ಯಾಯಾಲಯ) ಮಂಗಳವಾರ ಜಾಮೀನು ನೀಡಿದೆ.

ಶಿವಕುಮಾರ್ ಹಾಗೂ ಇತರ ಆರೋಪಿಗಳ ವಕೀಲರು ಹಾಗೂ ಇ.ಡಿ. ವಕೀಲರ ವಾದವನ್ನು ಆಲಿಸಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಕಾಸ್ ದುಲ್ ಅವರು ಜಾಮೀನು ಆದೇಶವನ್ನು ಶನಿವಾರ ಕಾಯ್ದಿರಿಸಿದ್ದರು. ಮಂಗಳವಾರ ಜಾಮೀನು ಆದೇಶ ಪ್ರಕಟಿಸಿದ ಅವರು, 'ಪ್ರತಿಯೊಬ್ಬ ಆರೋಪಿ ತಲಾ ₹1 ಲಕ್ಷದ ಬಾಂಡ್ ಅನ್ನು ಖಾತರಿಯಾಗಿ ನೀಡಬೇಕು. ಅನುಮತಿಯಿಲ್ಲದೆ ವಿದೇಶ ಪ್ರವಾಸ ಮಾಡಬಾರದು. ಪ್ರಕರಣದ ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು' ಎಂದು ಸೂಚಿಸಿದರು.

ಶಿವಕುಮಾರ್, ಅವರ ನಿಕಟವರ್ತಿಗಳಾದ ಉದ್ಯಮಿ ಸಚಿನ್ ನಾರಾಯಣ್, ಶರ್ಮಾ ಟ್ರಾನ್ಸ್‌ಪೋರ್ಟ್ ಮಾಲೀಕ ಸುನೀಲ್ ಕುಮಾರ್ ಶರ್ಮಾ, ದೆಹಲಿಯ ಆಂಜನೇಯ ಹನುಮಂತಯ್ಯ ಮತ್ತು ರಾಜೇಂದ್ರ ಎನ್. ವಿರುದ್ಧ ವಿಚಾರಣೆ ಆರಂಭಿಸುವಂತೆ ಕೋರಿ ನ್ಯಾಯಾಲಯಕ್ಕೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಆರೋಪ ಪಟ್ಟಿ ಸಲ್ಲಿಸಿದ್ದರು. ಈ ವರದಿಯನ್ನು ಮಾನ್ಯ ಮಾಡಿದ ನ್ಯಾಯಾಲಯವು ಜುಲೈ 1ರಂದು ವಿಚಾರಣೆಗೆ ಹಾಜರಾಗುವಂತೆ ಎಲ್ಲ ಆರೋಪಿಗಳಿಗೂ ಸಮನ್ಸ್ ಜಾರಿ ಮಾಡಿತ್ತು.

2017ರಲ್ಲಿ ಶಿವಕುಮಾರ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ಆಗ, ದೆಹಲಿಯ ವಿವಿಧ ಸ್ಥಳಗಳಲ್ಲಿ ₹8.59 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು. ಬಳಿಕ ಶಿವಕುಮಾರ್ ಅವರನ್ನು ಬಂಧಿಸಲಾಯಿತು. ನಂತರ ಅವರಿಗೆ ನ್ಯಾಯಾಲಯ ಜಾಮೀನು ನೀಡಿತ್ತು. ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ತನಿಖೆ ನಡೆಸಿತ್ತು. ಎಲ್ಲ ಆರೋಪಿಗಳಿಗೆ ದೆಹಲಿ ಹೈಕೋರ್ಟ್ ಈ ಹಿಂದೆ ಮಧ್ಯಂತರ ಜಾಮೀನು ನೀಡಿತ್ತು.

ನ್ಯಾಯ ಸಿಕ್ಕಿದೆ: ಶಿವಕುಮಾರ್

'ನಾವು ಯಾವುದೇ ತಪ್ಪು ಮಾಡಿಲ್ಲ. ಕೃಷಿ ಹಾಗೂ ವ್ಯವಹಾರ ಮಾಡಿಕೊಂಡು ರಾಜಕೀಯ ಕ್ಷೇತ್ರದಲ್ಲಿ ಇದ್ದೇವೆ. 2017ರಲ್ಲಿ ಗುಜರಾತ್ ರಾಜ್ಯಸಭಾ ಚುನಾವಣೆಯ ಬಳಿಕ ಆದಾಯ ತೆರಿಗೆ ಇಲಾಖೆಯವರು ನನ್ನ ಮನೆಯ ಮೇಲೆ ದಾಳಿ ಮಾಡಿದರು. ಬಳಿಕ ಪ್ರಕರಣವನ್ನು ಇ.ಡಿ.ಗೆ ಹಸ್ತಾಂತರಿಸಿದರು. ಈಗ ನ್ಯಾಯಾಧೀಶರು ಜಾಮೀನು ನೀಡಿದ್ದು, ನ್ಯಾಯ ಸಿಕ್ಕಿದೆ' ಎಂದು ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನನ್ನ ನಾಲ್ಕು ಗೆಳೆಯರನ್ನು ಆರೋಪಿಗಳನ್ನಾಗಿ ಮಾಡಲಾಗಿತ್ತು. ಇದರಿಂದ ಮನಸ್ಸಿಗೆ ಬಹಳ ಬೇಸರವಾಗಿತ್ತು. ಈಗ ಅವರಿಗೂ ಜಾಮೀನು ಸಿಕ್ಕಿದ್ದು ಹೆಚ್ಚು ಖುಷಿ ಕೊಟ್ಟಿದೆ' ಎಂದರು.

ಪ್ರವೀಣ್ ಹತ್ಯೆ: ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಣಿ ಸದಸ್ಯ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣ ಸಂಬಂಧ ಪೊಲೀಸರು ಮತ್ತೆ ಇಬ್ಬರನ್ನು ಮಂಗಳವಾರ ಬಂಧಿಸಿದ್ದಾರೆ.

ಬೆಳ್ಳಾರೆ ಪಳ್ಳಿಮಜಲು ನಿವಾಸಿಗಳಾದ ಸದ್ದಾಂ (32) ಹಾಗೂ ಹ್ಯಾರಿಸ್ (42) ಬಂಧಿತರು. ಆರೋಪಿಗಳ ವಿರುದ್ಧ 1967ರ ಕಾನೂನು ಬಾಹಿರ ಚಟುವಟಿಕೆ (ತಡೆ) ಕಾಯ್ದೆಯ (ಯುಎಪಿಎ) ಸೆಕ್ಷನ್ 16 ಹಾಗೂ ಸೆಕ್ಷನ್ 18ರ ಅಡಿ ಎಫ್‌ಐಆರ್ ದಾಖಲಾಗಿದೆ.

ಭಯೋತ್ಪಾದನಾ ಚಟುವಟಿಕೆಯಲ್ಲಿ ಭಾಗಿ ಆದವರ ವಿರುದ್ಧ ಯುಎಪಿ ಕಾಯ್ದೆಯ ಈ ಸೆಕ್ಷನ್ 16ರ ಅಡಿ ಪ್ರಕರಣ ದಾಖಲಿಸಲಾಗುತ್ತದೆ. ಭಯೋತ್ಪಾದನಾ ಚಟುವಟಿಕೆಯಿಂದ ವ್ಯಕ್ತಿ ಮೃತಪಟ್ಟಿದ್ದು ಸಾಬೀತಾದರೆ ಆರೋಪಿಗೆ ಮರಣದಂಡನೆ, ಜೀವಾವಧಿ ಶಿಕ್ಷೆ ಅಥವಾ ದಂಡ ವಿಧಿಸಲು ಯುಎಪಿ ಕಾಯ್ದೆಯ ಸೆಕ್ಷನ್ 16 (i) ಅವಕಾಶ ಕಲ್ಪಿಸುತ್ತದೆ. ಭಯೋತ್ಪಾದನಾ ಚಟುವಟಿಕೆಗೆ ಸಂಚು ರೂಪಿಸಿದವರ ವಿರುದ್ಧ ಪ್ರಕರಣ ದಾಖಲಿಸಲು ಈ ಕಾಯ್ದೆಯ ಸೆಕ್ಷನ್ 18 ಅನ್ನು ಬಳಸಲಾಗುತ್ತದೆ.

'ಪ್ರಕರಣದಲ್ಲಿ ಜಾಕೀರ್, ಶಫೀಕ್ ಅವರನ್ನು ಜು.28ರಂದು ಬಂಧಿಸಿದ್ದೆವು. ಅವರ ವಿಚಾರಣೆ ವೇಳೆ ಸಿಕ್ಕ ಸುಳಿವು ಆಧರಿಸಿ ಸದ್ದಾಂ ಹಾಗೂ ಹ್ಯಾರಿಸ್‌ನನ್ನು ಬಂಧಿಸಿದ್ದೇವೆ. ಬಂಧಿತ ನಾಲ್ವರೂ ಹತ್ಯೆಯ ಸಂಚಿನಲ್ಲಿ ಭಾಗಿಯಾಗಿದ್ದವರು. ಹತ್ಯೆ ನಡೆಸಿದವರು ಯಾರು ಎಂಬುದು ಖಚಿತವಾಗಿದೆ. ಮೂವರು ಸೇರಿ ಹತ್ಯೆ ನಡೆಸಿದ ಮಾಹಿತಿ ಇದೆ. ಅವರನ್ನು ಬಂಧಿಸಬೇಕಿದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ್ ಸೋನಾವಣೆ ತಿಳಿಸಿದರು.

'ತನಿಖೆ ಪೂರ್ಣಗೊಂಡ ಬಳಿಕವಷ್ಟೇ ಈ ಘಟನೆ ಹಿಂದೆ ಯಾವುದಾದರೂ ಸಂಘಟನೆಯ ಕೈವಾಡ ಇದೆಯೋ ಎಂಬ ಬಗ್ಗೆ ಖಚಿತವಾಗಿ ಹೇಳಬಹುದು. ಕೃತ್ಯದ ಹಿಂದೆ ನಿರ್ದಿಷ್ಟ ಸಂಘಟನೆಯ ಪಾತ್ರ ಇದೆಯೇ ಎಂದು ಈ ಹಂತದಲ್ಲಿ ಹೇಳಲಾಗದು. ಒಂದೇ ಗ್ರಾಮದವರು ಸೇರಿ ಈ ಹತ್ಯೆಗೆ ಸಂಚು ರೂಪಿಸಿದ್ದಾರೆ. ಇದೊಂದು ಯೋಜಿತ ಕೃತ್ಯ ಎಂದಷ್ಟೇ ಹೇಳಬಲ್ಲೆ' ಎಂದು ಸೋನಾವಣೆ ತಿಳಿಸಿದರು.

ಕೃತ್ಯದಲ್ಲಿ ಭಾಗಿಯಾಗಿದ್ದವರ ಜೊತೆ ನಂಟು ಹೊಂದಿದ್ದವರ ಚಲನ-ವಲನಗಳ ಮೇಲೂ ಪೊಲಿಸರು ಕಣ್ಣಿಟ್ಟಿದ್ದಾರೆ. ಬಂಧಿತ ಆರೋಪಿಗಳಲ್ಲಿ ಒಬ್ಬನಾದ ಸದ್ದಾಂ ಬೆಳ್ಳಾರೆಯಲ್ಲಿ ಕೋಳಿ ಅಂಗಡಿ ಹೊಂದಿದ್ದಾನೆ. ಕೃತ್ಯದಲ್ಲಿ ಭಾಗಿಯಾಗಿದ್ದಾನೆ ಎನ್ನಲಾದ ಇನ್ನೊಬ್ಬ ಆರೋಪಿ ಹಾಗೂ ಸದ್ದಾಂ, ಕೃತ್ಯ ನಡೆದ ದಿನ ಒಟ್ಟಿಗೆ ಇದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಸೂದ್ ಕೊಲೆ ಆದ ಬಳಿಕ ನಿರ್ಮಾಣವಾದ ಪರಿಸ್ಥಿತಿಯ ಲಾಭ ಪಡೆಯಲು ಕೊಲೆ ನಡೆಸಿರುವ ಸಾಧ್ಯತೆ ನಿಚ್ಚಳವಾಗಿದೆ. ಇಂತಹ ವ್ಯಕ್ತಿಯನ್ನೇ ಕೊಲ್ಲಬೇಕು ಎಂಬ ಬಗ್ಗೆ ಆರೋಪಿಗಳಿಗೆ ಖಚಿತತೆ ಇರಲಿಲ್ಲ. ನಿರ್ದಿಷ್ಟ ಸಮುದಾಯದ ಯಾರನ್ನಾದರೂ ಕೊಲೆ ನಡೆಸಲು ಆರೋಪಿಗಳು ಹೊಂಚು ಹಾಕಿದ್ದರು. ಆದರೆ ಅವರು ಕೊಲ್ಲಲು ಉದ್ದೇಶಿಸಿದ್ದ ವ್ಯಕ್ತಿಗಳು ಒಂಟಿಯಾಗಿ ಅವರ ಕೈಗೆ ಸಿಕ್ಕಿರಲಿಲ್ಲ. ಕೊನೆಗೆ ಸುಲಭದಲ್ಲಿ ಕೈಗೆ ಸಿಕ್ಕಿದ್ದ ಪ್ರವೀಣ್ ಅವರನ್ನು ಹತ್ಯೆ ಮಾಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹತ್ಯೆಗೆ ಕೆಲವು ವ್ಯಕ್ತಿಗಳನ್ನು ಗುರಿಯಾಗಿ ಇಟ್ಟುಕೊಂಡಿದ್ದರ ಬಗ್ಗೆ ಮಾಹಿತಿ ಕಲೆ ಹಾಕಿದ್ದೇವೆ. ಅವರ ರಕ್ಷಣೆಗೆ ಕ್ರಮ ಕೈಗೊಂಡಿದ್ದೇವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಪಿಎಫ್‌ಐ, ಎಸ್‌ಡಿಪಿಐಗಳು ಬಿಜೆಪಿ ಸಾಕಿರುವ ಸಂಘಟನೆ'

ಹುಬ್ಬಳ್ಳಿ: 'ಪಿಎಫ್‌ಐ, ಎಸ್‌ಡಿಪಿಐ ಸಂಘಟನೆಗಳಿಗೆ ಕಾಂಗ್ರೆಸ್ ಕುಮ್ಮಕ್ಕು ನೀಡುತ್ತಿಲ್ಲ. ಮತ ವಿಭಜನೆಗಾಗಿ ಬಿಜೆಪಿಯೇ ಅವುಗಳನ್ನು ಸಾಕಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ಸಂಘಟನೆಗಳ ನಿಷೇಧಕ್ಕೆ ಕಾಂಗ್ರೆಸ್ ಎಂದೂ ಅಡ್ಡಿಯಾಗಿಲ್ಲ. ಯಾವ ಸಂಘಟನೆಯಾದರೂ ಪ್ರಾಣ ತೆಗೆಯಲು ಮುಂದಾದರೆ ಸಹಿಸಲು ಸಾಧ್ಯವಿಲ್ಲ. ಸಂಘಟನೆಗಳ ವಿರುದ್ಧ ಆರೋಪಿಸುತ್ತ ಕಾಲಹರಣ ಮಾಡದೆ, ಸಾಕ್ಷ್ಯಾಧಾರಗಳಿದ್ದರೆ ನಿಷೇಧಿಸಬೇಕು' ಎಂದು ಆಗ್ರಹಿಸಿದರು.

'ಮಂಕಿಪಾಕ್ಸ್: ಒಂದು ಶಂಕಿತ ಪ್ರಕರಣ'

ಬೆಂಗಳೂರು: 'ರಾಜ್ಯದಲ್ಲಿ ಮಂಕಿಪಾಕ್ಸ್ ಸೋಂಕಿನ ಮೂರು ಶಂಕಿತ ಪ್ರಕರಣಗಳ ಮಾದರಿಗಳನ್ನು ಪರೀಕ್ಷೆಗೆ ರವಾನಿಸಿದ್ದು, ಎರಡರಲ್ಲಿ 'ನೆಗೆಟಿವ್' ವರದಿ ಬಂದಿದೆ. ಒಂದು ಶಂಕಿತ ಪ್ರಕರಣದ ವರದಿಯಷ್ಟೇ ಬರಬೇಕಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಮಂಕಿಪಾಕ್ಸ್ ನಿಯಂತ್ರಣ ಮತ್ತು ಸೋಂಕಿತರಿಗೆ ಚಿಕಿತ್ಸೆಗೆ ಸಂಬಂಧಿಸಿ ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಸಭೆಯ ಬಳಿಕ ಮಾತನಾಡಿದ ಅವರು, 'ಮೂರು ಪ್ರಕರಣಗಳ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿತ್ತು. ಬೆಂಗಳೂರಿನ ಇಬ್ಬರ ವರದಿ ನೆಗೆಟಿವ್ ಬಂದಿದೆ. ಬೆಲ್ಜಿಯಂನಿಂದ ಬಂದಿದ್ದು, ಉತ್ತರ ಕನ್ನಡ ಜಿಲ್ಲೆಯ ವ್ಯಕ್ತಿಯೊಬ್ಬರ ಮಾದರಿ ಪರೀಕ್ಷಾ ವರದಿ ಬರಬೇಕಿದೆ' ಎಂದರು.

'ಕರ್ನಾಟಕದಲ್ಲಿ ಜನರು ಆತಂಕಪಡಬೇಕಾದ ಪರಿಸ್ಥಿತಿ ಇಲ್ಲ ಎಂದು ಹೇಳಿದರು. ಕೇರಳದ ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರಕ್ಕೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಬೆಂಗಳೂರಿನ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಮತ್ತು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗಳನ್ನು ಮಂಕಿಪಾಕ್ಸ್ ಸೋಂಕಿತರ ಚಿಕಿತ್ಸೆಗೆ ನಿಗದಿಪಡಿಸಲಾಗಿದೆ ಎಂದು ಹೇಳಿದರು.

ಪರೀಕ್ಷೆ ಮರುದಿನವೇ ಕೀಲಿ ಕೈ ಕೊಟ್ಟಿದ್ದ ಎಡಿಜಿಪಿ

'ಸಿಐಡಿ' ಕಣ್ತಪ್ಪಿಸಿ ಒಎಂಆರ್ ತಿದ್ದುಪಡಿ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪಿಎಸ್‌ಐ ನೇಮಕಾತಿಗಾಗಿ ಪರೀಕ್ಷೆ ಬರೆದಿದ್ದ 27 ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ನೇಮಕಾತಿ ವಿಭಾಗದ ಪ್ರಥಮದರ್ಜೆ ಸಹಾಯಕರಾದ (ಎಫ್‌ಡಿಎ) ಹರ್ಷ, ಶ್ರೀನಿವಾಸ್ ಅವರೇ ತಿದ್ದುಪಡಿ ಮಾಡಿದ್ದರೆಂಬುದು ತನಿಖೆಯಿಂದ ಹೊರಬಿದ್ದಿದೆ.

'ವಿಭಾಗದ ಮುಖ್ಯಸ್ಥ ಎಡಿಜಿಪಿ ಅಮ್ರಿತ್ ಪೌಲ್ ಹಾಗೂ ಡಿವೈಎಸ್ಪಿ ಶಾಂತಕುಮಾರ್ ಅವರ ಸೂಚನೆಯಂತೆ ತಿದ್ದುಪಡಿ ನಡೆದಿತ್ತು. ಈ ಬಗ್ಗೆ ಹರ್ಷ, ಶ್ರೀನಿವಾಸ್ ತಪ್ಪೊಪ್ಪಿಗೆ ನೀಡಿದ್ದಾರೆ' ಎಂದು ಅಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

'ಅರಮನೆ ರಸ್ತೆಯಲ್ಲಿ ಸಿಐಡಿ ಕಚೇರಿಗಳಿವೆ. ಮುಖ್ಯಕಟ್ಟಡದಲ್ಲಿ ಎಡಿಜಿಪಿ, ಐಜಿಪಿ ಅವರ ಕೊಠಡಿ ಹಾಗೂ ಅನೆಕ್ಸ್-1ರ ಕಟ್ಟಡದಲ್ಲಿ ಸಿಐಡಿಯ ಎಸ್ಪಿಗಳ ಕೊಠಡಿಗಳಿವೆ. ಇದೇ ಕಟ್ಟಡದಲ್ಲೇ ಪೊಲೀಸ್ ನೇಮಕಾತಿ ವಿಭಾಗದ ಕಚೇರಿಯಿದ್ದು, ನೆಲ ಮಹಡಿಯ ಕೊಠಡಿಯನ್ನೇ ಭದ್ರತಾ ಕೊಠಡಿಯನ್ನಾಗಿ ಮಾಡಿಕೊಳ್ಳಲಾಗಿತ್ತು.'

'ಅಧಿಕಾರಿಗಳು ಹಾಗೂ ಸಿಬ್ಬಂದಿ ನಿತ್ಯ 10.30ಕ್ಕೆ ಕಚೇರಿಗೆ ಬರುತ್ತಾರೆ. ಬಳಿಕ, ಕೆಲಸ ನಿಮಿತ್ತ ನೇಮಕಾತಿ ವಿಭಾಗ ಹಾಗೂ ಭದ್ರತಾ ಕೊಠಡಿ ಎದುರು ಓಡಾಡುತ್ತಿರುತ್ತಾರೆ. ಇದನ್ನು ತಿಳಿದಿದ್ದ ಶಾಂತಕುಮಾರ್ ಹಾಗೂ ಎಫ್‌ಡಿಎಗಳು, ಸಿಐಡಿ ಕಣ್ತಪ್ಪಿಸಿ ನಸುಕಿನಲ್ಲೇ ಒಎಂಆರ್ ಪ್ರತಿ ತಿದ್ದುಪಡಿ ಮಾಡಲು ಸಂಚು ರೂಪಿಸಿದ್ದರು' ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

ಪರೀಕ್ಷೆ ಮರುದಿನವೇ ಕೀ ಕೊಟ್ಟ ಎಡಿಜಿಪಿ: '2021ರ ಅಕ್ಟೋಬರ್ 3ರಂದು ಪರೀಕ್ಷೆ ನಡೆದಿತ್ತು. ಅಭ್ಯರ್ಥಿಗಳ ಒಎಂಆರ್ ಮೂಲ ಪ್ರತಿಗಳನ್ನು ಟ್ರಂಕ್‌ನಲ್ಲಿ ಸಂಗ್ರಹಿಸಿ, ಬೆಂಗಳೂರಿನಲ್ಲಿರುವ ನೇಮಕಾತಿ ವಿಭಾಗದ ಭದ್ರತಾ ಕೊಠಡಿಯಲ್ಲಿ ಇರಿಸಲಾಗಿತ್ತು. ಕೊಠಡಿಗೆ ಹಾಕಿದ್ದ ಬೀಗಕ್ಕೆ ಎರಡು ಕೀಗಳಿದ್ದವು. ಒಂದು ಎಡಿಜಿಪಿ ಅಮ್ರಿತ್ ಪೌಲ್ ಬಳಿ ಇದ್ದರೆ, ಮತ್ತೊಂದು ವಿಭಾಗದ ಸೂಪರಿಂಟೆಂಡೆಂಟ್ ಬಳಿ ಇತ್ತು' ಎಂಬ ಮಾಹಿತಿಯನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಅಕ್ಟೋಬರ್ 4ರಂದು ಅಮ್ರಿತ್ ಪೌಲ್ ತಮ್ಮ ಬಳಿ ಇದ್ದ ಕೀಯನ್ನು ಶಾಂತಕುಮಾರ್‌ಗೆ ನೀಡಿದ್ದರು. ಅದೇ ಕೀಯನ್ನು ಹರ್ಷ ಹಾಗೂ ಶ್ರೀನಿವಾಸ್‌ಗೆ ನೀಡಿದ್ದ ಶಾಂತಕುಮಾರ್ ಯಾರಿಗೂ ಅನುಮಾನ ಬಾರದಂತೆ ಒಎಂಆರ್ ತಿದ್ದಲು ಸೂಚಿಸಿದ್ದರು.'

'ಅಕ್ಟೋಬರ್ 7, 8 ಹಾಗೂ 16ನೇ ತಾರೀಕಿನಂದು ಬೆಳಿಗ್ಗೆ 6.30ರಿಂದ ಬೆಳಿಗ್ಗೆ 9.30ರ ಅವಧಿಯಲ್ಲಿ ಭದ್ರತಾ ಕೊಠಡಿ ತೆರೆದಿದ್ದ ಆರೋಪಿಗಳು, ತಮಗೆ ಸೂಚಿಸಿದ್ದ ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ಟ್ರಂಕ್‌ನಿಂದ ಹೊರತೆಗೆದು ತಿದ್ದುಪಡಿ ಮಾಡಿದ್ದರು. ಬೆಳಿಗ್ಗೆ 10.30ಕ್ಕೆ ಎಂದಿನಂತೆ ಕಚೇರಿ ಕೆಲಸಕ್ಕೆ ಹಾಜರಾಗಿದ್ದರು' ಎಂಬ ಮಾಹಿತಿಯೂ ಆರೋಪ ಪಟ್ಟಿಯಲ್ಲಿದೆ.

ಮುಖ್ಯಾಂಶಗಳು

- ಸಿಐಡಿ ಕಟ್ಟಡದಲ್ಲೇ ನೇಮಕಾತಿ ವಿಭಾಗದ ಕಚೇರಿ
- ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖ
- ಒಎಂಆರ್ ಪ್ರತಿ ತಿದ್ದಿದ್ದ ಎಫ್‌ಡಿಎಗಳು

ಪ್ರಜಾವಾಣಿ ವಿಶೇಷ

ಸಂಕ್ಷಿಪ್ತ ಸುದ್ದಿ

'ಪ್ರಿಪೇಡ್ ಮೀಟರ್ ಅಳವಡಿಕೆ'

ಹುಬ್ಬಳ್ಳಿ: 'ಸರ್ಕಾರಿ ಕಚೇರಿಗಳು ವಿದ್ಯುತ್ ಬಿಲ್ ಬಾಕಿ ಉಳಿಸಿಕೊಳ್ಳುವುದಕ್ಕೆ ತಡೆಯೊಡ್ಡಲು ಪ್ರಿಪೇಡ್ ಮೀಟರ್ ಅಳವಡಿಸುವ ಚಿಂತನೆ ನಡೆದಿದೆ' ಎಂದು ಇಂಧನ ಸಚಿವ ಸುನೀಲ್ ಕುಮಾರ್ ಹೇಳಿದರು.

ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಯಾವ ಸರ್ಕಾರಿ ಇಲಾಖೆಯಲ್ಲಿ ವಿದ್ಯುತ್ ಬಿಲ್ ಬಾಕಿಯಿದೆ ಎಂದು ಪರಿಶೀಲಿಸಿ, ವಸೂಲಿ ಮಾಡಲು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತಿದ್ದೇವೆ. ಬಿಲ್ ಪಾವತಿಸದ ಬೃಹತ್ ನೀರಾವರಿ ಇಲಾಖೆ, ಬಿಬಿಎಂಪಿ, ಗ್ರಾಮ ಪಂಚಾಯಿತಿಗಳಿಗೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಲಾಗಿತ್ತು. ಗ್ರಾಹಕರಿಗೂ ಸರ್ಕಾರಿ ಇಲಾಖೆಗೂ ಒಂದೇ ನ್ಯಾಯ' ಎಂದರು.

ತುರ್ತು ಅಧಿವೇಶನಕ್ಕೆ ಎಚ್‌ಡಿಕೆ ಒತ್ತಾಯ

ರಾಮನಗರ: ರಾಜ್ಯದಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸರ್ಕಾರ ತುರ್ತು ಅಧಿವೇಶನ ಕರೆಯಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದರು.

664 ವಿದ್ಯಾರ್ಥಿಗಳ ರ್‍ಯಾಂಕ್ ಹಿಂಪಡೆದ ಕೆಇಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮದ 664 ಪುನರಾವರ್ತಿತ ವಿದ್ಯಾರ್ಥಿಗಳ ರ್‍ಯಾಂಕಿಂಗ್ ಹಿಂಪಡೆದಿದೆ. ಸಿಇಟಿ ಫಲಿತಾಂಶದಲ್ಲಿ ಈ ವಿದ್ಯಾರ್ಥಿಗಳ 12ನೇ ತರಗತಿ ಅಂಕ ಪರಿಗಣಿಸಲಾಗಿತ್ತು.

ಪಿಯು ವಿದ್ಯಾರ್ಥಿಗಳಿಂದ ಆಕ್ಷೇಪ ಬಂದ ನಂತರ ಪರಿಶೀಲನೆ ನಡೆಸಿ, ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'24 ಸಾವಿರ ವಿದ್ಯಾರ್ಥಿಗಳಿಗೆ ಪಿಯು ಅಂಕ ಪರಿಗಣಿಸಿ, ರ್‍ಯಾಂಕಿಂಗ್ ಕೊಟ್ಟರೆ ಎರಡೂ ವರ್ಷ 3 ಲಕ್ಷ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಈ ವಿಷಯದಲ್ಲಿ ಕೆಇಎ ನಿರ್ಧಾರ ಸರಿಯಾಗಿದೆ. ಪ್ರಾಧಿಕಾರದ ನಿರ್ಧಾರಕ್ಕೆ ಸರ್ಕಾರ ಬದ್ಧ. ಇದನ್ನು ಸಿಎಂ ಗಮನಕ್ಕೆ ತರಲಾಗಿದೆ. ಕೆಇಎ ನಿರ್ಧಾರ ತೃಪ್ತಿ ತಾರದಿದ್ದರೆ ಅಭ್ಯರ್ಥಿಗಳು ಕೋರ್ಟ್ ಮೊರೆ ಹೋಗಲು ಅವಕಾಶವಿದೆ' ಎಂದರು.

'ನನ್ನ ಪ್ರಕಾರ ಈ 24 ಸಾವಿರ ವಿದ್ಯಾರ್ಥಿಗಳಿಗೂ ವಿವಿಧ ಕಾಲೇಜುಗಳಲ್ಲಿ ಸೀಟು ಸಿಗುತ್ತದೆ. ಆತಂಕ ಬೇಡ' ಎಂದು ಹೇಳಿದರು.

ಹಿಂದಿನ ವರ್ಷ ಪಿಯು ತೇರ್ಗಡೆಯಾಗಿದ್ದ 24 ಸಾವಿರ ವಿದ್ಯಾರ್ಥಿಗಳು ಈ ಬಾರಿಯೂ ಸಿಇಟಿ ಪರೀಕ್ಷೆ ಬರೆದಿದ್ದು, ರ್‍ಯಾಂಕ್‌ಗೆ ಪಿಯು ಅಂಕ ಪರಿಗಣಿಸಲು ಒತ್ತಾಯಿಸಿ ಪ್ರತಿಭಟಿಸುತ್ತಿದ್ದಾರೆ. ಆ. 4ರಂದು ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದಾರೆ.

ಸಿಇಟಿ: ವಿದ್ಯಾರ್ಥಿಗಳ ಮಧ್ಯೆಯೇ ಸಂಘರ್ಷ

ಪುನರಾವರ್ತಿತ ವಿದ್ಯಾರ್ಥಿಗಳ ಪಿಯು ಅಂಕ ಪರಿಗಣಿಸಿದರೆ ನಾವೂ ಬೀದಿಗೆ ಇಳಿದು ಹೋರಾಟ ಮಾಡಬೇಕಾಗುತ್ತದೆ ಎಂದು 2021–22ನೇ ಸಾಲಿನ ವಿದ್ಯಾರ್ಥಿಗಳು ಎಚ್ಚರಿಸಿದ್ದಾರೆ.

ಕೋವಿಡ್ ಸಂಕಷ್ಟದ ಕಾರಣ 2020–21ನೇ ಸಾಲಿನಲ್ಲಿ ಪರೀಕ್ಷೆ ಇಲ್ಲದೆ, ಆಯಾ ಕಾಲೇಜುಗಳೇ ಅಂಕ ನೀಡಿದ್ದವು. ಹಾಗಾಗಿ, ಕೆಇಎ ಹಿಂದಿನ ವರ್ಷಕ್ಕೆ ಅನ್ವಹಿಸುವಂತೆ ಪ್ರವೇಶ ಪರೀಕ್ಷೆ ಅಂಕಗಳ ಆಧಾರದಲ್ಲಿ ವೃತ್ತಿ ಶಿಕ್ಷಣಕ್ಕೆ ಪ್ರವೇಶ ನೀಡಿತ್ತು. ಅವರ ಪಿಯು ಅಂಕಗಳು ಉತ್ತಮವಾಗಿರುವ ಕಾರಣ ಈ ಬಾರಿ ಅಧಿಕ ಸಂಖ್ಯೆಯಲ್ಲಿ ಮತ್ತೆ ಸಿಇಟಿ ಬರೆದಿದ್ದಾರೆ. ಈಗ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಅಭ್ಯರ್ಥಿ ಆರ್. ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಡಿಜಿಪಿ ಬೇನಾಮಿ ಆಸ್ತಿ ನಿರ್ವಹಣೆ: ಇಬ್ಬರ ಮನೆ ಮೇಲೆ ದಾಳಿ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿತ ಐಎಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರ ಬೇನಾಮಿ ಆಸ್ತಿ ನಿರ್ವಹಣೆ ಮಾಡುತ್ತಿದ್ದ ಇಬ್ಬರ ಮನೆ ಹಾಗೂ ಕಚೇರಿಯ ಮೇಲೆ ಸಿಐಡಿ ತಂಡವು ಮಂಗಳವಾರ ದಾಳಿ ನಡೆಸಿ, ಶೋಧಿಸಿತು.

'ಕೃಷಿ ಉಪಕರಣಗಳ ಮಾರಾಟ ಕಂಪನಿ ನಡೆಸುತ್ತಿರುವ ಶಂಭುಲಿಂಗಯ್ಯಸ್ವಾಮಿಗೆ ಸೇರಿದ ಕಚೇರಿ, ಸಹಕಾರ ನಗರದ ನಿವಾಸ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲದ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕಲ್ಪನಾ ಅವರ ಪತಿ ಹುಸ್ಕೂರು ಆನಂದ್‌ಗೆ ಸೇರಿದ ನಿವಾಸ, ದೇಶಪೇಟೆಯ ಕಚೇರಿ ಮೇಲೆ ಏಕಕಾಲಕ್ಕೆ ನಾಲ್ಕು ಪ್ರತ್ಯೇಕ ತಂಡಗಳು ದಾಳಿ ನಡೆಸಿ, ಆಸ್ತಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ವಶಕ್ಕೆ ಪಡೆದುಕೊಂಡಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ರಿಯಲ್ ಎಸ್ಟೇಟ್ ಉದ್ಯಮಿ ಆನಂದ್ ಮನೆಯಲ್ಲಿ ಬೆಳಿಗ್ಗೆ 9ರಿಂದ ಸಂಜೆ 5ರ ತನಕ ದಾಖಲೆಗಳ ಪರಿಶೀಲನೆ ನಡೆದಿದೆ. 'ಎಡಿಜಿಪಿಯಾಗಿದ್ದ ಅಮ್ರಿತ್ ಪೌಲ್ ಅವರ ಆಸ್ತಿಯನ್ನು ಇವರಿಬ್ಬರು ನಿರ್ವಹಣೆ ಮಾಡುತ್ತಿದ್ದರು. ಸಿಐಡಿ ವಿಚಾರಣೆಯಲ್ಲಿ ಪೌಲ್ ಈ ವಿಷಯ ಬಾಯಿ ಬಿಟ್ಟಿದ್ದರು' ಎಂದು ತಿಳಿಸಿವೆ.

ಮತ್ತೆ ಇಬ್ಬರ ಬಂಧನ: ಒಎಂಆರ್ ಪ್ರತಿ ತಿದ್ದುವ ಮೂಲಕ ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಸಿದ್ದಲಿಂಗಪ್ಪ ಪದವಶಗಿ ಹಾಗೂ ಬೀರಪ್ಪ ಮೇಟಿ ಎಂಬುವರನ್ನು ಸಿಐಡಿ ತಂಡ ಬಂಧಿಸಿ, 10 ದಿನ ಕಾಲ ಸಿಐಡಿ ಕಸ್ಟಡಿಗೆ ಪಡೆದಿದೆ.

'ಬಂಧಿತ ಸಬ್ ಇನ್‌ಸ್ಪೆಕ್ಟರ್ ಷರೀಫ್ ಕಳ್ಳಿಮನಿ ಹಾಗೂ ನೇಮಕಾತಿ ವಿಭಾಗದ ಹರ್ಷ ಮೂಲಕ ಈ ಇಬ್ಬರು ₹ 40 ಲಕ್ಷದ ಹಣಕಾಸಿನ ವ್ಯವಹಾರ ನಡೆಸಿ ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದರು' ಎಂದು ತನಿಖಾ ತಂಡ ತಿಳಿಸಿದೆ.

ಮಳೆಹಾನಿ: ತ್ವರಿತ ರಕ್ಷಣೆ, ಪರಿಹಾರಕ್ಕೆ ಸೂಚನೆ

ಒಂದನೇ ಪುಟದಿಂದ

ಭೂಕುಸಿತ ಸಂಭವಿಸುವ ಸಾಧ್ಯತೆ ಇರುವ ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸಬೇಕು. ಮನೆ ಕುಸಿತದಿಂದ ತೊಂದರೆಗೆ ಸಿಲುಕಿದವರನ್ನು ಸ್ಥಳಾಂತರಿಸಿ, ತಾತ್ಕಾಲಿಕ ವಸತಿಗೆ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮನೆ ಕುಸಿತ ಪ್ರಕರಣಗಳಲ್ಲಿ ತಕ್ಷಣ ವರದಿ ಪಡೆದು, ನೆರವು ವಿತರಿಸಬೇಕು. ಕರಾವಳಿ ಜಿಲ್ಲೆಗಳಲ್ಲಿ ಕಡಿದುಹೋಗಿರುವ ರಸ್ತೆ ಸಂಪರ್ಕ ಸರಿಪಡಿಸಲು ಕ್ರಮ ಕೈಗೊಳ್ಳಬೇಕು. 'ರೆಡ್ ಅಲರ್ಟ್' ಇರುವ ಜಿಲ್ಲೆಗಳಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಕೊಡಗು ಜಿಲ್ಲೆಯಲ್ಲಿ ಭೂಕುಸಿತ ಸಂಭವಿಸಬಹುದಾದ ಪ್ರದೇಶಗಳ ಮೇಲೆ ನಿಗಾ ಇಡಬೇಕು ಎಂದು ನಿರ್ದೇಶಿಸಿದರು.

ಭಟ್ಕಳ, ಸಕ್ಕೆ ಮತ್ತಿತರ ಪ್ರದೇಶಗಳಲ್ಲಿ ವಾಣಿಜ್ಯ ಸಂಕೀರ್ಣಗಳಿಗೆ ನೀರು ನುಗ್ಗಿರುವ ಕುರಿತು ವರದಿ ಸಲ್ಲಿಸಬೇಕು. ಕಾಳಜಿ ಕೇಂದ್ರಗಳಲ್ಲಿ ಸಮಸ್ಯೆಗಳಾಗದಂತೆ ತಹಶೀಲ್ದಾರ್‌ಗಳು ಎಚ್ಚರಿಕೆ ವಹಿಸಬೇಕು. ಮೈಸೂರು, ದಾವಣಗೆರೆ ಮತ್ತು ಉಡುಪಿ ಜಿಲ್ಲೆಗಳಿಗೆ ಮಳೆಹಾನಿ ಪರಿಹಾರ ಮತ್ತು ರಕ್ಷಣಾ ಕೆಲಸಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಕೆರೆಗಳ ಮೇಲೆ ನಿಗಾಕ್ಕೆ ಸೂಚನೆ: 'ಮಳೆಯಿಂದ ಎಲ್ಲ ಕೆರೆಗಳು ಭರ್ತಿಯಾಗಿವೆ. ಕೆರೆಗಳ ಕಟ್ಟೆಗಳು, ಕೋಡಿಗಳು ದುರ್ಬಲಗೊಂಡಿದ್ದರೆ, ಕೆರೆಗಳ ಪಕ್ಕದಲ್ಲಿ ಬಿರುಕು ಬಿಡದಂತೆ ಸಣ್ಣ ನೀರಾವರಿ ಇಲಾಖೆ ಹಾಗೂ ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಜಂಟಿಯಾಗಿ ಕೆರೆಗಳ ಸ್ಥಿತಿ ಮೇಲೆ ನಿಗಾ ಇಡಬೇಕು' ಎಂದು ಸೂಚಿಸಿದರು.

ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್.ಆರ್. ಉಮಾ ಶಂಕರ್, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್ ಸಭೆಯಲ್ಲಿದ್ದರು.

ಜೂನ್ 1ರಿಂದ ಆದ ಮಳೆಹಾನಿ ವಿವರ	
ಜೀವ ಹಾನಿ	39
ಜಾನುವಾರು ಜೀವ ಹಾನಿ	99
ಕೃಷಿ ಬೆಳೆಹಾನಿ	3,499 ಹೆಕ್ಟೇರ್
ತೋಟಗಾರಿಕಾ ಬೆಳೆ ಹಾನಿ	2,057
ಸಂಪೂರ್ಣ ಮನೆ ಕುಸಿತ	2,430
ಭಾಗಶಃ ಮನೆ ಕುಸಿತ	4,378
ಲೋಕೋಪಯೋಗಿ ಇಲಾಖೆ ರಸ್ತೆ ಹಾನಿ	1730 ಕಿ.ಮೀ
ಗ್ರಾಮೀಣ ರಸ್ತೆ ಹಾನಿ	5,419 ಕಿ.ಮೀ
ಸೇತುವೆ ಹಾನಿ	629
ಶಾಲಾ ಕಟ್ಟಡಗಳಿಗೆ ಹಾನಿ	3,264
ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾನಿ	29
ನೆಲಕ್ಕುರುಳಿದ ವಿದ್ಯುತ್ ಕಂಬ	11,796
ವಿದ್ಯುತ್ ಪರಿವರ್ತಕಗಳಿಗೆ ಹಾನಿ	759

ಕೆರೆಯಲ್ಲಿ ಮುಳುಗಿ ಮೂರು ಮಕ್ಕಳ ಸಾವು

ಚಿಂತಾಮಣಿ: ತಾಲ್ಲೂಕಿನ ಕೊಡಗೊಂಡ್ಲು ಗ್ರಾಮದ ಕೆರೆಯಲ್ಲಿ ಮುಳುಗಿ ಮಂಗಳವಾರ ಸಂಜೆ ಮೂವರು ಮಕ್ಕಳು ಮೃತಪಟ್ಟಿದ್ದಾರೆ. ವೆಂಕಟೇಶ್ ಪುತ್ರರಾದ ರಾಮ, ಲಕ್ಷ್ಮಣ ಮತ್ತು ಮುನಿರಾಜು ಪುತ್ರ ಪ್ರಜ್ವಲ್ ಮೃತರು.

ತಾಲ್ಲೂಕಿನಲ್ಲಿ ಉತ್ತಮ ಮಳೆ ಆಗುತ್ತಿದ್ದು 30 ವರ್ಷಗಳ ನಂತರ ಗ್ರಾಮದ ಕೆರೆ ತುಂಬಿದೆ. ಶಾಲೆಯಿಂದ ಮನೆಗೆ ಬಂದ ನಂತರ ಈ ಮೂವರು ಕೆರೆ ಬಳಿ ಆಟವಾಡಲು ತೆರಳಿದ್ದರು. ಈ ವೇಳೆ ಕಾಲುಜಾರಿ ನೀರಿಗೆ ಬಿದ್ದಿದ್ದಾರೆ. ಕೆಂಚಾರ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಯಿ ಸಾವಿಗೆ ಕಣ್ಣೀರು ಹಾಕಿದ್ದು ಯಾರು: ಬಿಜೆಪಿಗೆ ಎಚ್‌ಡಿಕೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಕಣ್ಣೀರಿನ ಬಗ್ಗೆ ಕೆಣಕಿದ ಬಿಜೆಪಿ ವಿರುದ್ಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದು, 'ಸಿನಿಮಾದಲ್ಲಿ ನಾಯಿ ಸತ್ತ ದೃಶ್ಯ ನೋಡಿ ಮಾಧ್ಯಮಗಳ ಮುಂದೆ ಕಣ್ಣೀರು ಸುರಿಸಿದ ಮಹಾಶಯ ಯಾವ ಪಕ್ಷದ ಮುಖ್ಯಮಂತ್ರಿ' ಎಂದು ಕುಟುಕಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ನಾಗಮಂಗಲದ ಜೆಡಿಎಸ್ ಸಮಾವೇಶದಲ್ಲಿ ತಂದೆಯವರು ಬೆಂಗಳೂರಿನ ನಿವಾಸದಿಂದಲೇ ನೇರ ವೀಕ್ಷಣೆ ಮಾಡಿದಾಗ ನಾನು, ನನ್ನ ಅಣ್ಣ ಭಾವಪರವಶರಾಗಿ ಒಟ್ಟಿಗೆ ಕಣ್ಣೀರಿಟ್ಟಿದ್ದನ್ನು ಬಿಜೆಪಿ ವಿಕೃತವಾಗಿ ತಿರುಚಿದೆ. 'ನಿಮಗೆ ಸಂಘ ಕಲಿಸಿದ ಸಂಸ್ಕಾರವೇ? ಛೇ!' ಎಂದು ಛೇಡಿಸಿದ್ದಾರೆ.

'ಆಪರೇಷನ್ ಕಮಲವನ್ನೇ ನೆಚ್ಚಿಕೊಂಡ ಬಿಜೆಪಿ ವಿಕೃತ, ವಿಲಕ್ಷಣ, ವಿನಾಶಕಾರಿ ಪಕ್ಷ. ಬಡ ಯುವಕರ ರಕ್ತವೇ ಅವರ ಪಾಲಿನ ಅಧಿಕಾರಾಮೃತ. ಕಗ್ಗೊಲೆಗಳೇ ಅದರ ಕಸುಬು, ಅದೆಷ್ಟು ಹೆತ್ತ ಕರುಳುಗಳ ಕಣ್ಣೀರಿಟ್ಟಿವೆ. ಅದಕ್ಕೆ ಉತ್ತರ ಕೊಡುವ ನೈತಿಕತೆ ಇದೆಯಾ? ವಿಧಾನಸೌಧದಲ್ಲಿ ವಿದಾಯ ಭಾಷಣ ಮಾಡುತ್ತಾ ವೇದಿಕೆಯಲ್ಲೇ ಕಣ್ಣೀರಧಾರೆ ಹರಿಸಿದವರು ಯಾವ ಪಕ್ಷದವರು? 'ಇದಕ್ಕೆ ಉತ್ತರಿಸಿ. ಆ ಮೇಲೆ ನನ್ನ ಕಣ್ಣೀರಿನ ಬಗ್ಗೆ ಮಾತನಾಡಿ' ಎಂದು ಕಾಲೆಳೆದಿದ್ದಾರೆ.

'30 ಸೀಟು ಉಳಿಸಿಕೊಳ್ಳಲು ನಾವು ಹೆಣಗುತ್ತಿದ್ದೇವೆ ಎನ್ನುತ್ತೀರಿ. ಅಧಿಕಾರಕ್ಕಾಗಿ ಇದೇ 30 ಸೀಟಿನ ಪಕ್ಷದ ಬಾಗಿಲಿಗೆ ಬಂದು ನಿಂತಿದ್ದನ್ನು ಮರೆತುಬಿಟ್ಟಿರಾ? ದೇಶದ ತುಂಬ 'ಆಪರೇಷನ್' ಕಮಲದ ಗಬ್ಬುನಾತ ಹಬ್ಬಿದೆ. ಅಸಹ್ಯ ಎನಿಸುವುದಿಲ್ಲವೇ ನಿಮಗೆ?' ಎಂದೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಫಾಝಿಲ್ ಹತ್ಯೆ: ಮತ್ತೆ ಆರು ಆರೋಪಿಗಳ ಬಂಧನ

ಒಂದನೇ ಪುಟದಿಂದ...

'ಆರೋಪಿಗಳು ಪರಸ್ಪರ ಪರಿಚಿತರಲ್ಲ. ಸಮಾನ ಸ್ನೇಹಿತರ ಮೂಲಕ ಸೇರಿಕೊಂಡು ಕೃತ್ಯ ಎಸಗಿದ್ದಾರೆ. ಪ್ರವೀಣ್ ನೆಟ್ಟಾರು ಅವರ ಕೊಲೆ ನಡೆದ ಜುಲೈ 26ರಂದು ರಾತ್ರಿಯೇ ನಿರ್ದಿಷ್ಟ ಸಮುದಾಯದ ಒಬ್ಬನನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು. ಅದಕ್ಕಾಗಿ ಎಲ್ಲ ಏರ್ಪಾಟು ಮಾಡಿದ್ದರು. ಸುಲಭವಾಗಿ ಸಿಕ್ಕ ಫಾಝಿಲ್‌ನನ್ನು ಕೊಲೆ ಮಾಡಿದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎರಡು ದಿನ ಮೊದಲೇ ಸಂಚು: 'ಸುಹಾಸ್ ಶೆಟ್ಟಿ ಜುಲೈ 26ರಂದು ರಾತ್ರಿ ಅಭಿಷೇಕ್‌ಗೆ ಕರೆ ಮಾಡಿ ಒಂದು ದಿನದಲ್ಲಿ ನಿರ್ದಿಷ್ಟ ಸಮುದಾಯದ ಯಾರನ್ನಾದರೂ ಕೊಲೆ ಮಾಡಬೇಕು ಎಂದು ಸೂಚಿಸಿದ್ದ. ಸುರತ್ಕಲ್‌ನ ಹೋಟೆಲ್‌ಗೆ ಗಿರಿಧರನನ್ನು ಕರೆಸಿಕೊಂಡು ಕೃತ್ಯಕ್ಕೆ ಸಂಚು ರೂಪಿಸಿದ್ದರು. ಬಳಿಕ ಆರೋಪಿ ಮೋಹನ್ ಕೂಡ ಸೇರಿಕೊಂಡಿದ್ದ. ಸ್ನೇಹಿತರಾದ ಅಭಿಷೇಕ್, ಶ್ರೀನಿವಾಸ್ ಮತ್ತು ದೀಕ್ಷಿತ್ ಅವರ ನೆರವು ಪಡೆಯುವುದಾಗಿ ಹಾಗೂ ಸ್ನೇಹಿತರಿಂದ ಕಾರು ಕೊಡಿಸುವುದಾಗಿ ಭರವಸೆ ನೀಡಿದ್ದ. ಜುಲೈ 27ರಂದು ಅಭಿಷೇಕ್, ದೀಕ್ಷಿತ್, ಶ್ರೀನಿವಾಸ್ ಸೇರಿ ಅಜಿತ್ ಕ್ರಾಸ್ತನನ್ನು ಸಂಪರ್ಕಿಸಿ ಕಾರು ಬಾಡಿಗೆಗೆ ಪಡೆದಿದ್ದರು' ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.

ಅಪರಾಧ ಚಟುವಟಿಕೆ ನಂಟು: 'ಬಂಧಿತರಾಗಿರುವ ಆರೂ ಮಂದಿ ಹಿಂದೆಯೂ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದವರು. ಕೋಮು ಘರ್ಷಣೆ, ಕೊಲೆ ಯತ್ನ, ಅನ್ಯಧರ್ಮೀಯರ ಮೇಲೆ ಹಲ್ಲೆ ಮೊದಲಾದ ಪ್ರಕರಣಗಳು ದಾಖಲಾಗಿವೆ' ಎಂದು ತಿಳಿಸಿದರು.

ಕಾರಿಗೆ 3 ದಿನಕ್ಕೆ ₹15 ಸಾವಿರ ಬಾಡಿಗೆ

'ಹೆಚ್ಚು ಹಣ ಸಿಗುತ್ತದೆ ಎಂದು ಅಜಿತ್ ಕ್ರಾಸ್ತ ಕಾರನ್ನು ಆರೋಪಿಗಳಿಗೆ ನೀಡಿದ್ದ. ಸಾಮಾನ್ಯವಾಗಿ ದಿನಕ್ಕೆ ₹1 ಸಾವಿರದಿಂದ ₹2 ಸಾವಿರ ಬಾಡಿಗೆ ಪಡೆಯುತ್ತಿದ್ದ. ಆದರೆ, ಆರೋಪಿಗಳು, 'ನಿರ್ದಿಷ್ಟ ಕೆಲಸಕ್ಕೆ ಕಾರಿನ ಅಗತ್ಯ ಇದೆ. ಆ ಕೆಲಸ ಯಶಸ್ವಿಯಾದರೆ ಮೂರು ದಿನಗಳಿಗೆ ₹15 ಸಾವಿರ ನೀಡುತ್ತೇವೆ' ಎಂದು ಹೇಳಿದ್ದರು. ₹1 ಸಾವಿರ ಮುಂಗಡವನ್ನೂ ನೀಡಿದ್ದರು' ಎಂದು ಪೊಲೀಸ್ ಕಮಿಷನರ್ ತಿಳಿಸಿದರು.

'ಆರೋಪಿಗಳು ಯಾವುದೋ ಕೃತ್ಯಕ್ಕೆ ಕಾರು ಬಳಸುವ ಬಗ್ಗೆ ಅದರ ಮಾಲೀಕನಿಗೆ ಅರಿವಿತ್ತು. ಆದರೂ ಆತ ಪೊಲೀಸರಿಗೆ ಮಾಹಿತಿ ನೀಡಿಲ್ಲ. ಹಾಗಾಗಿ ಆತನನ್ನೂ ಆರೋಪಿ ಎಂದು ಪರಿಗಣಿಸಬೇಕಾಗಿದೆ' ಎಂದರು.

ನಿರ್ಬಂಧ ಮತ್ತೆರಡು ದಿನ ವಿಸ್ತರಣೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಹಿತಕರ ಘಟನೆ ತಡೆಯಲು ಮುಂಜಾಗ್ರತಾ ಕ್ರಮವಾಗಿ ಸಂಜೆ 6ರಿಂದ ಬೆಳಿಗ್ಗೆ 6 ಗಂಟೆಯವರೆಗೆ ವ್ಯಾಪಾರ ವಹಿವಾಟು ನಡೆಸುವುದಕ್ಕೆ ಹಾಗೂ ಅನಗತ್ಯ ವಾಹನ ಸಂಚಾರಕ್ಕೆ ವಿಧಿಸಿದ್ದ ನಿರ್ಬಂಧವನ್ನು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ಅವರು ಗುರುವಾರದವರೆಗೆ ವಿಸ್ತರಿಸಿ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು-575004
ದೂರವಾಣಿ: 0824-2885795 CIN: U40109 KA 2002 SGC 030425
ಕ್ರ.ಸಂ: MESCOM/PROC/PURC/120/2022-PROC ದಿನಾಂಕ: 01.08.2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

ಮ.ವಿ.ಸ.ಕಂ.ನಿ ಈ ಕೆಳಗಿನ ಸಾಮಗ್ರಿಯ ತಯಾರಿಕೆ ಹಾಗೂ ಸರಬರಾಜಿಗಾಗಿ ಟೆಂಡರನ್ನು ಆಹ್ವಾನಿಸುತ್ತದೆ.

ಟೆಂಡರ್ ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಗ್ರಿಯ ವಿವರ	ಪ್ರಮಾಣ
MESCOM/2022-23/IND835	11 ಕೆವಿ 200 ಆಂಪ್ಸ್ ಸಿಂಗಲ್ ಬ್ರೇಕ್ ಜಿ.ಓ.ಎಸ್	5000 ಸೆಟ್‌ಗಳು

ಆಸಕ್ತ ಅರ್ಹ ಬಿಡ್ಡುದಾರರು ದಿನಾಂಕ **03.08.2022** ಅಥವಾ ನಂತರ ವೆಬ್‌ಸೈಟ್ **www.eproc.karnataka.gov.in**ಗೆ ಲಾಗಾನ್ ಮಾಡಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ), ಕಾರ್ಪೊರೇಟ್ ಕಚೇರಿ

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ **1912**ಕ್ಕೆ ಕರೆ ಮಾಡಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂ:ಕಾಇಂ:ಗ್ರಾ.ಕು.ನೀ & ನೈ ವಿ /ದಾ/ಸ.ಇಂ-2/ಕಿ.ಇಂ-2/ಜೆ.ಜೆ.ಎಂ/ಟೆಂಡರ್
ದಿನಾಂಕ:28/07/2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

2021-22 ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ಜಿಲ್ಲೆಯ ಚನ್ನಗಿರಿ/ಜಗಳೂರು/ಹೊನ್ನಾಳಿ ತಾಲ್ಲೂಕಿಗೆ ಅನುಮೋದನೆಯಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ (ಮನೆಗಳಿಗೆ ನಳ ಸಂಪರ್ಕ ಕಲ್ಪಿಸುವ) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ-ಪೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ-ಪೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 12/08/2022 ರ ಸಂಜೆ 5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 08192-262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/353/ಎಂಸಿಎ/2022-23
ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ವಿಭಾಗ, ದಾವಣಗೆರೆ.

K-tech | ಕೆಎಸ್‌ಡಬ್ಲ್ಯೂಡಿಸಿ | STARTUP KARNATAKA

ಅರ್ಜಿಗಳಿಗಾಗಿ ಕರೆ

ಕರ್ನಾಟಕ ನಾವಿನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಯು (ಕಿಟ್ಸ್) ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದ (ಕೆಎಸ್ಡಬ್ಲ್ಯೂಡಿಸಿ) ಸಹಭಾಗಿತ್ವದೊಂದಿಗೆ "ವೃದ್ಧಿ" ಯೋಜನೆ ಅಡಿಯಲ್ಲಿ ಐಡಿಯ 2 ಪಿಒಸಿ/ಎಲಿವೇಟ್(2016-2021)/ ಅಮೃತ ಸ್ಟಾರ್ಟ್ ಅಪ್ 2021ರ ವಿಜೇತರು ಹಾಗು ಅಂತಿಮ ಸ್ಪರ್ಧಿಗಳಾಗಿ ಆಯ್ಕೆಯಾದ ಮಹಿಳಾ ಉದ್ಯಮಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಆಯ್ಕೆಯಾದ ಮಹಿಳಾ ನವೋದ್ಯಮಿ (ಸ್ಟಾರ್ಟ್ ಅಪ್)ಗಳಿಗೆ **ರೂ. 5 ರಿಂದ 10 ಲಕ್ಷಗಳು** ವರೆಗೆ ಸಾಲದ ಸಹಾಯವನ್ನು ವಾರ್ಷಿಕ 4% ಬಡ್ಡಿ ದರದಲ್ಲಿ 60 ತಿಂಗಳ ಮರುಪಾವತಿ ಅವಧಿಯೊಂದಿಗೆ ನೀಡಲಾಗುತ್ತದೆ.

ವಿವರವಾದ ಮಾಹಿತಿ, ಅರ್ಹತೆ ಹಾಗೂ ಅರ್ಜಿ ಸಲ್ಲಿಕೆಗಾಗಿ, ದಯವಿಟ್ಟು ಭೇಟಿ ನೀಡಿ: www.missionstartupkarnataka.org/vriddhi-schemes?en.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26/08/2022 ರಂದು ಸಂಜೆ 5.00 ಗಂಟೆಯವರೆಗೆ ಅಥವಾ ಮುಂಚಿತವಾಗಿ.

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು-560027.
ದೂರವಾಣಿ: 080-22231006/8. ಇ-ಮೇಲ್: elevatewomen22@gmail.com

ವಾ.ಸಾ.ಸಂ.ಇ/ವಾಪ್ರ/1624/ಆಕಾರ್/22-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಶಾಂತಿನಗರ ವಿಭಾಗ, ಪಬ್ಲಿಕ್ ಯುಟಿಲಿಟಿ ಕಟ್ಟಡ, 9ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು-560 001.
ಸಂ: ಕಾಪಾಅ/ಶಾನಂ/ಟೆಂಡ್/09/20222-23 ದಿನಾಂಕ: 02.08.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ) (ಕೆಡಬ್ಲ್ಯೂ-4)

ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ ಇವರು ಬೃಬೆಂಮಪಾ ಆಯುಕ್ತರ ಪರವಾಗಿ, ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ವಾರ್ಡ್ ಸಂಖ್ಯೆ 111ರ ಶಾಂತಲನಗರದಲ್ಲಿ ಎಂ.ಜಿ. ಉದ್ಯಾನವನದ ಸುಧಾರಣಾ ಕಾಮಗಾರಿಗಳು - ಭಾಗ ಎ.	250.00	3,75,000/-

1) ಆರ್‌ಎಫ್‌ಪಿ ಡಾಕ್ಯುಮೆಂಟ್‌ಗಳು ದೊರೆಯುವ ದಿನಾಂಕ : 04.08.2022ರಿಂದ 2) ಪೂರ್ವಭಾವಿ ಸಭೆ ದಿನಾಂಕ : 06.08.2022 ರ ಅಪರಾಹ್ನ 3.30 ಗಂಟೆಗೆ. 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11.08.2022ರ ಸಂಜೆ 4.00 ಗಂಟೆಯವರೆಗೆ 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12.08.2022 ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಎಸ್‌ಡಬ್ಲ್ಯೂಡಿ-ಮಹದೇವಪುರ ವಲಯ, ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು-560011
ಸಂ: ಕಾಪಾಅ/ಎಸ್‌ಡಬ್ಲ್ಯೂಡಿ-ಎಂಡಿಪಿ/ಟೆಂಡರ್/06/2022-23 ದಿನಾಂಕ: 01.08.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ-ಮಹದೇವಪುರ ವಲಯ ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ನೋಂದಾಯಿಸಿರುವ ಅಥವಾ ತತ್ಸಮಾನ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ / ರಾಜ್ಯ ಸರ್ಕಾರದಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಲಕ್ಷಗಳಲ್ಲಿ)
1	ಮಹದೇವಪುರ ವಿಧಾನಸಭಾ ಕ್ಷೇತ್ರದ ವಿವಿಧ ಸ್ಥಳಗಳಲ್ಲಿ ಹರಡಿರುವ ಪ್ರಾಥಮಿಕ ಮತ್ತು ದ್ವಿತೀಯ ಹಂತದ ಮಳೆನೀರು ಕಾಲುವೆಗಳು, ಕಲ್ವರ್ಟ್‌ಗಳು / ಸೇತುವೆಗಳ ನಿರ್ಮಾಣ / ಮರುರೂಪಿಸುವಿಕೆ ಮತ್ತು ಸಂಬಂಧಿತ ಕಾಮಗಾರಿಗಳು ಅಮೃತ ನಗರೋತ್ಥಾನ ಅನುದಾನ 2022-23, (ಕ್ರಿಯಾ ಯೋಜನೆ ಸಂಖ್ಯೆ 1 ರಿಂದ 12).	3400.00	ರೂ. 34.00 ಲಕ್ಷಗಳು (ರೂ.1.00 ಲಕ್ಷ ಆನ್‌ಲೈನ್ ಪಾವತಿ ಮೂಲಕ ಹಾಗೂ ರೂ. 33.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಮೂಲಕ)

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ: **06.08.2022ರ ಅಪರಾಹ್ನ 3.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10.08.2022ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **12.08.2022ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080-22371090 / 22340060/ 22340948 ನ್ನು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ-ಮಹದೇವಪುರ ವಲಯ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ (ಜಲ ಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರವಸತಿ ವಿಭಾಗ ನಂ.3, ಜಮಖಂಡಿ, (ಕಡಕೋಳ ಪುನರ್ವಸತಿ ಕೇಂದ್ರ) ಇವರ ಕಾರ್ಯಾಲಯ.
ಸಂ:ಕೃಮೇಯೋ/ಪುವಿ-3/ಯೋ.ವಿ-3/ಟೆಂಡರ್/2022-23/716 ದಿನಾಂಕ:01-08-2022.

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರ್ವಸತಿ ವಿಭಾಗ ನಂ-3, ಜಮಖಂಡಿ (ಕಡಕೋಳ ಪುನರ್ವಸತಿ ಕೇಂದ್ರ) ಇವರ ಕಛೇರಿ ವ್ಯಾಪ್ತಿಯಲ್ಲಿ ಬರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುಉವಿ, ನಂ-11, ಮುಧೋಳ ಹಾಗೂ ನಂ-5, ಬೀಳಗಿ ಕಛೇರಿಗಳ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದಂತೆ ಯಾವುದೇ ರಾಜ್ಯದ ಲೋಕೋಪಯೋಗಿ ಇಲಾಖೆ ಹಾಗೂ ಕೃ.ಭಾ.ಜ.ನಿ.ನಿ.ಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ (KW-1 & 3 ರನ್ವಯ) ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಶೇಕಡಾವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರಗಳನ್ನು ಇ-ಪ್ರೋಕ್ಯರಮೆಂಟ್ ಪೋರ್ಟಲ್‌ನಲ್ಲಿ www.eproc Karnataka govt.in ದಿನಾಂಕ:02-08-2022 ರಿಂದ ದಿ:17-08-2022 ವರೆಗೆ ಡೌನಲೋಡ ಮಾಡಿಕೊಂಡು ಸಲ್ಲಿಸಬಹುದಾಗಿದೆ. ಕಾಮಗಾರಿಗಳ ನಿಬಂಧನೆ ಹಾಗೂ ವಿವರಗಳನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ನಲ್ಲಿ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ಮೋ ಸಂ: 9620892102 ಅಥವಾ 9108335489).

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರವಸತಿ ವಿಭಾಗ ನಂ-3, ಕಡಕೋಳ ಪುನರ್ವಸತಿ ಕೇಂದ್ರ, ಜಮಖಂಡಿ,
DIPR/BGK/RO-NO-322/MCA/2022-23

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು-560010. ಟೆಲಿಫ್ಯಾಕ್ಸ್: 080-22024000
ಇ-ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in
ಸಂಖ್ಯೆ: ಕರಅನಿನಿ/ಐಎಫ್‌ಬಿ/2022-23/14 ದಿನಾಂಕ: 02-08-2022

ಟೆಂಡರ್ ಪ್ರಕಟಣೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್), ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆ, ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹನೂರು ತಾಲ್ಲೂಕಿನ ಉದ್ದನೂರಿನಿಂದ ಬೆಳತ್ತೂರು, ಮಹಾಲಿಂಗನಕಟ್ಟೆ, ಶಿರಗೋಡು ಮುಖಾಂತರ ಲೊಕ್ಕನಹಳ್ಳಿ ಸೇರುವ **ಜಿಲ್ಲಾ ಮುಖ್ಯ ರಸ್ತೆ ಸರಪಳಿ 2.50 ಕಿ.ಮೀ ರಿಂದ 3.50 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು** ಐಟಂವಾರು ಮಾದರಿಯಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **http//eproc.karnataka.gov.in** ವೆಬ್‌ಸೈಟ್ ಮೂಲಕ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **18-08-2022 ರ 17.30 ಗಂಟೆಯವರೆಗೆ ಇರುತ್ತದೆ.** ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **20-08-2022 ರ 11.30 ಗಂಟೆಗೆ ತೆರೆಯಲಾಗುತ್ತದೆ.**

ಗಮನಿಸಿ: ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಮುಂದಿನ ಬದಲಾವಣೆಗಳನ್ನು ಕೇವಲ ಇ-ಪೋರ್ಟಲ್ / ಕರಅನಿನಿ ವೆಬ್‌ಸೈಟ್ **http://www.krdcl.in** ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/- ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು
DIPR/CP/BCPL/1633/2022-23

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಜಿಲ್ಲಾ ಪಂಚಾಯತಿ, ವಿಜಯಪುರ
ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಡಾ॥ ಬಿ.ಆರ್.ಅಂಬೇಡ್ಕರ ಕ್ರೀಡಾಂಗಣ ವಿಜಯಪುರ-586101.
ದೂರವಾಣಿ/ಫ್ಯಾಕ್ಸ್ ಸಂ:08352-251085
ಸಂ: ಸನಿವಿ/ಯುಸೇಕ್ರೀಇ/ಪ.ಪ್ರ/2022-23 ದಿನಾಂಕ:30.07.2022

ಅಲ್ಪಾವಧಿ ಇ- ಟೆಂಡರ್ ಪ್ರಕಟಣೆ

2022-23 ನೇ ಸಾಲಿಗೆ ವಿಜಯಪುರ ಜಿಲ್ಲೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆಯನ್ನು ಒದಗಿಸಲು ಅಲ್ಪಾವಧಿ ಇ-ಟೆಂಡರ್ ಮುಖಾಂತರ ಅರ್ಹ ಸಂಸ್ಥೆಯವರಿಂದ QCBS (Quality and Cost Based Selection) ಮಾದರಿಯಲ್ಲಿ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://eproc.karnataka.gov.in ನಲ್ಲಿ ಹಾಗೂ ಕಚೇರಿಯ ದೂರವಾಣಿ ಸಂಖ್ಯೆ: 08352-251085 ಅಥವಾ 9480886555 ಗೆ ಸಂಪರ್ಕಿಸಲು ಕೋರಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08.08.2022
ಟೆಂಡರ್ ತೆರೆಯುವ ದಿನಾಂಕ: 09.08.2022
ಆರ್ಥಿಕ ಬಿಡ್ ತೆರೆಯುವ ದಿನಾಂಕ: 10.08.2022
ಟೆಂಡರಿನ ಒಟ್ಟು ಮೊತ್ತ ರೂ. 25,29,000/-
ಇ.ಎಂ.ಡಿ ಮೊತ್ತ ರೂ. 1,26,500/-

ಸಹಿ/- ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿಜಯಪುರ
ವಾಸಾಸಂಇ/ವಿಜಯಪುರ/328/ಎಂಸಿಎ/2022-23

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಯವರ ಕಾರ್ಯಾಲಯ, "ಎ" ಬ್ಲಾಕ್, ನೆಲ ಮಹಡಿ, ಕೊಠಡಿ ಸಂಖ್ಯೆ: 101, ರಜತಾದ್ರಿ, ಮಣಿಪಾಲ ಉಡುಪಿ-576104.
ದೂರವಾಣಿ ಸಂ: 0820-257433 Email: dudc_udupi@yahoo.co.in
ಜನಕೋ (3) DC UDP-21016/31/2022-UDPDC-DUDC-UDUPI DC (E-91334) ದಿನಾಂಕ: 01.08.2022

ಟೆಂಡರ್ ಪ್ರಕಟಣೆ

ಉಡುಪಿ ಜಿಲ್ಲೆಯ ನಗರ ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ "ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-04ರ" ಯೋಜನೆಯಡಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ **(www.eproc.karnataka.gov.in)** ಮುಖಾಂತರ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಆದ್ದರಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ Work Indent ನಂಬರ್ ಮುಖಾಂತರ ದಸ್ತಾವೇಜುಗಳನ್ನು (Document) ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **(www.eproc.karnataka.gov.in)** ಸಲ್ಲಿಸುವುದು. ಪ್ರೀ ಬಿಡ್ ಮೀಟಿಂಗ್, ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಹಾಗೂ ಟೆಂಡರ್ ತೆರೆಯುವ ದಿನಾಂಕಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರಚುರಪಡಿಸಲಾಗಿರುತ್ತದೆ. ಅವಶ್ಯವಿದ್ದಲ್ಲಿ ಇದರ ಬಗ್ಗೆ ಯಾವುದೇ ತಿದ್ದುಪಡಿ ಹಾಗೂ Addendum ನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ಪ್ರಚುರಪಡಿಸಲಾಗುವುದು. ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಭಾಗವಹಿಸುವಂತೆ ತಿಳಿಸಿದೆ.

ನಗರ ಸ್ಥಳೀಯ ಸಂಸ್ಥೆಯ ಹೆಸರು: (1) ಉಡುಪಿ ನಗರಸಭೆ, ಇಂಡೆಂಟ್ ಸಂಖ್ಯೆ: (Work Indent Code): DMA/2022-23 / RD / WORK_INDENT134664, ಟೆಂಡರಿಗಿಟ್ಟ ಮೊತ್ತ: **ರೂ. 1685.47 ಲಕ್ಷ.** (ಜಿ.ಎಸ್.ಟಿ ಹೊರತುಪಡಿಸಿ) ಇ.ಎಂ.ಡಿ ಮೊತ್ತ : **ರೂ.16.86 ಲಕ್ಷ,** ಕಾಮಗಾರಿಗಳನ್ನು ಪೂರ್ಣಗೊಳಿಸುವ ಅವಧಿ: **18 ತಿಂಗಳು** (Including Mansoon) ಗುತ್ತಿಗೆದಾರರ ವರ್ಗ: Class-I KPWD

ಸಹಿ/- ಕಾರ್ಯಪಾಲಕ ಅಭಿಯಂತರರು (ಪ್ರ) ಹಾಗೂ ಸದಸ್ಯ ಕಾರ್ಯದರ್ಶಿ, ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-04, ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಜಿಲ್ಲೆ, ಉಡುಪಿ.
ವಾಸಾಇ/ಉಡುಪಿ/ಎಂಸಿಎ/299/22-23 ದಿ: 02.08.22

ಕರ್ನಾಟಕ ಸರ್ಕಾರ (ಕೃಷಿ ಇಲಾಖೆ)
ಜಂಟಿ ಕೃಷಿ ನಿರ್ದೇಶಕರ ಕಛೇರಿ, ಹಾವೇರಿ
ರೂಮ್ ನಂ: 6, ಜಿಲ್ಲಾ ಆಡಳಿತ ಭವನ, ದೇವಗಿರಿ, ಹಾವೇರಿ-581110
ಕ್ರ.ಸಂ/ಜಕೃನಿ.ಹಾ/ಲೆಕ್ಕ-4/ಹೊ.ಗು/ಟೆಂಡರ್/2022-23 ದಿನಾಂಕ : 02/08/2022

ಹೊರಗುತ್ತಿಗೆ ನೇಮಕಾತಿ ಇ-ಟೆಂಡರ್ ಪ್ರಕಟಣೆ

ಸನ್ 2022-23ನೇ ಸಾಲಿಗೆ ಹಾವೇರಿ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಛೇರಿ ಹಾವೇರಿಯಲ್ಲಿ ಮಾನವ ಹೊರ ಸಂಪನ್ಮೂಲ ಸಂಸ್ಥೆ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಅವಶ್ಯವಿರುವ, ಕಂಪ್ಯೂಟರ್ ಆಪರೇಟರ್, ವಾಹನ ಚಾಲಕರು, ಗ್ರೂಪ್-ಡಿ, ಕೃಷಿ ಸಂಜೀವಿನಿ ತಾಂತ್ರಿಕ ಸಹಾಯಕರು, ಹಾಗೂ NFSM ತಾಂತ್ರಿಕ ಸಹಾಯಕರು, ಮಣ್ಣು ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಮತ್ತು ಜಲಾನಯನ ಯೋಜನೆಯ ಲೆಕ್ಕ ಸಹಾಯಕರು/ ಕಂಪ್ಯೂಟರ್ ಆಪರೇಟರ್, ಜಲಾನಯನ ಸಹಾಯಕರು, ರೈತ ಸಂಪರ್ಕ ಕೇಂದ್ರಗಳ ಲೆಕ್ಕ ಸಹಾಯಕ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಳ್ಳಲು ನೋಂದಾಯಿತ ಮಾನವ ಹೊರಸಂಪನ್ಮೂಲ ಸಂಸ್ಥೆಯವರಿಂದ ಇ-ಪ್ರೋಕ್ಯೂರಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡಂತೆ ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್ ಸೈಟ್ **(www.eproc.karanataka.gov.in)** ನಿಂದ ಪಡೆಯಬಹುದು.

ಇ-ಟೆಂಡರಿನ ಪ್ರಮುಖ ಘಟನಾವಳಿಗಳು. (1) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **02/08/2022** (2) ಟೆಂಡರ್‌ನ ಅಂದಾಜು ಮೌಲ್ಯ ರೂ. **195.00** ಲಕ್ಷ ರೂಗಳು (3) **Pre Bid Meeting** ದಿನಾಂಕ : **06-08-2022** (4) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **17/08/2022** ಸಾಯಂಕಾಲ 4.30 ಗಂಟೆಯವರೆಗೆ (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **18/08/2022** ರಂದು ಸಾಯಂಕಾಲ 4.30 ಗಂಟೆ (6) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **ತಿಳಿಸಲಾಗುವುದು** (7) ಪಾವತಿಸಬೇಕಾದ ಇ.ಎಂ.ಡಿ ಮೊತ್ತ 2.5% ರೂ. **3.90** ಲಕ್ಷ (8) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) **: ಜಂಟಿ ಕೃಷಿ ನಿರ್ದೇಶಕರ ಹಾವೇರಿ 08375-249021**

ಟೆಂಡರಿನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ವಾಸಾಸಂಇ/ಹಾವೇರಿ/ಎಂಸಿಎ/204/2022-23 ಸಹಿ/- ಜಂಟಿ ಕೃಷಿ ನಿರ್ದೇಶಕರು, ಹಾವೇರಿ

ಕರ್ನಾಟಕ ಸರ್ಕಾರ | ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.
(ಆರೋಗ್ಯ & ಕುಟುಂಬ ಕಲ್ಯಾಣ ಸೇವೆಗಳು)
Ph: 08194-235464 E-mail: dhochitrdurga@gmail.com
ಸಂ: ಸಾರಿಗೆ:60: 2022-23 ದಿನಾಂಕ: 30.07.2022

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2022-23ನೇ ಸಾಲಿಗೆ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ಎರಡು ಆರೋಗ್ಯ ಸಂಸ್ಥೆಗಳ ಉಪಯೋಗಕ್ಕಾಗಿ ಎರಡು ಆಂಬುಲೆನ್ಸ್ & ಒಂದು ಇನ್ಸುಲೇಟೆಡ್ ವ್ಯಾಕ್ಸಿನ್ ಮತ್ತು ಔಷಧಿ ವಿತರಣೆ ವಾಹನಗಳನ್ನು ನಿಯಮಾನುಸಾರ ಖರೀದಿಸಲು ಉದ್ದೇಶಿಸಲಾಗಿದೆ. ವಾಹನ ತಯಾರಕರಿಂದ/ವಾಹನಗಳ ಅಧಿಕೃತ ಡೀಲರ್‌ಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ 1999 & 2000 ನಂತರದ ಅಧಿಕೃತ ತಿದ್ದುಪಡಿ ಆದೇಶಗಳ ಅನ್ವಯ ಟೆಂಡರ್‌ಗಳನ್ನು "ದ್ವಿ-ಲಕೋಟೆ ಪದ್ಧತಿಯಲ್ಲಿ" ಆಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ: DHFWS/2021-22/IND5757

ಟೆಂಡರ್ ಸಂಖ್ಯೆ: 1) DHFWS/2021-22/IND5757. ಟೆಂಡರ್ ಹೆಸರು: Procurement of 2 (TWO) Ambulance and one Insulated Vaccine & Medicine delivery Vehicles as per AIS Standards. ಇ.ಎಂ.ಡಿ. ಮೊತ್ತ: ರೂ. 1,75,000/-.

ಸಂಪೂರ್ಣ ವಿವರಗಳನ್ನು ಮತ್ತು ಟೆಂಡರ್ ಅರ್ಜಿಗಳನ್ನು ಇ- ಪ್ರಕ್ಯೂರ್ ಮೆಂಟ್ ವೆಬ್ ಸೈಟ್: http://eproc.karnataka.gov.in ನಲ್ಲಿ ಪಡೆಯಬಹುದು. ಟೆಂಡರ್ ಫಾರಂ ಬೆಲೆ & ಇಎಂಡಿ ಮೊತ್ತಗಳನ್ನು ಇ- ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಿಂದ ಡೌನ್‌ಲೋಡ್ ಮಾಡುವ ಪ್ರಾರಂಭದ ದಿನಾಂಕ: 30.07.2022. 2) ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ಸಮಯ: 20.08.2022ರಂದು 15:30 ಗಂಟೆಯವರೆಗೆ. 3) ಭರ್ತಿ ಮಾಡಿದ ಟೆಂಡರ್ ಟೆಕ್ನಿಕಲ್ ಬಿಡ್‌ಗಳನ್ನು ತೆರೆಯುವ ಸಮಯ: 22.08.2022ರಂದು 11:00 ಗಂಟೆಯ ನಂತರ. 4) ಭರ್ತಿ ಮಾಡಿದ ಟೆಂಡರ್ ಆರ್ಥಿಕ ಬಿಡ್‌ಗಳನ್ನು ತೆರೆಯುವ ಸಮಯ: 23.08.2022ರಂದು 11:00 ಗಂಟೆಯ ನಂತರ.

ಹೆಚ್ಚಿನ ಮಾಹಿತಿಗಳನ್ನು ಮೇಲ್ಕಂಡ ಕಚೇರಿಯಲ್ಲಿ ಮತ್ತು ವೆಬ್ ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/- ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ
RO No. 418: DIPR/CTA/MCA/2022-23

ಕರ್ನಾಟಕ ಸರ್ಕಾರ
ಆಯುಕ್ತರ ಕಛೇರಿ
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ,
ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
ಸಂಖ್ಯೆ: ಎಫ್‌ಸಿಎಸ್‌ಸಿಎ/ಎಡಿ-20/ಡಬ್ಲ್ಯೂಟಿ/2/2021(ಭಾಗ-2) ದಿನಾಂಕ: 03.08.2022

ಇ-ಟೆಂಡರ್ ನೋಟಿಫಿಕೇಷನ್

ಆಸಕ್ತ ಅರ್ಹ ಬಿಡ್ಡುದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ರಾಜ್ಯದ **39 ತಾಲ್ಲೂಕುಗಳಿಗೆ** ಆಹಾರ ಧಾನ್ಯಗಳನ್ನು ಎಫ್.ಸಿ.ಐ. ಗೋದಾಮುಗಳಲ್ಲಿ ಲೋಡ್ ಮಾಡಿಕೊಂಡು ಟಿ.ಎ.ಪಿ.ಸಿ.ಎಂ.ಎಸ್./ ಕೆ.ಎಫ್.ಸಿ.ಎಸ್.ಸಿ/ಇತರೆ ಸಗಟು ಗೋದಾಮುಗಳಿಗೆ ರಸ್ತೆ ಮೂಲಕವಾಗಿ ಸಾಗಾಣಿಕೆ ಮಾಡಿ ಮತ್ತು ಸದರಿ ಗೋದಾಮುಗಳಿಗೆ ಅನ್‌ಲೋಡ್ ಮಾಡಲು ಆಯುಕ್ತರು ಜ್ಞಾಪನ ಪತ್ರ ನೀಡಿದ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯಿಂದ ಇ-ಟೆಂಡರನ್ನು ಆಹ್ವಾನಿಸಲಾಗಿದೆ.

ಆಸಕ್ತ ಬಿಡ್‌ದಾರರು ಟೆಂಡರ್ ದಾಖಲಾತಿಗಳನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: **www.eproc.karnataka.gov.in** ರಿಂದ **ದಿನಾಂಕ: 03.08.2022 ರಿಂದ 12.08.2022 ಸಂಜೆ 5.30**ರವರೆಗೆ ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು.

ಟೆಂಡರ್ ಪ್ರಕಟಣೆಯ ದಿನಾಂಕ: **03.08.2022.** ಪ್ರಿ-ಬಿಡ್ ಮೀಟಿಂಗ್ ದಿನಾಂಕ: **06.08.2022 ಬೆಳಿಗ್ಗೆ 11.30 ಗಂಟೆಗೆ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಭರ್ತಿ ಮಾಡಿದ ಟೆಕ್ನಿಕಲ್ ಬಿಡ್ಡನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ ಸಲ್ಲಿಸುವುದು): **12.08.2022 ಸಂಜೆ 5.30 ಗಂಟೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಂಬಂಧಿಸಿದ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ): **16.08.2022 ಬೆಳಿಗ್ಗೆ 11.00 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ (ಆಯುಕ್ತರ ಕಛೇರಿಯಲ್ಲಿ): **18.08.2022 ಬೆಳಿಗ್ಗೆ 11.00 ಗಂಟೆಗೆ.**

ಟೆಂಡರ್‌ದಾರರು ಇಎಂಡಿ ಮೊತ್ತ **ರೂ.4.00 ಲಕ್ಷ (ರೂ. ನಾಲ್ಕು ಲಕ್ಷ ಮಾತ್ರ)**ಗಳನ್ನು ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಪಾವತಿಸುವುದು. ಟೆಂಡರ್‌ದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ರನ್ವಯ ಪ್ರೋಸಸಿಂಗ್ ವೆಚ್ಚವನ್ನು ಪಾವತಿಸುವುದು. ಟೆಂಡರ್ ಒಪ್ಪುವ ಸಮಿತಿಗೆ ಟೆಂಡರ್ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ಟೆಂಡರನ್ನು ರದ್ದುಪಡಿಸುವ ಮತ್ತು ಪರಿಶೀಲನೆಗೆ ಒಳಪಡಿಸುವ ಹಕ್ಕನ್ನು ಕಾಯ್ದಿರಿಸಿದೆ. ಇತರೆ ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್‌ನಿಂದ ಪಡೆಯುವುದು.

ಸಹಿ/- ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಬೆಂಗಳೂರು.
ವಾಸಾಸಂಇ/ಉನಿ-ಸಿ.ಪಿ/1622/ಎಂಸಿಎ/2022-23

ಕರ್ನಾಟಕ ಸರ್ಕಾರ
ಆಯುಕ್ತರ ಕಛೇರಿ
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ,
ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
ಸಂಖ್ಯೆ: ಎಫ್‌ಸಿಎಸ್‌ಸಿಎ/ಎಡಿ-20/ಆರ್.ಇ.ಟಿ.ಇ/2/2021(ಭಾಗ-2) ದಿನಾಂಕ: 03.08.2022

ಇ-ಟೆಂಡರ್ ನೋಟಿಫಿಕೇಷನ್

ಆಸಕ್ತ ಅರ್ಹ ಬಿಡ್ಡುದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ **14 ಜಿಲ್ಲೆಗಳ 22 ತಾಲ್ಲೂಕುಗಳಿಂದ** ಆಹಾರ ಧಾನ್ಯಗಳನ್ನು ಲೋಡ್ ಮಾಡಿಕೊಂಡು ರಸ್ತೆ ಮೂಲಕವಾಗಿ ಸಾಗಾಣಿಕೆ ಮಾಡಿ ಮತ್ತು ಸದರಿ ನ್ಯಾಯಬೆಲೆ ಅಂಗಡಿಗಳಿಗೆ ಅನ್‌ಲೋಡ್ ಮಾಡಲು ಆಯುಕ್ತರು ಜ್ಞಾಪನ ಪತ್ರ ನೀಡಿದ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯಿಂದ ಇ-ಟೆಂಡರನ್ನು ಆಹ್ವಾನಿಸಲಾಗಿದೆ.

ಆಸಕ್ತ ಬಿಡ್‌ದಾರರು ಟೆಂಡರ್ ದಾಖಲಾತಿಗಳನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: **www.eproc.karnataka.gov.in** ರಿಂದ **ದಿನಾಂಕ: 03.08.2022 ರಿಂದ 12.08.2022 ಸಂಜೆ 5.30**ರವರೆಗೆ ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು.

ಟೆಂಡರ್ ಪ್ರಕಟಣೆಯ ದಿನಾಂಕ: **03.08.2022.** ಪ್ರಿ-ಬಿಡ್ ಮೀಟಿಂಗ್ ದಿನಾಂಕ: **06.08.2022 ಬೆಳಿಗ್ಗೆ 11.30 ಗಂಟೆಗೆ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಭರ್ತಿ ಮಾಡಿದ ಟೆಕ್ನಿಕಲ್ ಬಿಡ್ಡನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ ಸಲ್ಲಿಸುವುದು): **12.08.2022 ಸಂಜೆ 5.30 ಗಂಟೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಂಬಂಧಿಸಿದ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ): **16.08.2022 ಬೆಳಿಗ್ಗೆ 11.00 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ (ಆಯುಕ್ತರ ಕಛೇರಿಯಲ್ಲಿ): **18.08.2022 ಬೆಳಿಗ್ಗೆ 11.00 ಗಂಟೆಗೆ.**

ಟೆಂಡರ್‌ದಾರರು ಇಎಂಡಿ ಮೊತ್ತ **ರೂ.2.00 ಲಕ್ಷ (ರೂ. ಎರಡು ಲಕ್ಷ ಮಾತ್ರ)**ಗಳನ್ನು ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಪಾವತಿಸುವುದು. ಟೆಂಡರ್‌ದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ರನ್ವಯ ಪ್ರೋಸಸಿಂಗ್ ವೆಚ್ಚವನ್ನು ಪಾವತಿಸುವುದು. ಟೆಂಡರ್ ಒಪ್ಪುವ ಸಮಿತಿಗೆ ಟೆಂಡರ್ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ಟೆಂಡರನ್ನು ರದ್ದುಪಡಿಸುವ ಮತ್ತು ಪರಿಶೀಲನೆಗೆ ಒಳಪಡಿಸುವ ಹಕ್ಕನ್ನು ಕಾಯ್ದಿರಿಸಿದೆ. ಇತರೆ ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್‌ನಿಂದ ಪಡೆಯುವುದು.

ಸಹಿ/- ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಬೆಂಗಳೂರು.
ವಾಸಾಸಂಇ/ಉನಿ-ಸಿ.ಪಿ/1623/ಎಂಸಿಎ/2022-23

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831)2463850/ಫ್ಯಾಕ್ಸ್ ಸಂ:(0831) 2423008
No.EE/MI&GWDDD/BGM/TND/AE-1/2022-23/2437 Date:01-08-2022

ಅಲ್ಪಾವಧಿ ಟೆಂಡರ ಪ್ರಕಟಣೆ (KW-3 & 4)


ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ-2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಇ ಪ್ರೋಕ್ಯೂರಮೆಂಟ್" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಗೋಕಾಕ ಉಪ ವಿಭಾಗದ ವ್ಯಾಪ್ತಿಯಲ್ಲಿಯ ಸವದತ್ತಿ ತಾಲ್ಲೂಕು ಹಾಗೂ ಗೋಕಾಕ ತಾಲ್ಲೂಕಿನ 2021-22 ಹಾಗೂ 2022-23 ನೇ ಸಾಲಿನ 4702 ಲೆಕ್ಕ ಶೀರ್ಷಿಕೆಯಡಿಯಲ್ಲಿಯ 11 ಕಾಮಗಾರಿಗಳಿಗಾಗಿ ಟೆಂಡರ ಕರೆಯಲಾಗಿದ್ದು, ಅಂದಾಜು ಮೊತ್ತ ಕನಿಷ್ಠ ರೂ.90.00ಲಕ್ಷಗಳು ಹಾಗೂ ಗರಿಷ್ಠ ರೂ.267.00 ಲಕ್ಷಗಳು. ಸದರಿ ಕಾಮಗಾರಿಗಳಿಗೆ ಗುತ್ತಿಗೆದಾರರು ದರಗಳನ್ನು GST ರಹಿತ (ಏ.ನಿ.ಯೋ.ವಿದ್ಯುತ್ತೀಕರಣ ಹೊರತುಪಡಿಸಿ) ನಮೂದಿಸುವುದು ಮತ್ತು ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ GST ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ಹೆಚ್ಚುವರಿ ಗುತ್ತಿಗೆ ಅವಧಿಯಲ್ಲಿ GST ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಸದರಿ ಕಾಮಗಾರಿಗಳ ವಿವರಗಳನ್ನು "ಇ-ಪ್ರೋಕ್ಯೂರಮೆಂಟ್"ನಲ್ಲಿ ದಿನಾಂಕ:03-08-2022 ರಿಂದ ದಿನಾಂಕ:12-08-2022 ರವರೆಗೆ ಪಡೆಯಬಹುದು.

ಗೋಕಾಕ ತಾಲ್ಲೂಕಿನ ಕಾಮಗಾರಿಗಳಿಗಾಗಿ ಮಾತ್ರ:ಸರ್ಕಾರದ ಆದೇಶ ಪತ್ರ ಸಂಖ್ಯೆ: MID/137/MISU/2022 ಬೆಂಗಳೂರು, ದಿನಾಂಕ: 17-02-2022 ರಲ್ಲಿ ಸಹಮತಿಸಲಾದ ಅನುದಾನದ ಮಿತಿಯಲ್ಲಿಯೇ ಟೆಂಡರ್ ಪ್ರಿಮೀಯಂ ಕೂಡ ಒಳಗೊಂಡಿರತಕ್ಕದ್ದು ಎಂಬ ಷರತ್ತನ್ನು ವಿಧಿಸಿದ್ದು, ಗುತ್ತಿಗೆದಾರರು ಟೆಂಡರಿಗಿಟ್ಟ ಅಂದಾಜಿನ ದರಗಳಿಗೆ ಸಮವಾಗಿ ಅಥವಾ ಅದಕ್ಕಿಂತ ಕಡಿಮೆ ದರಗಳನ್ನು ನಮೂದಿಸತಕ್ಕದ್ದು.

Note:The intending bidder should visit the concerned works spot and get familiar with the nature of work. Certificate has to be obtained from the concerned Assistant Executive Engineer about visiting the above works spot and it should be uploaded in the tender.

1.ಪೂರ್ವ ಟೆಂಡರ ಸಭೆ ದಿನಾಂಕ:10-08-2022 ಬೆಳಿಗ್ಗೆ 11.00 ಗಂಟೆಗೆ, 2.ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:12-08-2022 ಸಾಯಂಕಾಲ 4.00 ಗಂಟೆಯವರೆಗೆ, 3.ಟೆಂಡರ ತೆರೆಯುವ ದಿನಾಂಕ: 16-08-2022 ಬೆಳಿಗ್ಗೆ 11.00 ಗಂಟೆ ಮುಂದುವರೆದು, 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
5. ಅಂತರಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-645/MCA/2022-23



ಸುಭಾಷಿತ

ಲೋಪಗಳಿಂದಲೇ ದೊಡ್ಡವರು ರೂಪುಗೊಂಡಿದ್ದಾರೆ.
-ಶೇಕ್ಸ್‌ಪಿಯರ್

ಅಲ್ ಕೈದಾ ಮುಖ್ಯಸ್ಥ ಜವಾಹಿರಿ ಹತ್ಯೆ ಭಯೋತ್ಪಾದನೆ ವಿರುದ್ಧ ಮಹತ್ವದ ಗೆಲುವು

ಅಲ್ ಕೈದಾ ಮುಖ್ಯಸ್ಥ ಅಯ್ಮನ್ ಅಲ್ ಜವಾಹಿರಿಯನ್ನು ಅಮೆರಿಕವು ಡ್ರೋನ್ ದಾಳಿಯಲ್ಲಿ ಹತ್ಯೆ ಮಾಡಿರುವುದು ಭಯೋತ್ಪಾದನೆಯ ವಿರುದ್ಧ ಜಗತ್ತು ಸಾರಿರುವ ಯುದ್ಧಕ್ಕೆ ಸಿಕ್ಕ ಮಹತ್ವದ ಜಯ. ಅಲ್ ಕೈದಾದ ಮುಖ್ಯಸ್ಥನಾಗಿದ್ದ ಒಸಾಮಾ ಬಿನ್ ಲಾಡೆನ್‌ಗೆ ಈತ ಸಲಹೆಗಾರನಾಗಿದ್ದ. 2011ರಲ್ಲಿ ಲಾಡೆನ್ ಹತ್ಯೆಯಾದ ಬಳಿಕ ಜವಾಹಿರಿ, ಅಲ್ ಕೈದಾದ ಮುಖ್ಯಸ್ಥನಾದ. ಬಿನ್ ಲಾಡೆನ್‌ನಷ್ಟು ಚಾಣಾಕ್ಷನಲ್ಲದೇ ಇದ್ದರೂ ಅತ್ಯಂತ ಕಷ್ಟಕರ ಸಂದರ್ಭದಲ್ಲಿ ಅಲ್ ಕೈದಾವನ್ನು ಈತ ಮುನ್ನಡೆಸಿದ್ದ. ಅಮೆರಿಕ ಹಾಗೂ ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದನಾ ಸಂಘಟನೆಯ ಜತೆಗೂ ಹೋರಾಟ ನಡೆಸಬೇಕಿದ್ದ ಸನ್ನಿವೇಶವನ್ನು ನಿಭಾಯಿಸಿದ್ದ. 2014ರಿಂದಲೇ ಅಲ್ ಕೈದಾವನ್ನು ಮೂಲೆಗುಂಪು ಮಾಡುವಲ್ಲಿ ಐಎಸ್ ಯಶಸ್ವಿಯಾಗಿದೆ. ಹಾಗಿದ್ದರೂ ಜಿಹಾದಿ ವಲಯದಲ್ಲಿ ಅಲ್ ಕೈದಾ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿತ್ತು. ಇದರಲ್ಲಿ ಜವಾಹಿರಿಯ ಪಾತ್ರ ಮಹತ್ವದ್ದಾಗಿತ್ತು. ಈಗ, ಈತನ ಸಾವಿನೊಂದಿಗೆ ಅಲ್ ಕೈದಾ ಇನ್ನಷ್ಟು ದುರ್ಬಲವಾಗಿದೆ. ಜವಾಹಿರಿಯ ಉತ್ತರಾಧಿಕಾರಿ ಯಾರು ಎಂಬುದು ಸ್ಪಷ್ಟವಿಲ್ಲ. ಹಾಗಾಗಿ, ಅಲ್ ಕೈದಾ ನಾಯಕತ್ವಕ್ಕಾಗಿ ಸಂಘರ್ಷ ಏರ್ಪಡುವ ಸಾಧ್ಯತೆಯೂ ಇದೆ.



ಈತನ ಸಾವಿನೊಂದಿಗೆ ಅಲ್ ಕೈದಾ ಇನ್ನಷ್ಟು ದುರ್ಬಲಗೊಳ್ಳುತ್ತದೆ. ಆದರೆ, ಬಲ ಉಡುಗಿಲ್ಲ ಎಂಬುದನ್ನು ತೋರಿಸಲು ಅಲ್ ಕೈದಾದ ಉಗ್ರರು ಸಂದರ್ಭಕ್ಕಾಗಿ ಕಾಯಬಹುದು

ಅಮೆರಿಕದ ದಾಳಿಯ ಸಂದರ್ಭದಲ್ಲಿ ಜವಾಹಿರಿಯು ಕಾಬೂಲ್‌ನಲ್ಲಿರುವ 'ಸುರಕ್ಷಿತ ಮನೆ'ಯಲ್ಲಿ ಇದ್ದ. ಅಫ್ಗಾನಿಸ್ತಾನದ ರಾಜಧಾನಿಯಲ್ಲಿಯೇ ಈತ ಆಶ್ರಯ ಪಡೆದುಕೊಂಡಿದ್ದ ಎಂಬ ವಾಸ್ತವವು ಅಲ್ಲಿನ ತಾಲಿಬಾನ್ ಸರ್ಕಾರವು ಈತನಿಗೆ ಯಾವ ಮಟ್ಟದ ರಕ್ಷಣೆ ಒದಗಿಸಿತ್ತು ಎಂಬುದನ್ನು ತೋರಿಸುತ್ತದೆ. ಅಲ್ ಕೈದಾ ಮತ್ತು ಇತರ ಎಲ್ಲ ಉಗ್ರಗಾಮಿ ಸಂಘಟನೆಗಳ ಜತೆಗಿನ ಸಂಪರ್ಕ ಕಡಿದುಕೊಳ್ಳುವುದಾಗಿ ತಾಲಿಬಾನ್ ಸರ್ಕಾರವು ಭರವಸೆ ಕೊಟ್ಟಿತ್ತು. ಅಮೆರಿಕ ಮತ್ತು ತಾಲಿಬಾನ್ ನಡುವೆ 2020ರ ಫೆಬ್ರುವರಿಯಲ್ಲಿ ನಡೆದ ಒಪ್ಪಂದದಲ್ಲಿ ಈ ಭರವಸೆ ಕೊಡಲಾಗಿತ್ತು. ಇಂತಹ ಸಂಘಟನೆಗಳು ಅಫ್ಗಾನಿಸ್ತಾನದಿಂದ ಕಾರ್ಯಾಚರಣೆ ನಡೆಸಲು ಅವಕಾಶ ಕೊಡುವುದಿಲ್ಲ ಎಂದೂ ಹೇಳಿತ್ತು. ಅಲ್ ಕೈದಾ ಮುಖ್ಯಸ್ಥನಿಗೆ ಆಶ್ರಯ ಕೊಡುವ ಮೂಲಕ ತಾನು ಬದಲಾಗಿಲ್ಲ ಎಂಬುದನ್ನು ತಾಲಿಬಾನ್ ತೋರಿಸಿದೆ. ಅಮೆರಿಕದಿಂದ ಉದಾರವಾಗಿ ಆರ್ಥಿಕ ನೆರವು ಪಡೆದುಕೊಳ್ಳುವುದಕ್ಕಾಗಿ, ಜವಾಹಿರಿ ಇದ್ದ ಸ್ಥಳದ ಬಗ್ಗೆ ಪಾಕಿಸ್ತಾನದ ಸೇನೆಯು ಅಮೆರಿಕಕ್ಕೆ ಮಾಹಿತಿ ನೀಡಿರಬಹುದು ಎಂಬ ಮಾತು ಇದೆ. ಅಲ್ ಕೈದಾ ಜತೆಗೆ ನಂಟು ಬೇಡ ಎಂದು ಪ್ರತಿಪಾದಿಸುವ ತಾಲಿಬಾನ್‌ನ ಒಂದು ಬಣವು ಅಮೆರಿಕಕ್ಕೆ ಮಾಹಿತಿ ನೀಡಿರುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಇದು ನಿಜವಾಗಿದ್ದರೆ, ತಾಲಿಬಾನ್ ಸರ್ಕಾರದೊಳಗಿನ ಕಾಳಗ ತೀವ್ರಗೊಳ್ಳಬಹುದು. ದಕ್ಷಿಣ ಏಷ್ಯಾದ ರಾಜಕಾರಣದಲ್ಲಿ ಮುಂದಿನ ದಿನಗಳಲ್ಲಿ ದೊಡ್ಡ ಕ್ಷೋಭೆಗೆ ಇದು ಕಾರಣವಾಗಬಹುದು.

ಭಾರತದೊಳಕ್ಕೆ ಅಲ್ ಕೈದಾ ನುಸುಳುವಂತೆ ಮಾಡಲು ಜವಾಹಿರಿ ಪ್ರಯತ್ನಿಸಿದ್ದ. ಅದಕ್ಕಾಗಿ ಆತ ಪ್ರತ್ಯೇಕ ಘಟಕವೊಂದನ್ನು ಕೂಡ ರಚಿಸಿಕೊಂಡಿದ್ದ. ಆದರೆ, ಈ ಪ್ರಯತ್ನಕ್ಕೆ ಅಂತಹ ಯಶಸ್ಸು ದೊರೆಯಲಿಲ್ಲ. ಜಿಹಾದಿ ಗುಂಪುಗಳಿಗೆ ಭಾರತೀಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿಕೊಳ್ಳುವುದಕ್ಕೂ ಆತ ಬಯಸಿದ್ದ. ಇಸ್ಲಾಂ ಮೇಲೆ ಆಗುತ್ತಿರುವ ದಾಳಿಯ ವಿರುದ್ಧ ಹೋರಾಡಬೇಕು ಎಂದು ಆಗಾಗ ಬಿಡುಗಡೆ ಮಾಡಿದ್ದ ವಿಡಿಯೊಗಳಲ್ಲಿ ಈತ ವಿನಂತಿ ಮಾಡಿಕೊಂಡಿದ್ದ. ಬಿಜೆಪಿಯ ವಕ್ತಾರರಾಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದ್ ಕುರಿತು ನೀಡಿದ್ದ 'ಅವಹೇಳನಕಾರಿ' ಹೇಳಿಕೆಯ ಬಳಿಕ ಭಾರತದ ವಿರುದ್ಧ ಜಿಹಾದ್‌ಗೂ ಜವಾಹಿರಿ ಕರೆ ನೀಡಿದ್ದ. ಈತನ ಸಾವಿನೊಂದಿಗೆ ಅಲ್ ಕೈದಾ ಇನ್ನಷ್ಟು ದುರ್ಬಲಗೊಳ್ಳುತ್ತದೆ. ಆದರೆ, ಬಲ ಉಡುಗಿಲ್ಲ ಮತ್ತು ಪ್ರಸ್ತುತತೆ ಮಾಸಿಲ್ಲ ಎಂಬುದನ್ನು ತೋರಿಸಲು ಅಲ್ ಕೈದಾದ ಉಗ್ರರು ಸಂದರ್ಭಕ್ಕಾಗಿ ಕಾಯಬಹುದು. ಹಾಗಾಗಿ, ಭಯೋತ್ಪಾದನೆ ಮೇಲೆ ಭಾರತವು ಇರಿಸಿದ್ದ ನಿಗಾವನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಭಯೋತ್ಪಾದನೆಯ ವಿರುದ್ಧ ಭಾರತವು ನಡೆಸುತ್ತಿರುವ ಹೋರಾಟವು ತೋಳ್ಬಲ ಮತ್ತು ಸೇನಾ ಕ್ರಮಕ್ಕೆ ಸೀಮಿತ ಆಗಬಾರದು. ದೇಶದೊಳಗೆ ಸೃಷ್ಟಿಯಾಗಿರುವ ಅತೃಪ್ತಿಯನ್ನು ಶಮನಗೊಳಿಸುವ ಪ್ರಯತ್ನ ಆಗಬೇಕು. ಜವಾಹಿರಿ ಸಾವಿನ ನಂತರದಲ್ಲಿ ಎದುರಾಗುವ ಸನ್ನಿವೇಶವನ್ನು ಎದುರಿಸಲು ಭಾರತ ಮತ್ತು ಇತರ ದೇಶಗಳು ಸಜ್ಜಾಗಬೇಕಿದೆ.

ಸಮಾಜದಲ್ಲಿ ಧ್ರುವೀಕರಣ ಸೃಷ್ಟಿಸುವುದರಿಂದ ಚುನಾವಣೆಯಲ್ಲಿ ಲಾಭ ಆಗಬಹುದು. ಆದರೆ...

ಚುನಾವಣೆ: ಯಾರ ನಡೆ ಹೇಗೆ?



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ರಾಜ್ಯದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಮೂರು ವರ್ಷ ತುಂಬಿದೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಒಂದು ವರ್ಷ ತುಂಬಿದೆ. ಈ ಹಂತದಲ್ಲಿ ಬಿಜೆಪಿಯು ಹೆಚ್ಚು ಅನುಕೂಲಕರ ರಾಜಕೀಯ ವಾತಾವರಣವನ್ನು ನಿರೀಕ್ಷಿಸುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಚೆಗೆ ನಡೆದ ಸರಣಿ ಹತ್ಯೆಗಳಿಂದಾಗಿ ಉಂಟಾಗಿರುವ ಬಿಗುವಿನ ಸನ್ನಿವೇಶವನ್ನು ಪಕ್ಷವು ಈ ಹೊತ್ತಿನಲ್ಲಿ ಖಂಡಿತ ಬಯಸಿರಲಿಲ್ಲ.

ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ಒಂದು ವರ್ಷ ಪೂರ್ಣಗೊಳಿಸಿದ ಆಚರಣೆಯನ್ನು, ಹತ್ಯೆ ಪ್ರಕರಣಗಳ ಹಿನ್ನೆಲೆಯಲ್ಲಿ ರದ್ದುಪಡಿಸಲಾಯಿತು. ಬಿಜೆಪಿ ಕಾರ್ಯಕರ್ತರ ಹತ್ಯೆಗಳನ್ನು, ಹೆಚ್ಚುತ್ತಿರುವ ಕೋಮು ಉದ್ವಿಗ್ನತೆಯನ್ನು ತಡೆಯಲು ಸರ್ಕಾರಕ್ಕೆ ಆಗುತ್ತಿಲ್ಲ ಎಂದು ಪಕ್ಷದ ಕಾರ್ಯಕರ್ತರು ಹಾಗೂ ಪಕ್ಷವನ್ನು ಬೆಂಬಲಿಸುವ ಇತರ ಸಂಘಟನೆಗಳ ಕಾರ್ಯಕರ್ತರು ಬೇಸರಗೊಂಡಿರುವುದು ಮುಖ್ಯಮಂತ್ರಿ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಸವಾಲುಗಳನ್ನು ಇನ್ನಷ್ಟು ಹೆಚ್ಚು ಮಾಡಿದೆ.

ವಿಸ್ತೃತ ನೆಲೆಯಲ್ಲಿ ಗಮನಿಸಿದಾಗ, ಒಂದು ಹತ್ಯೆಯು ಇನ್ನೊಂದು ಹತ್ಯೆಗೆ ಕಾರಣವಾಗಿದೆ ಮತ್ತು ಹತ್ಯೆಗಳ ಸರಣಿಯು ಕೆಲವು ಸಮಯದಿಂದ ಮುಂದುವರಿದಿದೆ ಎಂಬುದು ಗೊತ್ತಾಗುತ್ತದೆ. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ವಿಶ್ವಾಸ ಹೆಚ್ಚಿಸುವ ಕೆಲಸಗಳನ್ನು ಸರ್ಕಾರವು ಮಾಡಲಿ ಎಂದು ಜನ ಬಯಸುತ್ತಿದ್ದಾರೆ.

ಇನ್ನು ಒಂದು ವರ್ಷಕ್ಕೂ ಮೊದಲೇ ರಾಜ್ಯದಲ್ಲಿ ಚುನಾವಣೆ ನಡೆಯಲಿದೆ. ಹೀಗಾಗಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಹಲವು ಕಾರಣಗಳಿಂದಾಗಿ ಈ ಚುನಾವಣೆಯು ತೀವ್ರ ಹಣಾಹಣಿಗೆ ಸಾಕ್ಷಿಯಾಗಲಿದೆ. ಆಡಳಿತದಲ್ಲಿ ಇರುವ ಪಕ್ಷವು ರಾಜ್ಯದಲ್ಲಿ ಮತ್ತೆ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿದ ನಿದರ್ಶನವು ರಾಜ್ಯದಲ್ಲಿ ಸರಿಸುಮಾರು ನಾಲ್ಕು ದಶಕಗಳಿಂದ ಇಲ್ಲ.

ಹಾಲಿ ವಿಧಾನಸಭೆಯು ಒಂದು ವರ್ಷ ಪೂರ್ಣಗೊಂಡ ನಂತರದಲ್ಲಿ ಬಿಜೆಪಿಯು ವಿಧಾನಸಭೆಯಲ್ಲಿ ಬಹುಮತ ಪಡೆದುಕೊಂಡಿತು. ಅಂದರೆ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಕೆಲವು ಶಾಸಕರು ತಮ್ಮ ಪಕ್ಷ ಹಾಗೂ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ, ಬಿಜೆಪಿಯಿಂದ ಟಿಕೆಟ್ ಪಡೆದು ಉಪಚುನಾವಣೆಯಲ್ಲಿ ಗೆದ್ದು ಬಂದ ನಂತರದಲ್ಲಿ ಬಿಜೆಪಿಗೆ ಬಹುಮತ ದೊರೆಯಿತು. ಬಿಜೆಪಿಯ ಮೂರು ವರ್ಷಗಳ ಅಧಿಕಾರ ಅವಧಿಯಲ್ಲಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದು, ಬೊಮ್ಮಾಯಿ ಅವರಿಗೆ ಹುದ್ದೆ ಬಿಟ್ಟುಕೊಟ್ಟರು.

ಈಗಿನ ಮುಖ್ಯಮಂತ್ರಿ ಹಾಗೂ ಹಿಂದಿನ ಮುಖ್ಯಮಂತ್ರಿಯ ನಾಯಕತ್ವದ ಶೈಲಿಯು ಬಹಳ ಭಿನ್ನ. ಯಡಿಯೂರಪ್ಪ ಅವರು ರಾಜಕೀಯದಲ್ಲಿ ಬಹಳ ಹಿರಿಯ ವ್ಯಕ್ತಿ. ರಾಜ್ಯದಲ್ಲಿ ಬಿಜೆಪಿ ಬೆಳೆಯಲು ಅವರು ಮುಖ್ಯ ಪಾತ್ರ ವಹಿಸಿದ್ದಾರೆ. ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ಮುಕ್ತಹಸ್ತ ಇತ್ತು. 2011ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದ ಸಂದರ್ಭವೊಂದು ಇದಕ್ಕೆ ಅಪವಾದ. ಆದರೆ 2019ರಲ್ಲಿ ಮುಖ್ಯಮಂತ್ರಿ ಆದ ಸಂದರ್ಭದಲ್ಲಿ, ಪ್ರಮುಖ ತೀರ್ಮಾನಗಳನ್ನು ಪಕ್ಷದ ಕೇಂದ್ರ ನಾಯಕತ್ವವು ಕೈಗೊಳ್ಳುತ್ತದೆ ಎಂಬ ಸ್ಪಷ್ಟ ಸೂಚನೆಗಳು ಇದ್ದವು. ಹೀಗಿದ್ದರೂ, ಸರ್ಕಾರದ ಸೇವೆಗಳನ್ನು ಜನರಿಗೆ ತಲುಪಿಸುವಲ್ಲಿ ಹಾಗೂ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವಲ್ಲಿ ಯಡಿಯೂರಪ್ಪ ಅವರಿಗೆ ಮುಕ್ತ ಸ್ವಾತಂತ್ರ್ಯ ಇತ್ತು.

ಬೊಮ್ಮಾಯಿ ಅವರು ಕೇಂದ್ರ ನಾಯಕತ್ವವು ಬಹಳ ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿರುವ ವ್ಯಕ್ತಿ. ಅವರ ನಾಯಕತ್ವದ ಶೈಲಿಯನ್ನು ತೀರ್ಮಾನಿಸುವಲ್ಲಿ ಮೂರು ಅಂಶಗಳು ಮಹತ್ವದ ಕೆಲಸ ಮಾಡಿವೆ. ಮೊದಲನೆಯದಾಗಿ, ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ತಮ್ಮ ನಾಯಕತ್ವವನ್ನು ಸಾಬೀತು ಮಾಡಬೇಕಿತ್ತು. ಅದರಲ್ಲೂ, ಅತ್ಯಂತ ಕಿರು ಅವಧಿಯಲ್ಲಿ ಅವರು ಈ ಕೆಲಸ ಮಾಡಬೇಕಿತ್ತು. ಬೊಮ್ಮಾಯಿ ಅವರು ಮುಖ್ಯಮಂತ್ರಿ ಆದ ನಂತರದಲ್ಲಿ ವಿಧಾನಸಭಾ ಚುನಾವಣೆ ಎದುರಾಗಲು ಎರಡು ವರ್ಷಗಳಿಗಿಂತ ಕಡಿಮೆ ಅವಧಿ ಇತ್ತು.

ಎರಡನೆಯದಾಗಿ, ಹಲವು ಹಿತಾಸಕ್ತಿಗಳು ಹಾಗೂ ಹಲವು ವರ್ಗಗಳ ಒತ್ತಡಗಳನ್ನು ಅವರು ನಿಭಾಯಿಸಬೇಕಿತ್ತು. ವಿಭಿನ್ನ ನಿಲುವುಗಳ ಶಾಸಕರನ್ನು, ಬಗೆಬಗೆಯ ಮಹತ್ವಾಕಾಂಕ್ಷೆಗಳು ಇರುವ ಕಾರ್ಯಕರ್ತರನ್ನು ಅವರು ಜೊತೆಗೆ ಕರೆದೊಯ್ಯಬೇಕಿತ್ತು. ಮೂರನೆಯದಾಗಿ, ಬೊಮ್ಮಾಯಿ ಅವರು ಪಕ್ಷದ ನಾಯಕತ್ವದ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡಬೇಕಿತ್ತು. ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಪದೋನ್ನತಿ ಹೊಂದಲು ಈ ನಾಯಕತ್ವ ಕಾರಣ. ತಮ್ಮ ಮಾರ್ಗದರ್ಶಕ ಹಾಗೂ ನಿಕಟಪೂರ್ವ ಮುಖ್ಯಮಂತ್ರಿಯ ದೈತ್ಯ ಛಾಯೆಯಿಂದ ಹೊರಬಂದು, ಸ್ವತಂತ್ರವಾಗಿ ಮತ್ತು ನಿರ್ಣಾಯಕವಾಗಿ ಕೆಲಸ ಮಾಡುತ್ತಿರುವಂತೆ ಅವರು ತೋರಿಸಿಕೊಳ್ಳಬೇಕಿತ್ತು.

ಈ ಒಂದು ವರ್ಷದಲ್ಲಿ ಮುಖ್ಯಮಂತ್ರಿಯ ಬಹುತೇಕ ಅವಧಿಯು ಬಿಕ್ಕಟ್ಟುಗಳ ನಿರ್ವಹಣೆಯಲ್ಲಿ ಕಳೆದುಹೋಗಿದೆ. ರಾಜ್ಯದಲ್ಲಿ ಕೋಮು ನೆಲೆಯ ಬಿಕ್ಕಟ್ಟಿನ ಸಂದರ್ಭಗಳು ಹೆಚ್ಚಾಗುತ್ತಿರುವುದು ಸ್ಪಷ್ಟ. ಕಾಲಕಾಲಕ್ಕೆ ರಾಜ್ಯದಲ್ಲಿ ಧಾರ್ಮಿಕವಾಗಿ ಬಿಕ್ಕಟ್ಟಿನ ಸ್ಥಿತಿಗಳು ಉದ್ಭವಿಸಿವೆ. ಅನಿವಾರ್ಯ ಎನ್ನಬಹುದಾದ ರಾಜಕೀಯ ಆರೋಪ-ಪ್ರತ್ಯಾರೋಪಗಳು ನಡೆಯುತ್ತವೆಯಾದರೂ ದ್ವೇಷ, ಅನುಮಾನ ಮತ್ತು ಶತ್ರುತ್ವದ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಆಡಳಿತ ಯಂತ್ರವು ಇನ್ನಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತದೆ ಎಂದು ಹಲವರು ನಿರೀಕ್ಷೆ ಮಾಡಿದ್ದರು.



ಚುನಾವಣೆ ಹತ್ತಿರವಾಗುತ್ತಿರುವ ಕಾರಣ ರಾಜಕೀಯ ಪ್ರಮುಖರೆಲ್ಲ ಅಲ್ಪಾವಧಿಯ ರಾಜಕೀಯ ಲಾಭದ ಹಾದಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅದರ ದೀರ್ಘಾವಧಿ ಸಾಮಾಜಿಕ ಪರಿಣಾಮಗಳು ಏನಿರುತ್ತವೆ ಎಂಬ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಸಮಾಜದಲ್ಲಿ 'ನಾವು' ಮತ್ತು 'ಅವರು' ಎಂಬ ಧ್ರುವೀಕರಣ ಸೃಷ್ಟಿಸುವುದರಿಂದ ಚುನಾವಣೆಯಲ್ಲಿ ಲಾಭ ಆಗಬಹುದು. ಆದರೆ, ಇಂತಹ ವಿಭಜನೆಗಳಿಗೆ ತೆರಬೇಕಾದ ಸಾಮಾಜಿಕ ಬೆಲೆಯು ಸಾಮಾನ್ಯವಾಗಿ ಕಾಣಿಸುವುದಿಲ್ಲ.

ಚುನಾವಣೆ ಹತ್ತಿರ ಬರುತ್ತಿರುವ ಹೊತ್ತಿನಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಮತದಾರರ ಬೆಂಬಲ ಗಳಿಸಲು ಏನು ಮಾಡಬಹುದು? ಬಿಜೆಪಿಯು ಹಾಲಿ ಅಧಿಕಾರ ಅವಧಿಯಲ್ಲಿ ಸರ್ಕಾರದ ಸೇವೆಗಳನ್ನು ಒದಗಿಸಿದ್ದನ್ನು ಆಧಾರವಾಗಿ ಇರಿಸಿಕೊಳ್ಳಬಹುದೇ? 'ಡಬಲ್ ಎಂಜಿನ್ ಸರ್ಕಾರ' ಎಂಬ ಸಂದೇಶವನ್ನು ಅವರು ಯಾವ ಬಗೆಯಲ್ಲಿ ರವಾನಿಸಬಹುದು? ಧಾರ್ಮಿಕ ಧ್ರುವೀಕರಣವನ್ನೇ ಅವರು ಮುಂದೆ ನೆಚ್ಚಿಕೊಳ್ಳುವರೇ? ಈ ಮೂರನ್ನೂ ಬಳಸಿಕೊಳ್ಳಲಾಗುತ್ತದೆ ಎಂದಾದರೆ, ಯಾವುದಕ್ಕೆ ಎಷ್ಟು ಆದ್ಯತೆ ನೀಡಲಾಗುತ್ತದೆ?

ಇದು ರಾಜ್ಯದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆಯೇ? ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ತನ್ನ ಕಾರ್ಯತಂತ್ರವನ್ನು ಯಾವ ಬಗೆಯಲ್ಲಿ ರೂಪಿಸುತ್ತದೆ? ತಮ್ಮ ಅಸ್ತಿತ್ವವನ್ನು ಗಟ್ಟಿಯಾಗಿ ಹೇಳಿಕೊಳ್ಳಲು ಹಾಗೂ ಮುಂದೆ ರಾಷ್ಟ್ರ ಮಟ್ಟದಲ್ಲಿ ಪುನಶ್ಚೇತನ ಕಾಣಲು ಕಾಂಗ್ರೆಸ್ ಪಕ್ಷಕ್ಕೆ ಕರ್ನಾಟಕದಲ್ಲಿ ಒಳ್ಳೆಯ ಸಾಧನೆ ತೋರುವುದು ಅಗತ್ಯವೂ ಹೌದು. ಕಾಂಗ್ರೆಸ್ ಪಕ್ಷವನ್ನು ಯಾರೂ ಸೋಲಿಸುವುದಿಲ್ಲ, ಪಕ್ಷವು ತನ್ನನ್ನು ತಾನೇ ಸೋಲಿಸಿಕೊಳ್ಳುತ್ತದೆ ಎಂಬ ಮಾತು ಇದೆ. ಚುನಾವಣೆ ಹತ್ತಿರವಾದಂತೆಲ್ಲ ಪಕ್ಷದಲ್ಲಿ ಒಗ್ಗಟ್ಟು ಉಳಿದುಕೊಳ್ಳುತ್ತದೆಯೇ ಅಥವಾ ಪಕ್ಷದಲ್ಲಿನ ಬಣ ಕಿತ್ತಾಟವು ಪಕ್ಷದ ಸೋಲಿಗೆ ಕಾರಣವಾಗುತ್ತದೆಯೇ? ಗೆಲುವು ಖಚಿತವಾಗಿದ್ದಾಗಲೂ ಸೋಲು ಅನುಭವಿಸುವ ಕಲೆಯು ಕಾಂಗ್ರೆಸ್ಸಿಗೆ ಹಿಂದಿನಿಂದಲೂ ಪರಿಚಿತ! ಹಿಂದೆ ಮಾಡಿರುವಂತೆ ಸಾಮಾಜಿಕ ಮೈತ್ರಿಯೊಂದನ್ನು ಪಕ್ಷವು ಕಟ್ಟಲಿದೆಯೇ?

ಯಾವ ಪಕ್ಷಕ್ಕೂ ಬಹುಮತ ಸಿಗದಿದ್ದರೆ ತನಗೆ ಒಳ್ಳೆಯದು ಎಂಬ ಧೋರಣೆಯಲ್ಲಿ ಜೆಡಿಎಸ್ ಇದೆ. ಈ ಪರಿಸ್ಥಿತಿಯು 2018 ರಲ್ಲಿಯೂ ನಿರ್ಮಾಣವಾಗಿತ್ತು. ಅಲ್ಪ ಅವಧಿಯ ಮೈತ್ರಿ ಸರ್ಕಾರದ ರಚನೆಗೆ ಕಾರಣವಾಗಿತ್ತು. ಹೀಗಿದ್ದರೂ, ಪಕ್ಷ ದೊಳಗೆ ಬಿಗಿಯಾದ ಬಂಧ ಇಲ್ಲದಿರುವುದು, 'ಆಳುವ ಕುಟುಂಬದ' ಪ್ರಾಬಲ್ಯ ಇರುವುದೇ ಪಕ್ಷಕ್ಕೆ ದೊಡ್ಡ ಮಿತಿಯಾಗಬಹುದು.

ಅಧಿಕಾರದಲ್ಲಿ ಇರುವ ಪಕ್ಷವಾಗಿ ಬಿಜೆಪಿ ಇರಿಸುವ ಹೆಜ್ಜೆಗಳು ಮತ್ತು ಮುಖ್ಯಮಂತ್ರಿ ಕೈಗೊಳ್ಳುವ ತೀರ್ಮಾನಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ. ಹಾಗೆಯೇ ಕಾಂಗ್ರೆಸ್ ಪಕ್ಷದ ನಡೆಗಳನ್ನು ಕೂಡ.

ಚುರುಮುರಿ



ನಗೆ ಮದ್ದು

• ಮಣ್ಣೆರಾಜು

'ಮನೆಯಲ್ಲಿ ಎಲ್ಲರೂ ಆರೋಗ್ಯವಾಗಿದ್ದೀರಾ?...' ಎನ್ನುತ್ತಾ ಆರೋಗ್ಯ ಕಾರ್ಯಕರ್ತೆ ಬಂದರು.

'ಎಲ್ಲರಿಗೂ ಕೆಮ್ಮು, ನೆಗಡಿ, ಶೀತ. ಇಷ್ಟು ಬಿಟ್ಟರೆ ಇನ್ನಾವ ಬಾಧೆಯೂ ಇಲ್ಲ' ಎಂದು ಸುಮಿ ಸ್ವಾಗತಿಸಿದಳು.

'ನೀವೇ ನೋಡಿ, ನಮ್ಮ ಮೂಗು ಮೂಲ ಆಕಾರ ಕಳೆದುಕೊಂಡು ಟೊಮೆಟೊ ಗಾತ್ರದಲ್ಲಿ ವಿಕಾರ ಆಗಿದೆ' ಅಂದ ಶಂಕ್ರಿ.

'ಈಗ ಸ್ವಲ್ಪ ಸುಧಾರಿಸಿದೆ, ನಿನ್ನೆ ದುಂಬಾ ದೆಗಡಿಯಾಗಿ ಕನ್ನಡ ಪದಗಳೇ ಅಸ್ತವ್ಯಸ್ತವಾಗಿದ್ದವು' ಮಗಳು ಪಮ್ಮಿ ಹೇಳಿದಳು.

'ನೆಗಡಿ ಡಾಕ್ಟರ್ ಹತ್ರ ಚಿಕಿತ್ಸೆ ಪಡೆದು, ಕನ್ನಡ ಪಂಡಿತರಿಂದ ಪದ ರಿಪೇರಿ ಮಾಡಿಸಿಕೊಳ್ಳಬೇಕು ಎಂದುಕೊಂಡಿದ್ದೆವು, ಹೆಂಡ್ತಿ ಮಾಡಿಕೊಟ್ಟ ಪರಿಣಾಮಕಾರಿ ಕಷಾಯ ಕುಡಿದು ಚೇತರಿಸಿಕೊಂಡೆವು' ಅಂದ ಶಂಕ್ರಿ.

'ಆದರೂ ಮೂಗಿನಲ್ಲಿ ನಿರಂತರ ಜಲಧಾರೆಯಾಗುತ್ತಿದೆ' ಪಮ್ಮಿ ಮೂಗು ಒರೆಸಿಕೊಂಡಳು.

'ಹಾಗಂತ ಮೂಗಿಗೆ ಕಟ್ಟೆ ಕಟ್ಟಲಾಗುವುದಿಲ್ಲ. ಮಳೆಗಾಲದಲ್ಲಿ ಕೆರೆ- ಕಟ್ಟೆಗಳೇ ತುಂಬಿ ಕೋಡಿ ಹರಿಯುತ್ತಿವೆ...' ಅಂದರು ಆರೋಗ್ಯ ಮೇಡಂ.

'ಮಳೆಯಲ್ಲಿ ನೆನೆದರೆ ನೆಗಡಿ ಬರುತ್ತೆ, ನೆನೆಯದಿದ್ದರೂ ಬರುತ್ತಾ ಆಂಟಿ?'

'ಮಳೆಗಾಲ ಆಗಿರೋದ್ರಿಂದ ಮಳೆಯಲ್ಲಿ ನೆನೆದರೂ, ಮಳೆಯನ್ನು ನೆನೆದರೂ ನೆಗಡಿ ಆಗುತ್ತೆ ಅಲ್ವಾ ಮೇಡಂ?' ಸುಮಿ ಕೇಳಿದಳು.

'ನೇತ್ರ ದಾನ, ಕಿಡ್ನಿ ದಾನದಂತೆ ಮೂಗು ದಾನಕ್ಕೆ ಅವಕಾಶ ಇದ್ದಿದ್ದರೆ ನನ್ನ ಮೂಗನ್ನು ಯಾರಿಗಾದರೂ ದಾನ ಮಾಡಿಬಿಡುತ್ತಿದ್ದೆ' ಶಂಕ್ರಿ ಮೂಗು ಉಜ್ಜಿಕೊಂಡ.

'ನಿಮ್ಮದು ಕಾಮಿಡಿ ಫ್ಯಾಮಿಲಿ. ಶೀತ, ನೆಗಡಿ ನಡುವೆಯೂ ಆರೋಗ್ಯವಾಗಿದ್ದೀರಿ. ನಿಮ್ಮ ಆರೋಗ್ಯದ ಮದ್ದು ಯಾವುದು?' ಕೇಳಿದರು ಆರೋಗ್ಯ ಮೇಡಂ.

'ನಗೆ ಮದ್ದು ಮೇಡಂ...' ಅಂತ ನಕ್ಕಳು ಸುಮಿ.

'ನನಗೂ ಗೊತ್ತಾಗ್ತಿದೆ, ನೀವು ಆರೋಗ್ಯವಾಗಿರುವಾಗ ನನಗೇನು ಕೆಲಸ...' ಎಂದು ಹೇಳಿ ಆರೋಗ್ಯ ಮೇಡಂ ಹೊರಟರು.

ದಿನದ ಟ್ವೀಟ್

ಕರ್ನಾಟಕದ ಮಾದರಿ



ಹತ್ತನೇ ಶತಮಾನದಲ್ಲಿ ಪಂಪ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಹೇಳಿದ್ದನು. ಕುವೆಂಪು ಹೇಳಿದ ವಿಶ್ವಮಾನವ ಸಂದೇಶವೂ ಇದನ್ನೇ ಪ್ರತಿಪಾದಿಸಿದೆ. ಈ ಇಬ್ಬರು ಮಹಾಕವಿಗಳ ನಡುವೆ ಒಂದು ಸಾವಿರ ವರ್ಷಗಳ ಅಂತರವಿದೆ. ಆದರೆ, ಹೇಳಿದ ಮಾತುಗಳು ತಾತ್ವಿಕವಾಗಿ ಒಂದೇ ಆಗಿವೆ. ಇದರರ್ಥ ಇಷ್ಟೇ- ಕನ್ನಡ ಸಮಾಜ ಸದಾ ಮನುಷ್ಯತ್ವದ ಪರ. ಇದೇ ಕರ್ನಾಟಕದ ಮಾಡೆಲ್.

ಗಿರೀಶ್ ಕಾರ್ಗದ್ದೆ, ನಾಗರಿಕ

ಕಿಡಿನುಡಿ



ಅಪರಾಧ ಪ್ರಕರಣಗಳ ತನಿಖೆ, ಕಾನೂನು ಮತ್ತು ಸುವ್ಯವಸ್ಥೆಯ ಬಿಕ್ಕಟ್ಟುಗಳನ್ನು ನಿರ್ವಹಿಸುವ ಸ್ಥಳೀಯ ಪೊಲೀಸ್ ಅಧಿಕಾರಿಗಳ ಕಾರ್ಯವ್ಯಾಪ್ತಿಯಲ್ಲಿ ರಾಜಕೀಯ ವ್ಯಕ್ತಿಗಳು ವ್ಯಾಪಕ ಹಸ್ತಕ್ಷೇಪ ಮಾಡುವುದನ್ನು ಕೈಬಿಡದೆ, ಸಾವು-ನೋವಿನ ಮನೆಗಳಿಗೆ ಎಡತಾಕಿ ಸಾಂತ್ವನದ ಮಾತುಗಳನ್ನಾಡುವುದು ರಾಜಕೀಯ ಬೂಟಾಟಿಕೆ. ಕಾನೂನು ಪ್ರಕ್ರಿಯೆಗೆ ರಾಜಕೀಯವೇ ಸವಾಲು!

ಕೆ.ಬಿ.ಕೆ. ಸ್ವಾಮಿ, ವಕೀಲ

25 ವರ್ಷಗಳ ಹಿಂದೆ

ಭಾನುವಾರ, 3-8-1997

• **ಭಾಷಣಕ್ಕೆ ಅಡ್ಡಿ, ಘೋಷಣೆ ಪ್ರಧಾನಿ ಸಭಾತ್ಯಾಗ**

ನವದೆಹಲಿ, ಆ. 2– ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಬೇಕು ಮತ್ತು ಲಾಲೂ ಪ್ರಸಾದ್ ಯಾದವ್ ನೇತೃತ್ವದ ಜನತಾ ದಳದ ಮೂವರು ಸಚಿವರನ್ನು ಕೇಂದ್ರ ಸಂಪುಟದಿಂದ ಕೈಬಿಡಬೇಕೆಂದು ಕೂಗಾಡಿದ ಬಿಹಾರದ ಕೆಲವರ ವರ್ತನೆಗೆ ಬೇಸತ್ತು ಪ್ರಧಾನಿ ಐ.ಕೆ. ಗುಜ್ರಾಲ್ ತಮ್ಮ ಭಾಷಣವನ್ನು ಅರ್ಧಕ್ಕೆ ನಿಲ್ಲಿಸಿ ಸಭಾತ್ಯಾಗ ಮಾಡಿದ ಘಟನೆ ಇಂದು ಆರಂಭವಾದ ಜನತಾದಳದ ರಾಷ್ಟ್ರೀಯ ಮಂಡಳಿ ಮತ್ತು ಪ್ರತಿನಿಧಿಗಳ ಸಮಾವೇಶದಲ್ಲಿ ನಡೆಯಿತು.

ಪ್ರಧಾನಿ ಅವರು ಮಾತು ನಿಲ್ಲಿಸಿ ವೇದಿಕೆಯಲ್ಲಿದ್ದ ಯಾರನ್ನೂ ಮಾತನಾಡಿಸದೇ ಹೊರಟದ್ದು ಆಶ್ಚರ್ಯವುಂಟು ಮಾಡಿತು. ಇದರಿಂದ ಇಡೀ ಸಭೆ ಕಕ್ಕಾಬಿಕ್ಕಿಯಾಯಿತು.

ಪ್ರಧಾನಿ ಅವರ ಭಾಷಣಕ್ಕೆ ಅಡ್ಡಿಪಡಿಸಿದವರಲ್ಲಿ ಬಹುತೇಕರು ಬಿಹಾರದವರು. 'ಪ್ರಾಮಾಣಿಕತೆ, ನೀತಿ ಮತ್ತು ಮೌಲ್ಯಗಳ ಬಗೆಗೆ ಮಾತನಾಡುವ ನೀವು ದಳವನ್ನು ಒಡೆದುಹೋದ ಲಾಲೂ ಅವರ ಪಕ್ಷದ ಮೂವರು ಸಚಿವರನ್ನು ಸಂಯುಕ್ತರಂಗದ ಸರ್ಕಾರದಲ್ಲಿ ಏಕೆ ಇಟ್ಟುಕೊಂಡಿದ್ದೀರಿ. ಅವರನ್ನು ಮೊದಲು ಕೈಬಿಡಿ' ಎಂಬ ಘೋಷಣೆ ಕೂಗಿದಾಗ, ಗುಜ್ರಾಲ್ ತಮ್ಮ ಭಾಷಣವನ್ನು ನಿಲ್ಲಿಸಿ ಹೊರಟೇಬಿಟ್ಟರು.

• **ದಳಕ್ಕೆ ಒಳಗಿನ ವೈರಿಗಳದ್ದೇ ಸಮಸ್ಯೆ: ಪಟೇಲ್**

ನವದೆಹಲಿ, ಆ. 2– ಜನತಾದಳಕ್ಕೆ ಹೊರಗಿನಿಂದ ವೈರಿಗಳಿಲ್ಲ. ವೈರಿಗಳಿರುವುದು ಒಳಗಿನಿಂದಲೇ. ಈ ವೈರಿಗಳು ಕುಟುಂಬದಲ್ಲಿಯೇ ಇದ್ದಾರೆ. ನಮಗೆ ತೊಂದರೆ ಉಂಟು ಮಾಡಲು ನಮ್ಮೊಳಗೇ ಕೆಲವರು ಕೆಲಸ ಮಾಡುತ್ತಿರುತ್ತಾರೆ ಎಂದು ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಜನತಾದಳದೊಳಗಿನ ಕುತಂತ್ರ ನೀತಿಯನ್ನು ತರಾಟೆಗೆ ತೆಗೆದುಕೊಂಡರು.

50 ವರ್ಷಗಳ ಹಿಂದೆ

ಗುರುವಾರ, 3-8-1972

• **'ಜಾತಿಯ ಅಸ್ತ್ರ ಬಳಸಿದರೆ ಆ ಆಟ ನಮ್ಮ ಮುಂದೆ ಸಾಗದು'**

ಬೆಂಗಳೂರು, ಆ. 2– ಬಹುಸಂಖ್ಯಾತ ಜಾತಿಗಳನ್ನು ಈಗಿನ ಸರ್ಕಾರ ತುಳಿಯಲು ಪ್ರಯತ್ನಿಸುತ್ತಿದೆ ಎಂಬ ಆಪಾದನೆಗಳನ್ನು ವಿಧಾನಸಭೆಯಲ್ಲಿ ಇಂದು ಸ್ಪಷ್ಟವಾಗಿ ನಿರಾಕರಿಸಿದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು, ಜಾತಿ ಹೆಸರೆತ್ತಿ ತಮ್ಮ ಮೇಲೆ ತಿರುಗಿಬಿದ್ದರೆ, 'ಆ ಆಟ ನಡೆಯೋಲ್ಲ' ಎಂದು ಸಂಸ್ಥಾ ಕಾಂಗ್ರೆಸ್ಸಿಗರಿಗೆ ಬಿಡಿಸಿ ಹೇಳಿದರು.

ಶಾಸಕರಾಗಿ ಯಾರೊಬ್ಬರಿಗೂ ಅವರವರ ಜಾತಿ ಪರವಾಗಿ ಮಾತನಾಡುವ ಅಧಿಕಾರ ಇಲ್ಲ; ಅವರು ಆರಿಸಿ ಬಂದ ಕ್ಷೇತ್ರದಲ್ಲಿ ಎಲ್ಲ ಜಾತಿಯವರೂ ಮತ ನೀಡಿದ್ದಾರೆ ಎಂದು ಜ್ಞಾಪಿಸಿಕೊಟ್ಟ ಶ್ರೀ ಅರಸು ಅವರು ಜಾತಿ ಬಗ್ಗೆ 'ಹೇಳುವವರು ಹೆಡ್ಡರಾದರೂ ಕೇಳುವವರು ಕಿವುಡರಲ್ಲ' ಎಂದು ಕರತಾಡನಗಳ ಮಧ್ಯೆ ತಿಳಿಸಿದರು.

ವಿರೋಧಪಕ್ಷದ ನಾಯಕ ಶ್ರೀ ಎಚ್.ಡಿ.ದೇವೇಗೌಡರು, ರಾಜ್ಯದಲ್ಲಿ ವಿವಿಧ ಜಾತಿಗಳವರು ಪಡೆದುಕೊಂಡ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲು ಸಮಿತಿ ರಚಿಸಬೇಕೆಂದು ಮಂಡಿಸಿದ ಸೂಚನೆ ಮೇಲೆ ನಡೆದ ಚರ್ಚೆಗೆ ಉತ್ತರ ನೀಡಿದ ಅರಸು ಅವರು, 'ಜಾತಿ ಆಧಾರದ ಮೇಲೆ ವಿವರ ಸಂಗ್ರಹಿಸಲು ಸಮಿತಿ ನೇಮಕ ಸಾಧ್ಯವಿಲ್ಲ; ಅದರಿಂದ ಪ್ರಯೋಜನವೂ ಇಲ್ಲ'ಎಂದರು.

• **ಸಿಮ್ಲಾ ಒಪ್ಪಂದದಿಂದ ಭಾರತದ ಬಲವರ್ಧನೆ: ಇಂದಿರಾ ಸಮರ್ಥನೆ**

ನವದೆಹಲಿ, ಆ. 2– ಸಿಮ್ಲಾ ಒಪ್ಪಂದವು ಉಪಖಂಡದಲ್ಲಿ 'ಶಾಂತಿ ಸ್ಥಾಪನೆ ಕಡೆಗೆ ಒಂದು ಹೊಸ ಪ್ರಾರಂಭ' ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ರಾಜ್ಯಸಭೆಯಲ್ಲಿ ಘೋಷಿಸಿ, ಇದರಿಂದ ಭಾರತ ಭವಿಷ್ಯದ ಸವಾಲನ್ನು ಉತ್ತಮ ಸ್ಥಿತಿಯಿಂದ ಎದುರಿಸುವಂತಾಗಿದೆ ಎಂದರು.

ಸಂಗತ

ಹಳ್ಳಿಮಕ್ಕಳು ಮತ್ತು ಗುಣಾತ್ಮಕ ಶಿಕ್ಷಣ

ಕಲಿಕೆಯ ಪ್ರಕ್ರಿಯೆಯಲ್ಲಿ ದೊಡ್ಡ ಅಂತರ ಸೃಷ್ಟಿಯಾಗಿದೆ. ಈ ಅಂತರ ನಾಳೆಗೊಂದು ಕದಂಕವೇ ಆಗಿಬಿಡಬಹುದು

• ಸದಾಶಿವ್ ಸೊರಟೂರು

ಶಾಲೆಯ ಮಕ್ಕಳನ್ನು ಇತ್ತೀಚೆಗೆ ಜಿಲ್ಲಾ ಕೇಂದ್ರಕ್ಕೆ ಒಂದು ಸ್ಪರ್ಧೆಗೆ ಕರೆದುಕೊಂಡು ಹೋಗಿದ್ದೆ. ನಮ್ಮದು ಹಳ್ಳಿ ಶಾಲೆ. ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಹುಡುಗರು. ನಗರದ ನಡುವೆ ಮಕ್ಕಳು ಹಾದು ಹೋಗುವಾಗ ಮುದುಡಿಹೋದರು. ಸ್ಪರ್ಧೆಯ ಜಾಗದಲ್ಲಂತೂ ಹೆದರಿದ ಗುಬ್ಬಿಗಳಂತೆ ಕೂತಿದ್ದರು. ಅವರ ಮುಖದಲ್ಲಿ ದುಗುಡವಿತ್ತು. ಸ್ಪರ್ಧೆಯೇನೂ ಕಠಿಣವಿರಲಿಲ್ಲ. ನಗರದ ಮಕ್ಕಳ ಟಾಕು-ಟೀಕು ನೋಡಿ ಹೆದರಿದ್ದರು. ನಮ್ಮ ವಿದ್ಯಾರ್ಥಿಗಳ ಸಮವಸ್ತ್ರ ನೋಡಿಯೇ ನಗರದ ವಿದ್ಯಾರ್ಥಿಗಳ ಕಣ್ಣಲ್ಲಿ ಇವರು ಸರ್ಕಾರಿ ಶಾಲೆಯ ಮಕ್ಕಳು ಎಂಬ ಗೇಲಿ ಇತ್ತು. ನನ್ನ ಮಾತು ಮಕ್ಕಳ ಮುಖದಲ್ಲಿ ಸಮಾಧಾನ ತರಲಿಲ್ಲ. ನಮ್ಮ ಮಕ್ಕಳು ಸ್ಪರ್ಧೆಗೂ ಮೊದಲೇ ಸೋತಿದ್ದರು. ಮಕ್ಕಳ ಮುಖದಲ್ಲಿನ ಆ ಸಂಕಟ ನೋಡಲಾಗಲಿಲ್ಲ.

ಮಕ್ಕಳ ನಡುವಿನ ಅಸಮಾನತೆಗೆ ಇದೊಂದು ರೂಪಕವಾಗಿ ತೋರಿತು. ಕೋವಿಡ್ ಕಾಲದಲ್ಲಿ ಹಳ್ಳಿ ಮಕ್ಕಳನ್ನು ತಲುಪಲು ಅದೆಷ್ಟು ಕಷ್ಟಪಟ್ಟೆವು. ನಗರದ ಮಕ್ಕಳು ಬೆಚ್ಚಗೆ ಕೂತು ಮನೆಯಲ್ಲಿ ಆನ್‌ಲೈನ್ ಕ್ಲಾಸು ಕೇಳುತ್ತಿದ್ದಾಗ ಹಳ್ಳಿಮಕ್ಕಳು ಅಕ್ಷರ ಕಲಿಯಲು ಅದೆಷ್ಟು ಕಷ್ಟಪಟ್ಟರು. ದೊಡ್ಡ ಕಲಿಕಾ ಅಂತರವೊಂದು ಸೃಷ್ಟಿಯಾಗಿಹೋಯಿತು. ಅದನ್ನು ಸರಿದೂಗಿಸಲು ಸಾಧ್ಯವೇ? ಖಂಡಿತ ಇಲ್ಲ.

ಈ ಹಿಂದೆ, ಚಾತುರ್ವರ್ಣ ಹುಟ್ಟು ಹಾಕಿದ ಶೋಷಣೆಗಳ, ಕರಿಯರ- ಬಿಳಿಯರ ನಡುವಿನ ದಬ್ಬಾಳಿಕೆಯ ಕಥೆಗಳನ್ನು ಓದಿದ್ದೇವೆ. ಈಗ ಇಲ್ಲಿ ಸೃಷ್ಟಿಯಾಗುತ್ತಿರುವ ಹೊಸ ವರ್ಗ ಪ್ರಭೇದಗಳ ಬಗ್ಗೆ ನಾವು ಗಂಭೀರವಾಗಿ ಯೋಚಿಸಿಲ್ಲ. 'ನಗರದ ಮಕ್ಕಳು- ಹಳ್ಳಿ ಮಕ್ಕಳು, ಇಂಗ್ಲಿಷ್ ಮಾಧ್ಯಮದ ಮಕ್ಕಳು- ಕನ್ನಡ ಮಾಧ್ಯಮದ ಮಕ್ಕಳು, ಖಾಸಗಿ ಶಾಲೆ ಮಕ್ಕಳು- ಸರ್ಕಾರಿ ಶಾಲೆ ಮಕ್ಕಳು' (ಸ್ಟೇಟ್, ಸಿಬಿಎಸ್‌ಇ, ಐಸಿಎಸ್‌ಇ ಎಂಬ ವರ್ಗಗಳೂ ಇವೆ) ಎಷ್ಟೊಂದು ವರ್ಗಗಳು ಸೃಷ್ಟಿಯಾಗಿವೆ. ಎಲ್ಲಾ ಅವಕಾಶಗಳನ್ನು ಮೊದಲ ವರ್ಗವೇ ಬಾಚಿಕೊಂಡರೆ ಎರಡನೇ ವರ್ಗದ ಗತಿಯೇನು? ಇತಿಹಾಸದ ಪಾಠ ಕಣ್ಣ ಮುಂದಿರುವಾಗ ನಾಳೆಗಳ ಬಗ್ಗೆ ಯಾವ ಭರವಸೆ ಇಡಬೇಕು?

ಕೈಗೊಂದು ಕೆಲಸ, ಹೊಟ್ಟೆಗೆ ತುತ್ತು ಅನ್ನ ಬೇಕಾದರೆ ಇಂಗ್ಲಿಷ್ ಬರಬೇಕು. ಅವಕಾಶಗಳು ಹಳ್ಳಿಗಳನ್ನು ಹುಡುಕಿಕೊಂಡು ಬರುವುದಿಲ್ಲ, ನಗರದಲ್ಲಿರುವವರೇ ಅವುಗಳನ್ನು ಬಾಚಿಕೊಳ್ಳುತ್ತಾರೆ. ಸರ್ಕಾರಿ ಶಾಲೆಯು ಖಾಸಗಿ ಶಾಲೆ ಮುಂದೆ ನಿಲ್ಲಲಾರದೆ ಪತರುಗುಟ್ಟುತ್ತದೆ. ಈ ಅಂತರ ನಾಳೆಗೊಂದು ಕದಂಕವೇ ಆಗಿಬಿಡಬಹುದು.

ಶಿಕ್ಷಣ ಮೂಲಭೂತ ಹಕ್ಕಾಗಿ ಬಹಳ ದಿನಗಳೇ ಆದವು. ಆದರೂ ಗುಣಾತ್ಮಕ ಶಿಕ್ಷಣ ಪಡೆಯುವುದು ಬಹುಪಾಲು ಹಳ್ಳಿ ಮಕ್ಕಳಿಗೆ ಸಾಧ್ಯವಾಗುತ್ತಿಲ್ಲ. ವಿಪರ್ಯಾಸವೆಂದರೆ ಯಾವ ಮಗುವೂ ಅದನ್ನು ಕೇಳುತ್ತಿಲ್ಲ. ಅಸಲಿಗೆ ಆ ಮಕ್ಕಳಿಗೆ ಅದು ಗೊತ್ತೇ ಇಲ್ಲ. ಹಕ್ಕಾಗಿರುವಾಗ ಯಾಕೆ ಎಲ್ಲಾ ಮಕ್ಕಳಿಗೂ ಒಂದೇ ತೆರನಾದ ಶಿಕ್ಷಣ ಸಿಗುತ್ತಿಲ್ಲ?

'ಹಳ್ಳಿ ಮಕ್ಕಳು ಬದುಕಿಗೆ ಹತ್ತಿರ; ನಗರದ ಮಕ್ಕಳು ಅಂಕಗಳಿಗೆ ಹತ್ತಿರ' ಅಂತ ಭಾಷಣದಲ್ಲಿ ಹೇಳಿ ನಗಿಸಲು ಯತ್ನಿಸುತ್ತಾರೆ. ಹಸಿದು ಮಲಗಿದಾಗ, ಕಷ್ಟದಲ್ಲಿ ಕೈ ತೊಳೆಯುವಾಗ ಭಾಷಣ ಕೇಳಿ ನಗುವುದಾದರೂ ಹೇಗೆ? ನಮಗೂ ಅಂಕ ಬಂದು, ಕೈಗೆ ನಾಲ್ಕು ಕಾಸು ಬಂದು, ಸದಾ ಏಗಿ ಬದುಕಿದ ಈ ಕಷ್ಟದ ಜಂಜಾಟದಿಂದ ಬಿಡುಗಡೆ ಪಡೆಯೋಣ ಅಂತ ಹಂಬಲಿಸುತ್ತಾರೆ.

ಒಬ್ಬ ಹಳ್ಳಿ ಹುಡುಗ ಸಾಧನೆ ಮಾಡಿದರೆ ಅದು ಇಡೀ ಹಳ್ಳಿ ಹುಡುಗರ ಸಾಧನೆ ಎಂಬಂತೆ ಬಿಂಬಿಸಲಾಗುತ್ತದೆ. ಸರ್ಕಾರಿ ಶಾಲೆಯ ಒಬ್ಬ ವಿದ್ಯಾರ್ಥಿ ಸಾಧನೆ ಮಾಡಿದರೆ 'ನೋಡು, ಹೇಗೆ ನಮ್ಮ ಗವರ್ನಮೆಂಟ್ ಸ್ಕೂಲ್' ಅಂತಾರೆ. ಸಾವಿರ ಮಕ್ಕಳಲ್ಲಿ ಒಬ್ಬರು ಗೆಲ್ಲುವುದು ಗೆಲುವಲ್ಲ. ನಗರದ ಮಕ್ಕಳಲ್ಲಿ ಗೆಲುವಿನ ಸಾಲೇ ಇರುತ್ತದೆ. ಅದು ಸುದ್ದಿಯಾಗುವುದಿಲ್ಲ. ಯಾವತ್ತೂ ಅಷ್ಟೇ, ಅಪರೂಪದ್ದೇ ಹೆಚ್ಚು ಸುದ್ದಿಯಾಗುವುದು. ಹಳ್ಳಿ ಮಕ್ಕಳಿಗೆ ಅವರದೇ ಆದ ಸಮಸ್ಯೆಗಳಿವೆ. ಪೋಷಕರ ತಿಳಿವಳಿಕೆ, ವಾತಾವರಣ, ಸೌಕರ್ಯ, ಕಷ್ಟದ ಬದುಕು ಹೀಗೆ ನೂರೆಂಟು. ಅವುಗಳೊಂದಿಗೆ ಬಡಿದಾಡುತ್ತಾ ಮಗು ಪುಸ್ತಕ ಹಿಡಿಯಬೇಕು.



ಒಮ್ಮೆ ವೇದಿಕೆಯ ಮೇಲೆ ವಿದ್ಯಾರ್ಥಿನಿಯೊಬ್ಬಳು ಆಡಿದ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿವೆ. 'ಶಾಲೆಯಿಂದ ಮೂರು ಕಿ.ಮೀ. ನಡೆದು ಮನೆಗೆ ಹೋಗಬೇಕು. ಸುಸ್ತು, ಮನೆಗೆಲಸ, ಬಿಡುವಾದರೆ ಓದು. ಓದುವ ಆಸೆ ತುಂಬಾ ಇದೆ. ಸಂಗೀತ ನನ್ನ ಕನಸು. ಈ ಹಳ್ಳಿಯಲ್ಲಿ ಯಾವ ಸಂಗೀತ? ನಗರದ ಮಕ್ಕಳಂತೆ ಚೆಂದದ ಸಮವಸ್ತ್ರ, ಬೂಟು, ಟೈ ಹಾಕಿಕೊಂಡು ಇಂಗ್ಲಿಷ್ ಮಾತಾಡುತ್ತಾ ಶಾಲೆಗೆ ಹೋಗ್ಬೇಕು ಅನ್ಸುತ್ತೆ. ಇದು ನನ್ನಂತಹ ಎಷ್ಟೋ ಮಕ್ಕಳ ಆಸೆ ಕೂಡ. ಹಳ್ಳಿ ಮಕ್ಕಳಿಗೆ ಇದೆಲ್ಲಾ ಕನಸು. ಆ ಮಕ್ಕಳು ಹಳದಿ ಬಸ್ಸು ಹತ್ತಿ ಹೋಗುವಂತೆ ನಮ್ಮನ್ನು ಈ ಕಷ್ಟದಿಂದ ಹೊಸ ಜಗತ್ತಿಗೆ ಕರೆದೊಯ್ಯುವ ಒಂದು ಬಸ್ಸಿಗಾಗಿ ಕಾಯುತ್ತಿದ್ದೇವೆ. ನಾವು ಹಳ್ಳಿಯಲ್ಲಿ ಹುಟ್ಟಿದ್ದೇ ಶಾಪ ಅನ್ಸುತ್ತೆ. ಈ ಶಾಪದಿಂದ ತಪ್ಪಿಸಿಕೊಳ್ಳಲು ಜೀವನಪೂರ್ತಿ ಹೋರಾಡಬೇಕು. ಹೋರಾಟವೇ ಬದುಕಾಗುತ್ತೆ. ನಾವು ಶಾಪಗ್ರಸ್ತ ಮಕ್ಕಳು...' ಅಂದಳು. ಆ ಹುಡುಗಿಯ ನೋವು ಈ ವ್ಯವಸ್ಥೆಗೆ ಅರ್ಥವಾಗುವುದು ಯಾವಾಗ?

ವಾಚಕರ ವಾಣಿ

ಸಮಯೋಚಿತ, ಅರ್ಥಪೂರ್ಣ ಸಂಪಾದಕೀಯ

'ನೆಲದ ಕಾನೂನನ್ನು ಉಲ್ಲಂಘಿಸಲು ಹಾತೊರೆಯುವ ಸರ್ಕಾರ...' ಶೀರ್ಷಿಕೆಯ ಸಂಪಾದಕೀಯ (ಪ್ರ.ವಾ., ಆ. 2) ತುಂಬಾ ಸಾಮಯಿಕ, ಸ್ಪಷ್ಟ ಹಾಗೂ ಅರ್ಥಪೂರ್ಣವಾಗಿದೆ. 'ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು' ಎಂಬಂತಹ ಅಥವಾ 'ಕ್ರಿಯೆ- ಪ್ರತಿಕ್ರಿಯೆ' ಎಂಬಂತಹ ಮನೋಧರ್ಮವು ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲಿ ಯಾರಿಗೂ ಸಲ್ಲದು; ಉನ್ನತ ಅಧಿಕಾರದಲ್ಲಿರುವವರಿಗಂತೂ ಖಂಡಿತಾ ಸಲ್ಲದ ನಿಲುವು.

ಒಂದು ಕಡೆ ಜಾತಿ- ಮತ- ಭಾಷೆ- ಲಿಂಗ ಸಮಾನತೆಯ ಆದರ್ಶವನ್ನು ಲಕ್ಷ್ಯದಲ್ಲಿಟ್ಟುಕೊಂಡಿರುವ ನಮ್ಮ ಸಂವಿಧಾನ, ಅದೇ ಸಂವಿಧಾನಕ್ಕೆ ನಿಷ್ಠರಾಗಿರುತ್ತೇವೆಂದು ಪ್ರಮಾಣ ಮಾಡಿ ಆನಂತರ 'ಅವಶ್ಯಕವಾದರೆ ಎನ್‌ಕೌಂಟರ್ ಮಾಡುವುದಕ್ಕೂ ನಾವು ಸಿದ್ಧ' ಎಂದು ಸಾರ್ವಜನಿಕವಾಗಿ ಘೋಷಿಸುವ ಪ್ರಭುತ್ವ- ಇವೆರಡರ ನಡುವೆ ಇರುವ ಘೋರ ವ್ಯಂಗ್ಯವನ್ನು ಈ ಸಂಪಾದಕೀಯ ಸಮಗ್ರವಾಗಿ ಕಟ್ಟಿಕೊಡುತ್ತದೆ. ಕರ್ನಾಟಕಕ್ಕೆ 'ಬುಲ್ಡೋಜರ್' ಸಂಸ್ಕೃತಿ ಖಂಡಿತಾ ಬೇಡ. ಕರ್ನಾಟಕದ ಎಲ್ಲಾ ಪ್ರಜೆಗಳ ಕಣ್ಣು ತೆರೆಸುವಂತಿದೆ ಸಂಪಾದಕೀಯ. ಈ ಬಗೆಯ ಪ್ರಗತಿಪರ ಹಾಗೂ ಅನುಕರಣೀಯ ನಿಲುವು ಎಂದೆಂದಿಗೂ 'ಪ್ರಜಾವಾಣಿ'ಯ ನಿಲುವಾಗಿರಲಿ.

ಸಿ.ಎನ್. ರಾಮಚಂದ್ರನ್, ಬೆಂಗಳೂರು

ಮೊಟ್ಟೆ ತಿನ್ನದವರಿಗೇಕೆ ಮೊಟ್ಟೆ ಉಸಾಬರಿ?

ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮೊಟ್ಟೆ ನೀಡುವುದನ್ನು ತೇಜಸ್ವಿನಿ ಅನಂತಕುಮಾರ್ ಪ್ರಶ್ನಿಸಿರುವುದು ವರದಿಯಾಗಿದೆ. ಮೊಟ್ಟೆ ಕಡಿಮೆ ಬೆಲೆಗೆ ಸಿಗುತ್ತದೆ. ಹೆಚ್ಚಿನ ಪೌಷ್ಟಿಕಾಂಶ ಹೊಂದಿದೆ. ಬೆಳೆಯುವ ಮಕ್ಕಳಿಗೆ ಇದು ಅಗತ್ಯ. ಶಾಲೆಗಳಲ್ಲಿಯೂ ಹೆಚ್ಚಿನ ವಿದ್ಯಾರ್ಥಿಗಳು ಮೊಟ್ಟೆಯನ್ನೇ ಆಯ್ಕೆ ಮಾಡಿಕೊಂಡಿರುತ್ತಾರೆ. ಮೊದಲ ದಿನ ಮೊಟ್ಟೆಯನ್ನು ನೀಡಿದಾಗ ಶಾಲೆಗಳಲ್ಲಿ ಸಡಗರ ಎದ್ದು ಕಾಣುತ್ತಿತ್ತು.

ಸರ್ಕಾರಿ ಶಾಲೆಗಳು ಸಮವಸ್ತ್ರ, ಪಠ್ಯಪುಸ್ತಕ, ಶಿಕ್ಷಕರ ಕೊರತೆ ಹಾಗೂ ಕಟ್ಟಡ ನಿರ್ವಹಣೆ ಸೇರಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳ ಬಗ್ಗೆ ಎಂದೂ ಚಕಾರ ಎತ್ತದ, ತಮ್ಮ ಮಕ್ಕಳು ಅಥವಾ ಬಂಧು- ಮಿತ್ರರ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸದ ತೇಜಸ್ವಿನಿ ಅವರು, ಮಕ್ಕಳು ತಿನ್ನುವ ಮೊಟ್ಟೆಯ ಬಗ್ಗೆ ಪ್ರಶ್ನಿಸಿರುವುದು ವಿಷಾದನೀಯ.

ಈ. ಬಸವರಾಜು, ಬೆಂಗಳೂರು

ಬೆಲೆ ನಿಯಂತ್ರಣಕ್ಕೆ ಸರ್ಕಾರ ಮುಂದಾಗಲಿ

ಬೆಲೆ ಏರಿಕೆ ಕುರಿತು ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿರುವುದು ವರದಿಯಾಗಿದೆ. ಇದು, ದೊಡ್ಡವರ ಸಮಾಚಾರ. ಅಹವಾಲು ಬೆಲೆ ಏರಿಕೆ ಬಗ್ಗೆ. ಇನ್ನು, ಉತ್ತರಪ್ರದೇಶದ ಒಂದನೇ ತರಗತಿಯ ಪುಟ್ಟ ಬಾಲಕಿ ಕೀರ್ತಿ 'ಪೆನ್ಸಿಲ್, ರಬ್ಬರ್, ಮ್ಯಾಗಿ ಬೆಲೆ ಹೆಚ್ಚಿಸಿದ್ದೀರಿ. ಎಲ್ಲಾ ದುಬಾರಿಯಾಗಿವೆ' ಎಂದು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದು ಅಳಲು ತೋಡಿಕೊಂಡಿದ್ದಾಳೆ. ಬಾಲಕಿಗೆ ಪ್ರಧಾನಿ ಕಚೇರಿಯಿಂದ ಸಾಂತ್ವನ ಪತ್ರದ ಜೊತೆಗೆ ಒಂದಿಷ್ಟು ಪೆನ್ಸಿಲ್, ರಬ್ಬರ್, ಮ್ಯಾಗಿ ಪೊಟ್ಟಣ ಕಳುಹಿಸಬಹುದೇನೋ?! ಆದರೆ ದೊಡ್ಡವರ ಕಳವಳಕ್ಕೆ ಸರ್ಕಾರದಿಂದ ಬರೀ ಸಮರ್ಥನೆ, ಅಷ್ಟೆ! ಒಬ್ಬ ಪುಟ್ಟ ಬಾಲಕಿಯು ಸಣ್ಣ ವಿಚಾರವಾದರೂ ದೊಡ್ಡದಾಗಿ ಹೇಳಿದ್ದಾಳೆ. ಕೇಂದ್ರ ಸರ್ಕಾರ ಈಗಲಾದರೂ ಎಚ್ಚೆತ್ತು ಬೆಲೆ ನಿಯಂತ್ರಿಸಲು ಮುಂದಾಗಲಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಇದು ಸಂವಿಧಾನದ ಆಶಯವಲ್ಲ

ಪ್ರತಿದಿನ ಕೂಲಿ ಸಿಕ್ಕಿದರೆ ಸಾಕು, ಅದೇ ಆ ದಿನದ ದೇವರ ಪೂಜೆ. ಕುಡಿಯಲು ಶುದ್ಧನೀರು ಸಿಕ್ಕಿದರೆ, ಅದೇ ಆ ದಿನ ದೇವರು ಕೊಟ್ಟ ತೀರ್ಥ. ಅಂದಿನ ಶ್ರಮದ ಫಲದಿಂದ ಮಾಡುವ ಊಟವೇ ಆ ದಿನದ ದೇವರ ಪ್ರಸಾದ ಅಂದುಕೊಂಡಿರುವ ಶ್ರಮ ಸಂಸ್ಕೃತಿಯ ವರ್ಗ ಒಂದು ಕಡೆ ಇದೆ. ಅಂದಂದಿನ ದುಡಿಮೆಯಿಂದಲೇ ಬದುಕಬೇಕಾದ ಅನಿವಾರ್ಯ ಇಲ್ಲದಿರುವ ವರ್ಗ ಮತ್ತೊಂದು ಕಡೆ ಇದೆ.

ಈ ಎರಡನೆಯ ವರ್ಗದ ಜನರಿಗೆ ಗುಡಿ- ದೇವರು ಮತ್ತು ಅಲ್ಲಿನ ತೀರ್ಥ ಪ್ರಸಾದವೇ ಬಹಳ ಮುಖ್ಯ. ಬಸವಣ್ಣ ಹುಟ್ಟಿದ ಕನ್ನಡ ನಾಡಿನಲ್ಲಿ ಶ್ರಮ ಸಂಸ್ಕೃತಿಗೆ ಆದ್ಯತೆ. ಇದು ಸಂವಿಧಾನದ ಆಶಯವೂ ಹೌದು. ಬಸವತತ್ವವನ್ನು ಮರೆತ ನಾವು, ಗುಡಿ ಸಂಸ್ಕೃತಿ ಕಡೆಗೆ ವಾಲುತ್ತಿದ್ದೇವೆ. ಇದಕ್ಕೆ ಪೂರಕವಾಗಿ ಸರ್ಕಾರವು ಮಹಿಳೆಯರಿಗೆ ಅರಿಸಿನ-ಕುಂಕುಮ, ಹಸಿರು ಬಳೆ ಕೊಟ್ಟು, ಅವರನ್ನು ಒಂದು ಚೌಕಟ್ಟಿಗೆ ಸೀಮಿತಗೊಳಿಸುವ ಕೆಲಸಕ್ಕೆ ಕೈಹಾಕಿದೆ. ಇದು ಮಹಿಳೆಯರಿಗೆ ಕೊಡುವ ಗೌರವ ಅಲ್ಲ, ಸಂವಿಧಾನದ ಆಶಯವೂ ಇದಲ್ಲ. ಹೊರಗಡೆ ಪುರುಷ ಸಮಾಜದ ಜೊತೆ ಮಹಿಳೆಯರು ಧೈರ್ಯದಿಂದ ಬದುಕಲು ಸಾಧ್ಯವಾಗುವಂಥ ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೆ ತರಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಸರ್ವಾಧಿಕಾರಿ ಧೋರಣೆಯ ಸಂಕೇತ

'ರಾಜ್ಯದಲ್ಲಿ ಹಿಂದುತ್ವವನ್ನು ಆಧಾರವಾಗಿಟ್ಟುಕೊಂಡೇ ಸರ್ಕಾರ ನಡೆಸುತ್ತಿದ್ದೇವೆ...' ಎಂದು ಇಂಧನ ಸಚಿವ ವಿ. ಸುನಿಲ್‌ಕುಮಾರ್ ನೀಡಿರುವ ಹೇಳಿಕೆಯು (ಪ್ರ.ವಾ., ಆ. 2) ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು. ಹಾಗಾದರೆ, ಧರ್ಮಾಧಾರಿತವಾಗಿ ರೂಪುಗೊಂಡಿರುವ ನೆರೆಯ ಪಾಕಿಸ್ತಾನದ ದಾರಿಯನ್ನು ಅವರು ಅನುಸರಿಸುತ್ತಿದ್ದಾರೆಯೇ?

ಧರ್ಮವು ವೈಯಕ್ತಿಕವಾದುದು. ಜಾತ್ರೆ ಹಾಗೂ ವಿಶೇಷ ದಿನಗಳಲ್ಲಿ ದೇವರ ರಥೋತ್ಸವಗಳನ್ನು ಸಾಮೂಹಿಕವಾಗಿ ನಡೆಸಿದರೂ ಅದರಲ್ಲಿ ಭಾಗವಹಿಸಬೇಕೇ ಬೇಡವೇ ಎಂಬ ನಿರ್ಣಯ ಆಗುವುದು ವೈಯಕ್ತಿಕ ನೆಲೆಯಲ್ಲಿ. ಎಲ್ಲರೂ ಭಾಗವಹಿಸಲೇಬೇಕು ಎಂಬ ಒತ್ತಾಯ ಸಂವಿಧಾನಪೂರ್ವ ಭಾರತದಲ್ಲೂ ಇರಲಿಲ್ಲ. ಇಂತಹ ಸಹಜ, ಸಾಮಾನ್ಯ ತಿಳಿವಳಿಕೆ ಹಾಗೂ ಸಂವಿಧಾನದ ಆಶಯಗಳನ್ನು ಜನಪ್ರತಿನಿಧಿಗಳೇ ಪಾಲಿಸದೆ, ವೈಯಕ್ತಿಕ ಅಭಿಪ್ರಾಯದ ಮೇರೆಗೆ ಸರ್ಕಾರವನ್ನು ಮುನ್ನಡೆಸುತ್ತೇವೆ ಎನ್ನುವುದು ಸರ್ವಾಧಿಕಾರಿ ಧೋರಣೆಯ ಸಂಕೇತ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಶ್ಚಿಮಘಟ್ಟ ಉಳಿಯಲಿ ರಾಜಕೀಯ ಅಳಿಯಲಿ

ಪಶ್ಚಿಮಘಟ್ಟದ ಉಳಿವು–ಅಳಿವಿನ ವಿಷಯದಲ್ಲಿ ಪರಿಸರವಾದಿಗಳದ್ದು ಒಂದು ಅತಿಯಾದರೆ, ರಾಜಕಾರಣಿಗಳದ್ದು ಮತ್ತೊಂದು ಅತಿರೇಕ. ಇಬ್ಬರ ವಾದದ ಮಧ್ಯೆ, ಬೆಂಗಳೂರು–ದೆಹಲಿಯ ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಆದೇಶ ಹೊರಡಿಸುವ ಅಧಿಕಾರಿಗಳದ್ದು ಎಡಬಿಡಂಗಿ ಧೋರಣೆ. ಈ ಮೂರು ಗುಂಪು ತಮ್ಮ ಮೂಗಿನ ನೇರಕ್ಕೆ ದಾರಿ ತೋರುವುದರಿಂದ ಘಟ್ಟವೇ ದಿಕ್ಕೆಟ್ಟಿದೆ. ಎರಡೂ ವಾದಗಳಲ್ಲಿನ ಅತಿರೇಕದಿಂದಾಗಿ, ಕಷ್ಟಕ್ಕೆ ಸಿಲುಕಿರುವವರು ಶತಮಾನಗಳಿಂದ ಕಾಡೊಳಗೆ ತಮ್ಮದೇ ಪುಟ್ಟ ನಾಡನ್ನು ಕಟ್ಟಿಕೊಂಡಿರುವ ಮಳೆನಾಡಿಗರು

• ವೈ.ಗ.ಜಗದೀಶ್

ರಾಜಕಾರಣಿಗಳ ಅತಿಗಳು: ಚುನಾವಣೆ ಗೆಲ್ಲುವುದಷ್ಟೇ ರಾಜಕಾರಣಿಗಳ ಗುರಿ. ಹೀಗಾಗಿ, ಪಶ್ಚಿಮಘಟ್ಟ ಹಾಳಾದರೆ ತಮಗೇನು; ಕ್ಷೇತ್ರದಲ್ಲಿ ಬೆಂಬಲ ಸಿಕ್ಕಿದರೆ ಸಾಕು ಎಂಬುದು ಶಾಸಕರ ಲೆಕ್ಕಾಚಾರ. ಹೀಗಾಗಿ, ಹಸಿರಿನಿಂದ ಕಂಗೊಳಿಸುತ್ತಿದ್ದ ಪಶ್ಚಿಮಘಟ್ಟಗಳು ಕಜ್ಜಿ ಹಿಡಿದ ಗುಡ್ಡಗಳಂತಾಗಿವೆ.

ಹೀಗಾಗಿಯೇ 'ಕಾಡು ಕಡಿದು ತೋಟ ಮಾಡ್ರೋ ನಾನಿದ್ದೇನೆ' ಎಂದು ಕಾಗೋಡು ತಿಮ್ಮಪ್ಪ ಕಂದಾಯ ಸಚಿವರಾಗಿದ್ದಾಗ ಹೇಳಿದ್ದರು. 'ಅರಣ್ಯಾಧಿಕಾರಿಗಳಿಗೆ ಬೆದರಿಕೆ ಹಾಕಿ ಓಡಿಸ್ತೀವಿ' ಎಂದು ಹೇಳುವ ಶಾಸಕರೂ ನಮ್ಮ ಮಧ್ಯೆ ಇದ್ದಾರೆ. ಇವರು ಹೇಳುವುದರಲ್ಲಿ ಒಂದಿಷ್ಟು ಅಂಶ ಸರಿ ಇದೆ. ಏಕೆಂದರೆ ತಮ್ಮ ಹೊಟ್ಟೆಪಾಡಿಗಾಗಿ ಒಂದೆರಡು ಎಕರೆ ಒತ್ತುವರಿ ಮಾಡಿ ತೋಟ ಮಾಡಿದವರನ್ನು, ಹಾರೆ (ಗುದ್ದಲಿ) ಹಿಡಿದು, ತಕ್ಕ ಹಿಡಿ–ಕೊಡಲಿ ಕಾವಿಗಾಗಿ ಹೋಗುವ ರೈತರನ್ನು ಹಿಡಿದು ಕೇಸು ಹಾಕುವುದಷ್ಟೇ ಅರಣ್ಯ ಇಲಾಖೆ ಅಧಿಕಾರಿಗಳ ಕೆಲಸ. ಹತ್ತಾರು ಎಕರೆ ಅಡಿಕೆ, ಕಾಫಿ ತೋಟ ಮಾಡಿಕೊಂಡ, ಗುಡ್ಡ ಅಗೆದು ರೆಸಾರ್ಟ್ ಮಾಡಿದವರ ಗೋಜಿಗೆ ಈ ಅಧಿಕಾರಿಗಳು ಹೋಗುವುದೇ ಇಲ್ಲ. ಅವರಿಗೆ ಕಾಡುತ್ತಿ ಸಂಗ್ರಹಿಸುವ ಬದಪರಷ್ಟೇ ಗುರಿ.

ಇನ್ನು ಮಾಧವ ಗಾಡ್ಗೀಳ್, ಕಸ್ತೂರಿರಂಗನ್ ಹಾಗೂ ಈಗಿನ ಪಶ್ಚಿಮ ಘಟ್ಟ ಸೂಕ್ಷ್ಮ ವಲಯದ ವರದಿಗಳ ವಿಷಯದಲ್ಲಿ ಕೂಡ ರಾಜಕಾರಣಿಗಳದ್ದು ಹುಸಿ ಸಿಟ್ಟಿನ ವಾದ. ಈ ವರದಿಗಳಲ್ಲಿ ಏನಿದೆ? ಅದನ್ನು ಅಧ್ಯಯನ ಮಾಡುವ ವ್ಯವಧಾನವೂ ಇವರಿಗಿಲ್ಲ. ಯಾರೋ ಹೇಳಿದ ಸುಳ್ಳನ್ನು ತಮ್ಮ ವರ್ಣರಂಜಿತ ಮಾತು ಬೆರೆಸಿ ಜನರನ್ನು 'ಮಂಗ' ಮಾಡುವುದೇ ರಾಜಕಾರಣಿಗಳ ಕಾಯಕ. ಯಾರೋ ಒಬ್ಬಿಬ್ಬರು ಶಾಸಕರನ್ನು ಬಿಟ್ಟರೆ ಉಳಿದವರಿಗೆ ಈ ವರದಿಗಳ ತಿರುಳೇನು ಎನ್ನುವುದು ಗೊತ್ತಿಲ್ಲ. ಪಶ್ಚಿಮ ಘಟ್ಟವನ್ನೇ ಪ್ರತಿನಿಧಿಸುವ ಲೋಕಸಭಾ ಸದಸ್ಯರಿಗೂ ಇದರ ಬಗ್ಗೆ ಅರಿವಿಲ್ಲ. ಒಂದುವೇಳೆ ನಿವಾಸಿಗಳ ಬಗ್ಗೆ ಕಾಳಜಿ ಇದ್ದರೆ ಜನಜಾಗೃತಿ ಮೂಡಿಸಬೇಕೆಂದಿದ್ದರೆ ಈ ಕರಡು ಅಧಿಸೂಚನೆಯನ್ನು ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕನ್ನಡಕ್ಕೆ ತರ್ಜುಮೆ ಮಾಡಿ, ಜನರಿಗೆ ಹಂಚುವ ಕೆಲಸವನ್ನಾದರೂ ಮಾಡಬೇಕಾಗಿತ್ತು. ಈವರೆಗೂ ಅದನ್ನು ಮಾಡಿಯೇ ಇಲ್ಲ.

ಘಟ್ಟದ ತಪ್ಪಲಿನಿಂದ ಆಯ್ಕೆಯಾಗುವ ಶಾಸಕರ ಪೈಕಿ ಹೆಚ್ಚಿನವರು ದೊಡ್ಡ ದೊಡ್ಡ ಕಾಫಿ ತೋಟಗಳ ಒಡೆಯರು. ದಟ್ಟ ಕಾನನದ ಮಧ್ಯೆ ವೈಭವೋಪೇತ ರೆಸಾರ್ಟ್‌ಗಳ ಮಾಲೀಕರು. ಇವರ ಪೈಕಿ ಕೆಲವರು ಹೆದ್ದಾರಿಗಳು, ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಕಾಮಗಾರಿಗಳ ಗುತ್ತಿಗೆದಾರರು. ತಮ್ಮ ಗಿಂಬಳದ ವ್ಯವಹಾರವನ್ನು ಇಟ್ಟುಕೊಂಡವರು. ಭದ್ರಾವತಿಯ ಎಂಪಿಎಂ ಕಾರ್ಖಾನೆ ಮುಚ್ಚಿ ಹೋಗಿ ಹಲವು ಕಾಲವಾಗಿದೆ. ಆದರೆ, ಶಿವಮೊಗ್ಗ ಜಿಲ್ಲೆಯ ಈಗಿನ–ಹಿಂದಿನ ಜನಪ್ರತಿನಿಧಿಗಳು ಈಗಲೂ ಸಾವಿರಾರು ಎಕರೆ ಭೂಮಿಯನ್ನು ಅಕೇಶಿಯಾ ಬೆಳೆಸಲು ಎಂಪಿಎಂಗೆ ಕೊಡಿ ಎಂದು ವಕಾಲತ್ತು ಹಾಕುತ್ತಲೇ ಇದ್ದಾರೆ. ಪಶ್ಚಿಮಘಟ್ಟ ಸೂಕ್ಷ್ಮವಲಯ ಘೋಷಣೆ ವಿರೋಧಿಸಿ ಸಭೆ ನಡೆಸುವ ಶಾಸಕರಲ್ಲಿ ಒಬ್ಬರೂ ಈವರೆಗೂ ರೆಸಾರ್ಟ್, ವಸತಿ ಬಡಾವಣೆಗಳನ್ನು ವಿರೋಧಿಸಿದ ನಿದರ್ಶನವಿಲ್ಲ.



ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಎಂಬ ಬಿಳಿಯಾನೆಯೊಂದನ್ನು ಸರ್ಕಾರ ಸಾಕುತ್ತಲೇ ಇದೆ. 13 ಜಿಲ್ಲೆಗಳ 74 ತಾಲ್ಲೂಕುಗಳು ಇದರ ವ್ಯಾಪ್ತಿಯಲ್ಲಿವೆ. 12 ಸಂಸದರು, 65 ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ತಿನ 21 ಸದಸ್ಯರು ಇದರ ವ್ಯಾಪ್ತಿಯಲ್ಲಿದ್ದಾರೆ. ರಸ್ತೆ, ಸಮುದಾಯ ಭವನ, ಸೇತುವೆ ಹೀಗೆ ನೀಡುವ ಅನುದಾನದ ಮೇಲಷ್ಟೇ ಅಭಿವೃದ್ಧಿ ಮಂಡಳಿಗೆ ಕಣ್ಣು. 86 ಶಾಸಕರಿದ್ದರೂ ಪಶ್ಚಿಮಘಟ್ಟವನ್ನು ಉಳಿಸುವ ಬಗ್ಗೆ ವಿಧಾನಮಂಡಲದ ಅಧಿವೇಶನದಲ್ಲಿ ಒಂದು ದಿನವೂ ಚರ್ಚೆ ನಡೆಸಿದ ನಿದರ್ಶನ ಇಲ್ಲ. ಚರ್ಚೆ ಏನಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳ ಕಿರುಕುಳ, ಮಾನವ–ಪ್ರಾಣಿ ಸಂಘರ್ಷ, ಡೀಮ್ಡ್ ಅರಣ್ಯದಿಂದಾಗುವ ತೊಂದರೆ, ಭೂ ಕುಸಿತದಿಂದಾಗಿರುವ ಹಾನಿ ಬಗ್ಗೆ ಮಾತ್ರ.

ಪರಿಸರವಾದಿಗಳ ಮಿತಿಗಳು: ಪರಿಸರವಾದಿಗಳಲ್ಲಿ ಹಲವು ವಿಧದವರಿದ್ದಾರೆ. ಗಾಡ್ಗೀಳ್, ಕಸ್ತೂರಿರಂಗನ್ ವರದಿ ಜಾರಿಯಾಗಲೇಬೇಕು; ಹುಲಿ ಸಂರಕ್ಷಿತ ಅರಣ್ಯ, ಅಭಯಾರಣ್ಯ, ವನ್ಯಜೀವಿಧಾಮಗಳು ಇನ್ನೂ ಹೆಚ್ಚಬೇಕು; ಕಾಡಿನೊಳಗೆ ಇರುವವರನ್ನು ಒಕ್ಕಲೆಬ್ಬಿಸಲೇಕು ಎಂದು ವಾದ ಮಾಡುವವರದ್ದೇ ಹೆಚ್ಚು ಸದ್ದು. ಹವಾನಿಯಂತ್ರಿತ ವ್ಯವಸ್ಥೆಯೊಳಗೆ ಕುಳಿತ ಮಂದಿ ನೀಡುವ ವರದಿಗಳೇ ಸಂಶೋಧನಾ ವರದಿಗಳಾಗುತ್ತವೆ. ಅವನ್ನೇ ಜಾರಿ ಮಾಡಬೇಕು ಎಂಬ ವಾದವೇ ಬಲವಾಗುತ್ತಾ ಹೋಗುತ್ತಿದೆ.

ಅಮೆರಿಕದಲ್ಲಿ ಓದಿಕೊಂಡು ಬಂದ ಮಾಧವ ಗಾಡ್ಗೀಳ್ ಅವರು 90ರ ದಶಕದಲ್ಲೇ ಕರ್ನಾಟಕದ ಮಲೆನಾಡಿನಲ್ಲಿ ಓಡಾಡಿ ಮಾಹಿತಿ ಸಂಗ್ರಹಿಸಿದ್ದರು. 2010–11ರಲ್ಲಿ ಕೇಂದ್ರ ನೇಮಿಸಿದ ಸಮಿತಿಯ ಮುಖ್ಯಸ್ಥರಾಗಿ 18 ತಿಂಗಳಲ್ಲಿ ಸಂಶೋಧನೆ ಮಾಡಿ ವರದಿಯನ್ನು ಕೊಟ್ಟರು. ಬಳಿಕ ಕಸ್ತೂರಿರಂಗನ್ ಸಮಿತಿಯನ್ನು ಸರ್ಕಾರ ನೇಮಿಸಿತು. ಬಾಹ್ಯಾಕಾಶ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡಿದ ಕಸ್ತೂರಿರಂಗನ್, ಪಶ್ಚಿಮಘಟ್ಟದ ಬಗ್ಗೆ ಆಳವಾದ ತಿಳಿವಳಿಕೆ ಇದ್ದವರಲ್ಲ. ತಮ್ಮ ವಿವೇಚನಾ ಜ್ಞಾನ–ಗೂಗಲ್ ಕೊಟ್ಟ ಮಾಹಿತಿ ಆಧರಿಸಿ ಅವರು ವರದಿಯನ್ನು ಕೊಟ್ಟರು. ಪಶ್ಚಿಮಘಟ್ಟದ ತಪ್ಪಲಿನಲ್ಲಿ ಬದುಕುತ್ತಿರುವವರು ಉಳಿಸಿರುವ ಕಾಡುಗಳೆಷ್ಟು? ನಾಗಬನ–ಚೌಡಿಗಳಂತಹ ದೇವಬನಗಳ ಕೊಡುಗೆಯೇನು? ತೋಟ ಮಾಡುವವರಿಗೆ ಕಾಡಿನ ಅನಿವಾರ್ಯ ಎಷ್ಟೆಂಬ ಮಾಹಿತಿ ಪಡೆಯುವ ಔದಾರ್ಯವನ್ನೂ ತೋರಲಿಲ್ಲ; ರಸ್ತೆ–ಪ್ರವಾಸೋದ್ಯಮಗಳಿಂದಾಗುವ ಹಾನಿಯನ್ನೂ ಪರೀಕ್ಷೆಗೆ ಗುರಿಪಡಿಸಲಿಲ್ಲ. ಹೀಗಿರುವಾಗಿ, ಕಸ್ತೂರಿರಂಗನ್ ವರದಿಯಿಂದ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಉಳಿಸಬಹುದು ಎಂದು ಪ್ರತಿಪಾದಿಸುತ್ತಿದ್ದಾರೆ. ವಿದೇಶದ ಅನುದಾನದತ್ತ ಕಣ್ಣು ನೆಟ್ಟಿರುವ ಕೆಲವು ಪರಿಸರವಾದಿಗಳು ಪಶ್ಚಿಮಘಟ್ಟದ ಮೇಲೆ ತಮ್ಮದೇ ಹುಯಿಲೆಬ್ಬಿಸುವುದು ನಿಲ್ಲಿಸಿದರೆ ಪರಿಸರ ಉಳಿದೀತು.

ಆಗಬೇಕಾದುದೇನು?: ಕಾಡಿನ ಮಧ್ಯೆಯೇ ಬದುಕಿ, ಅಲ್ಲಿನ ಸೌಂದರ್ಯ–ಕ್ರೌರ್ಯವನ್ನೂ ಕಂಡ ಪೂರ್ಣಚಂದ್ರ ತೇಜಸ್ವಿಯವರು ಒಮ್ಮೆ ಹೇಳಿದ್ದರು. 'ಎಲ್ಲ ನಾಶವಾಗಿ ಹೋದರೂ ಕೆಲವು ವರ್ಷಗಳಾದ ಮೇಲೆ ಆ ಬೂದಿಯಿಂದಲೇ ಒಂದು ಬೀಜ ಚಿಗುರೊಡೆದು ಗಿಡವಾಗಿ, ಮರವಾಗಿ ಅದು ದೊಡ್ಡ ಕಾಡಾಗಿ ಒಂದಲ್ಲ ಒಂದು ದಿನ ಬೆಳೆಯುತ್ತೆ ಕಣಯ್ಯಾ! ಅದು ನಿಸರ್ಗದ ನಿಯಮ; ಉಳಿದೆಲ್ಲ ಕತೆ ಬಿಡ್ರಯ್ಯಾ' ಎಂದು. ಹಾಗಂತ, ನಾಶವಾದ ಮೇಲೆ ಬೆಳೆಯುತ್ತದೆ ಎಂದು ಕಾಯಲು ನಮಗೆಲ್ಲ ಇರುವುದು ಒಂದೇ ಭೂಮಿ. ಕಾಡನ್ನು ಕಾಡಿನ ಪಾಡಿಗೆ, ಅಲ್ಲಿ ಕಾಡು ಸಲಹುತ್ತಲೇ ತಾವು ಬದುಕುವ ಕಾಡುವಾಸಿಗಳನ್ನು ಹಾಗೆಯೇ ಬಿಟ್ಟರೆ ಪಶ್ಚಿಮಘಟ್ಟ ಉಳಿಯುತ್ತದೆ. ರಾಜಕಾರಣಿಗಳು–ತಥಾಕಥಿತ ಪರಿಸರವಾದಿಗಳ ಮತ ಕುಯಿಲು–ಹುಸಿ ಹುಯಿಲು ನಿಲ್ಲಬೇಕಿದೆ.

'ಮೊಸರಲ್ಲಿ ಕಲ್ಲು ಹುಡುಕುವುದು ಬೇಡ'

ಪಶ್ಚಿಮಘಟ್ಟ ಪ್ರದೇಶವನ್ನು ಜಾಗತಿಕ ಸೂಕ್ಷ್ಮವಲಯ ಎಂದು ಘೋಷಿಸಿದ್ದನ್ನು ನಮ್ಮ ದೇಶ, ರಾಜ್ಯ ಒಪ್ಪಿಕೊಂಡಿದೆ. ಅಂಥ ಪ್ರದೇಶದಲ್ಲಿ ಅರಣ್ಯ ಕಟಾವು ಮಾಡಿ ಅಲ್ಲಿ ಬಹುಮಹಡಿ ಕಟ್ಟಡ, ರಸ್ತೆ ನಿರ್ಮಿಸುವುದು ಅಭಿವೃದ್ಧಿ ಕಾರ್ಯವಾಗದು. ಪಶ್ಚಿಮ ಘಟ್ಟವನ್ನು ಇರುವ ಸ್ವರೂಪದಲ್ಲೇ ಮುಂದುವರಿಸಿಕೊಂಡು ಹೋಗುವುದೇ ದೊಡ್ಡ ಅಭಿವೃದ್ಧಿಯಾಗಿದೆ.

ಅದನ್ನು ಮತ್ತಷ್ಟು ಬೆಳೆಸಬೇಕು. ಎಲ್ಲೆಲ್ಲಿ ಮರಗಳನ್ನು ಕಡಿದು ನಾಶ ಮಾಡಲಾಗಿದೆಯೋ ಅಲ್ಲೆಲ್ಲ ಮರಗಳನ್ನು ಬೆಳೆಸಬೇಕು. ಆ ಪ್ರದೇಶಗಳಲ್ಲಿ ತಲೆ ತಲಾಂತರಗಳಿಂದ ಬದುಕಿ ಬಂದಿರುವ ಬುಡಕಟ್ಟು ಜನರು, ಮೂಲ ನಿವಾಸಿಗಳಿಗೆ ಮಾತ್ರ ಹೋಗಲು ಅವಕಾಶ ಇರಬೇಕು. ಕಟ್ಟುನಿಟ್ಟಿನ ಅರಣ್ಯ ಕಾಯ್ದೆ ಇದ್ದರೂ ಇತರರು ಅಲ್ಲಿಗೆ ಹೋಗುತ್ತಾರೆ ಎಂಬುದೇ ಸೋಜಿಗ. ಕಾಡಿನ ನಡುವೆ ಎಕರೆಗಟ್ಟಲೆ ವಿಸ್ತೀರ್ಣದಲ್ಲಿ ನಿರ್ಮಾಣವಾಗುವ ರೆಸಾರ್ಟ್‌ಗಳೇ ಇದಕ್ಕೆ ಉದಾಹರಣೆಗಳಾಗಿವೆ. ಕಸ್ತೂರಿರಂಗನ್ ವರದಿಯಲ್ಲ, ಗಾಡ್ಗೀಳ್ ಸಮಿತಿಯ ಶಿಫಾರಸುಗಳನ್ನೇ ಜಾರಿ ಮಾಡಬೇಕು.

ಪಶ್ಚಿಮ ಘಟ್ಟದಂಥ ಕಾಡನ್ನು ಮತ್ತೊಮ್ಮೆ ಸೃಷ್ಟಿಸಲು ಸಾಧ್ಯವೇ ಇಲ್ಲ. ಮನುಷ್ಯರ ರೀತಿಯಲ್ಲೇ ಪ್ರಾಣಿ ಪಕ್ಷಿಗಳಿಗೂ ಬದುಕುವ ಹಕ್ಕಿಲ್ಲವೇ?

ಕಸ್ತೂರಿರಂಗನ್ ವರದಿಯಲ್ಲಿ ಪಶ್ಚಿಮಘಟ್ಟದ ಮೂಲ ನಿವಾಸಿಗಳನ್ನು ತೆರವು ಮಾಡಲು ಹೇಳಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಹೊಸದಾಗಿ ಬಹುಮಹಡಿ ಕಟ್ಟಡಗಳ ನಿರ್ಮಾಣ, ಗಣಿಗಾರಿಕೆ, ಕಾಡು ಕಡಿದು ರಸ್ತೆ ನಿರ್ಮಾಣದಂಥ ಕಾರ್ಯಗಳಿಗೆ ಕಡಿವಾಣ ಹಾಕಲು ಶಿಫಾರಸುಗಳಿವೆ. ವಿರೋಧಿಸುವ ಹಲವರಿಗೆ ವರದಿಯಲ್ಲಿರುವ ಅಂಶಗಳ ಮಾಹಿತಿಯೇ ಇಲ್ಲ.

ಕಸ್ತೂರಿರಂಗನ್ ವರದಿಯನ್ನು ವಿರೋಧಿಸುವವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿರುವುದು ಸರಿಯಲ್ಲ. ಮುಂದಿನ ಪೀಳಿಗೆಗೆ, ಜೀವವೈವಿಧ್ಯ ಮತ್ತು ಅರಣ್ಯದ ಉಳಿವಿಗಾಗಿ ಕಸ್ತೂರಿರಂಗನ್ ವರದಿಯನ್ನು ಪರಿಣಾಮಕಾರಿಯಾಗಿ ಹೇಗೆ ಜಾರಿ ಮಾಡಲು ಸಾಧ್ಯ ಎಂದು ಯೋಚಿಸುವುದು ಸೂಕ್ತ.



ಡಾ.ಜಿ.ವಿ.ಹೆಗಡೆ, ಹಿರಿಯ ಭೂ ವಿಜ್ಞಾನಿ

'ಬೀಜ ಎಸೆದು, ಮಾವಿನಹಣ್ಣು ತಿನ್ನಿ'

ಪಶ್ಚಿಮ ಘಟ್ಟಗಳನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವ ಕರಡು ಅಧಿಸೂಚನೆಯನ್ನು ಏಕೆ ವಿರೋಧ ಮಾಡಲಾಗುತ್ತಿದೆ ಎಂಬುದೇ ಗೊತ್ತಾಗುತ್ತಿಲ್ಲ. ಕನಿಷ್ಠ ಆ ಅಧಿಸೂಚನೆಯಲ್ಲಿರುವ ಯಾವ ಅಂಶಗಳಿಂದ ತೊಂದರೆ ಆಗುತ್ತದೆ ಎನ್ನುವುದನ್ನಾದರೂ ಹೇಳಬೇಕು. ಏನೂ ಹೇಳದೇ, ಅಧಿಸೂಚನೆಯನ್ನು ಸಾರಾಸಗಟಾಗಿ ವಿರೋಧಿಸುವುದು ಸರಿಯಲ್ಲ.

ಮಾವಿನ ಹಣ್ಣಿನ ಒಳಗೆ ಇರುವ ಬೀಜವನ್ನು ಎಸೆದು ಹಣ್ಣನ್ನು ತಿನ್ನಬೇಕು. ಹಾಗೆಯೇ, ಈ ಅಧಿಸೂಚನೆಯಲ್ಲಿರುವ ನಕಾರಾತ್ಮಕ ಅಂಶ ಕೈಬಿಟ್ಟು ಸಕಾರಾತ್ಮಕ ಅಂಶಗಳನ್ನು ಜಾರಿಗೆ ತರಬಹುದು ಎನ್ನುವ ದಿಸೆಯಲ್ಲಿ ಯಾರೊಬ್ಬರ ಯೋಚನೆಯೂ ಇಲ್ಲ.

ಪಶ್ಚಿಮ ಘಟ್ಟಗಳಲ್ಲಿ ವಾಸ ಮಾಡುವವರಿಗೆ ಆರ್ಥಿಕ ಸಹಾಯನಿಧಿ ನೀಡುವಂತೆ ಕಸ್ತೂರಿರಂಗನ್ ವರದಿ ಹೇಳಿದೆ. ಈ ಅಂಶವನ್ನು ಅಧಿಸೂಚನೆಯಲ್ಲಿ ಸೇರಿಸಿಲ್ಲ.

ಗಣಿಗಾರಿಕೆಯಂತಹ ಚಟುವಟಿಕೆಗಳನ್ನು ಪಶ್ಚಿಮ ಘಟ್ಟಗಳಲ್ಲಿ ನಿಷೇಧಿಸಬೇಕು ಎಂಬ ಅಂಶ ಅಧಿಸೂಚನೆಯಲ್ಲಿ ಇದೆ. ಇದು ಸ್ವಾಗತಾರ್ಹ ಅಲ್ಲವೇ?



ಕರ್ನಲ್ ಸಿ.ಪಿ.ಮುತ್ತಣ್ಣ, ಕಾರ್ಯದರ್ಶಿ, ಪರಿಸರ ಮತ್ತು ಆರೋಗ್ಯ ಪ್ರತಿಷ್ಠಾನ, ಮಡಿಕೇರಿ

'ಭೌತಿಕ ಸಮೀಕ್ಷೆ ನಡೆಸಿ'

ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ಕರಡು ಅಧಿಸೂಚನೆ ಪಟ್ಟಿಯಲ್ಲಿರುವ ಕರ್ನಾಟಕದ ಜಿಲ್ಲೆಗಳ ಪ್ರದೇಶಗಳ ಭೌತಿಕ ಸಮೀಕ್ಷೆ ನಡೆಸಬೇಕು. ಈ ಭಾಗಗಳ ಜನರಿಗೆ ಅಧಿಸೂಚನೆ ಕುರಿತು ಸಮಗ್ರ ಮಾಹಿತಿ ನೀಡಬೇಕು. ಸಮಸ್ಯೆಗಳು, ಆಕ್ಷೇಪಣೆಗಳನ್ನು ಪರಿಶೀಲಿಸಿ, ಪರಿಹರಿಸಬೇಕು. ಈ ದಿಸೆಯಲ್ಲಿ ರಚಿಸಿರುವ ಸಮಿತಿ ತಕ್ಷಣ ಕಾರ್ಯ ಶುರು ಮಾಡಬೇಕು.

ಪಶ್ಚಿಮ ಘಟ್ಟಗಳಿಗಾಗಿ ನಿರ್ಧಾರ, ಬೆಂಬಲ ಮತ್ತು ನಿಗಾ ಕೇಂದ್ರ ಸ್ಥಾಪನೆಯ ಅಂಶ ಮಾತ್ರ ಕರಡುವಿನಲ್ಲಿ ಉಲ್ಲೇಖವಾಗಿದೆ. ಕೇಂದ್ರದಲ್ಲಿ ಯಾರು ಇರುತ್ತಾರೆ, ನಿರ್ವಹಣೆ, ಅದರ ಪಾತ್ರ ಏನು ಎಂಬುದನ್ನು ವಿವರಿಸುವುದು ಒಳಿತು. ಬೆಳೆಗಾರರನ್ನೂ ಸದಸ್ಯರಾಗಿಸಬೇಕು. ಇದೆಲ್ಲವನ್ನು ವ್ಯವಸ್ಥಿತವಾಗಿ ಮಾಡಿ ಅಧಿಸೂಚನೆ ಅನುಷ್ಠಾನಗೊಳಿಸಿದರೆ ಅಭ್ಯಂತರ ಇಲ್ಲ.



ಡಾ.ಎಚ್.ಟಿ. ಮೋಹನಕುಮಾರ್, ಅಧ್ಯಕ್ಷ, ಕರ್ನಾಟಕ ಬೆಳೆಗಾರರ ಒಕ್ಕೂಟ (ಕೆಜಿಎಫ್)

'ಘೋಷಣೆ ಮಾಡಲೇಬೇಕು'

ಪಶ್ಚಿಮಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಣೆ ಮಾಡಲೇಬೇಕು. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಕಸ್ತೂರಿರಂಗನ್ ವರದಿಗಿಂತಲೂ ಗಾಡ್ಗೀಳ್ ವರದಿ ಜಾರಿಗೆ ನನ್ನ ಬೆಂಬಲ. ಕಸ್ತೂರಿರಂಗನ್ ವರದಿ ಉಪಗ್ರಹ ಸಮೀಕ್ಷೆಯ ಮೂಲಕ ಮಾಡಿದ ಅವೈಜ್ಞಾನಿಕ ವರದಿ. ಆದರೆ ಗಾಡ್ಗೀಳ್ ವರದಿ ತಯಾರು ಮಾಡುವುದಕ್ಕೂ ಮೊದಲು, ಪಶ್ಚಿಮಘಟ್ಟ ವ್ಯಾಪ್ತಿಯ ಪ್ರತಿ ಕಾಡು, ಬೆಟ್ಟ, ಗ್ರಾಮಗಳಿಗೆ ಭೇಟಿ ನೀಡಲಾಗಿತ್ತು. ಆ ವರದಿಯಲ್ಲಿ ಪರಿಸರ ಸಂರಕ್ಷಣೆಯ ಎಲ್ಲ ಅಂಶಗಳೂ ಇವೆ. ಆದರೆ ಕಸ್ತೂರಿರಂಗನ್ ವರದಿಯಲ್ಲಿ ಬಯಲು ಸೀಮೆಯ ಆಲೂರು ತಾಲ್ಲೂಕಿನ ಯಾವುದೋ ಒಂದು ಗ್ರಾಮವನ್ನು ಸೇರ್ಪಡೆ ಮಾಡಲಾಗಿದೆ. ಅದನ್ನು ಸಾರಾಸಗಟಾಗಿ ತಿರಸ್ಕರಿಸುವ ಮನಸ್ಥಿತಿ ಬದಲಾಗದಿದ್ದರೆ, ಯಾರಿಗೂ ಉಳಿಗಾಲವಿಲ್ಲ. ಪರಿಸರ ಸೂಕ್ಷ್ಮ ವಲಯ ಎಂದು ಘೋಷಣೆ ಆಗದೆ ಹೋದರೆ ಮುಂದಿನ ಪೀಳಿಗೆಗೆ ಉಸಿರಾಟಕ್ಕೂ ಆಮ್ಲಜನಕ ದೊರೆಯದು. ಅವರು ನಮ್ಮನ್ನು ಕ್ಷಮಿಸಲಾರರು.



ಪ್ರಸಾದ್ ರಕ್ಷಿದಿ, ರಂಗಕರ್ಮಿ

'ಗ್ರಾಮಸ್ಥರನ್ನು ಒಕ್ಕಲೆಬ್ಬಿಸಬೇಡಿ'

ಪಶ್ಚಿಮಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಪಶ್ಚಿಮ ಘಟ್ಟದ ಅಂಚಿನಲ್ಲಿ ಹಲವು ದಶಕಗಳಿಂದ ಕಂದಾಯ ದಾಖಲೆ ಹೊಂದಿ, ಮನೆ ಕಟ್ಟಿಕೊಂಡು, ಕೃಷಿ ಮಾಡುತ್ತಿರುವ ಗ್ರಾಮಸ್ಥರನ್ನು ಒಕ್ಕಲೆಬ್ಬಿಸುವುದನ್ನು ತೀವ್ರವಾಗಿ ವಿರೋಧಿಸುತ್ತೇವೆ. ಕಂದಾಯ, ಅರಣ್ಯ ಭೂಮಿಯಲ್ಲಿ ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಿ, ಅರಣ್ಯ ವಿಸ್ತರಣೆ ಮಾಡುವುದಕ್ಕೆ ಬೆಂಬಲವಿದೆ. ನಮ್ಮ ಪೂರ್ವಿಕರು ಕಾಡನ್ನೆಲ್ಲಾ ನಾಶ ಮಾಡಿದ್ದರೆ, ನಮಗೆ ಮಲೆನಾಡಿನಲ್ಲಿ ಹಸಿರು, ವನ್ಯಜೀವಿ, ಜಲಪಾತಗಳನ್ನು ಕಾಣುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.



ಲೋಕೇಶ್ ಮಸ್ತಾರೆ, ಕಾಫಿ ಬೆಳೆಗಾರ, ಸಕಲೇಶಪುರ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 189

ಕೈಲಾಸಕ್ಕೆ ಬಂದ ವಿಷ್ಣು

ನಾರದಮುನಿಯು 'ಓ ವಿಧಿ, ದಕ್ಷಯಜ್ಞವನ್ನು ಧ್ವಂಸಮಾಡಿದ ವೀರಭದ್ರನು ಕೈಲಾಸಕ್ಕೆ ತೆರಳಿದ ಮೇಲೆ ಮುಂದೇನಾಯಿತು ಎಂಬುದನ್ನು ಹೇಳು' ಎಂದು ಬ್ರಹ್ಮನನ್ನು ಕೋರುತ್ತಾನೆ. ಬ್ರಹ್ಮ ಯಜ್ಞನಾಶದ ನಂತರದ ವೃತ್ತಾಂತವನ್ನು ಹೇಳುತ್ತಾನೆ.


'ರುದ್ರಗಣಗಳಿಂದ ಪರಾಜಿತರಾದ ದೇವತೆಗಳು, ಮುನಿಗಳು ಎಲ್ಲರೂ ನನ್ನ ಲೋಕಕ್ಕೆ ಬಂದು, ರುದ್ರಗಣಗಳಿಂದ ತಮಗಾದ ಕ್ಲೇಶವನ್ನು ನಿವೇದಿಸಿಕೊಂಡರು. ದೇವತೆಗಳ ಮಾತುಗಳನ್ನು ಕೇಳಿ ನನಗೆ ದುಃಖವಾಯಿತು. ಪುತ್ರನಾದ ದಕ್ಷ ಹತನಾದ ಶೋಕದಿಂದ ಪರಿತಪಿಸಿದೆ. ದೇವತೆಗಳಿಗೆ ಅನುಕೂಲವಾಗುವಂತೆ ಯಾವ ಕಾರ್ಯ ಮಾಡಿದರೆ, ನನ್ನ ಪುತ್ರನಾದ ದಕ್ಷ ಬದುಕಬಹುದು? ಅವನ ಯಜ್ಞವು ಪೂರ್ತಿಯಾದೀತು? ಎಂದು ಬಹಳ ಚಿಂತಿಸಿದೆ. ಕೊನೆಗೆ ಹರಿಯೇ ಯಜ್ಞದ ರಕ್ಷಕನಾಗಿರುವುದರಿಂದ ಅವನ ಮೊರೆ ಹೋಗಲು ನಿರ್ಧರಿಸಿದೆ.

ಇದಕ್ಕಾಗಿ ನಾನು ದೇವತೆಗಳು ಮತ್ತು ಮುನಿಗಳೊಡನೆ ವಿಷ್ಣುಲೋಕಕ್ಕೆ ಹೋಗಿ, ಹರಿಗೆ ದೇವತೆಗಳಿಗೆ ಬಂದಿರುವ ಕಷ್ಟವನ್ನು ತಿಳಿಸಿದೆ. ದಕ್ಷಯಜ್ಞವು ಪೂರ್ತಿಯಾಗಿ, ದಕ್ಷ ಬದುಕಿ ಬರಬೇಕು. ಯಜ್ಞದಿಂದ ದೇವತೆಗಳಿಗೂ ಒಳಿತಾಗಬೇಕೆಂದು ಕೋರಿದೆ. ನನ್ನ ಮಾತುಗಳನ್ನು ಕೇಳಿ ಶಿವಭಕ್ತನಾದ ವಿಷ್ಣು, 'ಎಲೈ ಬ್ರಹ್ಮನೆ, ತೇಜಸ್ವಿಗಳಾದ ಮಹಾತ್ಮರಿಗೆ ದ್ರೋಹ ಮಾಡಬಾರದು. ದ್ರೋಹ ಮಾಡಿದವರಿಗೆ ಕ್ಷೇಮವಾಗಲಾರದು. ಅವರು ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಅನುಭವಿಸಲೇಬೇಕು. ನಾನಾಗಲೀ ನೀನಾಗಲೀ ದೇವತೆಗಳಾಗಲೀ ಪರಮೇಶ್ವರನ ಬಲವೀರ್ಯಗಳ ತತ್ವವನ್ನು, ಅವುಗಳ ಪ್ರಮಾಣವನ್ನು ತಿಳಿಯಲಾರೆವು. ಹೀಗಿರುವಾಗ ನಿಮ್ಮನ್ನು ಹೇಗೆ ರಕ್ಷಿಸಲಿ? ನೀವೆಲ್ಲರೂ ಮಹಾತ್ಮನಾದ ಪರಮೇಶ್ವರನಿಗೆ ಯಜ್ಞಭಾಗವನ್ನು ಕೊಡದೆ ಅಪಮಾನಿಸಿ ಅಪರಾಧವನ್ನೆಸಗಿದ್ದೀರಿ. ಶಿವನಿಗೆ ಕೋಪಬರುವಂತೆ ವರ್ತಿಸಿದ್ದೀರ. ಶಿವ ಎಷ್ಟು ಕೋಪಿಷ್ಟನೋ, ಅಷ್ಟೇ ಕರುಣಾಮಯಿ. ದಯಾಮಯನಾದ ಶಿವನಿಗೆ ಬೇಡಿಬಂದವರ ಕ್ಷಮಿಸುವ ಒಳ್ಳೆಯ ಗುಣವಿದೆ. ಪ್ರಿಯಪತ್ನಿಯ ಅಗಲಿಕೆಯಿಂದ ದುಃಖಿತನಾಗಿರುವ ಪರಮೇಶ್ವರನನ್ನು ನೀವೆಲ್ಲಾ ಪ್ರಿಯವಾಕ್ಯಗಳಿಂದ ಸ್ತುತಿಸಿ ಕ್ಷಮೆಯನ್ನು ಬೇಡಿರಿ; ಕ್ಷಮಿಸಿ, ಹರಸುತ್ತಾನೆ. ಶಂಭುವನ್ನು ಸಂತೋಷಗೊಳಿಸಲು ಇದೇ ಸರಿಯಾದ ಉಪಾಯ. ನಡೆಯಿರಿ, ನಾನೂ ನಿಮ್ಮೊಡನೆ ಬರುವೆ. ನಾನು ಸಹ ಅವನ ಕ್ಷಮೆಯನ್ನು ಬೇಡುವೆ' ಎಂದನು.

ಹೀಗೆ ವಿಷ್ಣು ಹೇಳಿ, ಬ್ರಹ್ಮ-ಇಂದ್ರಾದಿ ದೇವತೆಗಳೊಡನೆ ಕೈಲಾಸಕ್ಕೆ ಬಂದ. ಕೈಲಾಸಗಿರಿಯು ಬೆಳ್ಳಿಯಂತೆ ಬಿಳಿಯವರ್ಣದಲ್ಲಿ ಹೊಳೆಯುತ್ತಿತ್ತು. ಅಲ್ಲಿ ಕಿನ್ನರರು, ಅಪ್ಸರೆಯರು, ಯೋಗಿಗಳು, ಸಿದ್ಧರು ಶಿವನನ್ನು ಆರಾಧಿಸುತ್ತಿದ್ದರು. ವಿವಿಧ ಫಲಪುಷ್ಪಗಳಿಂದ ಶೋಭಿಸುತ್ತಿದ್ದ ಗಿರಿಯ ಏಕಾಂತವಾದ ಗುಹೆಗಳಲ್ಲಿ ಸಿದ್ಧಸ್ತ್ರೀ-ಪುರುಷರು ವಿಹರಿಸುತ್ತಲಿದ್ದರು. ಪವಿತ್ರವಾದ ಗಂಗಾನದಿ ಸೇರಿದಂತೆ ಅನೇಕ ನದಿಗಳು ಮಂಜುಳ ನಿನಾದದೊಡನೆ ಹರಿಯುತ್ತಲಿದ್ದುವು.

ಕೈಲಾಸಗಿರಿಯ ಸಮೀಪದಲ್ಲಿಯೇ ಶಂಕರನ ಮಿತ್ರನಾದ ಕುಬೇರನ ರಾಜಧಾನಿ ಅಲಕಾಪುರಿ ಇತ್ತು. ಅಲಕಾಪುರಿ ಸಮೀಪದಲ್ಲೆ ಸೌಗಂಧಿಕವೆಂಬ ಸುಂದರವಾದ ಕ್ರೀಡಾವನವಿತ್ತು. ಅಲ್ಲೇ ನಂದಾ ಮತ್ತು ಅಲಕನಂದಾ ಪವಿತ್ರನದಿಗಳು ಹರಿಯುತ್ತಲಿದ್ದುವು. ಸ್ವಲ್ಪ ದೂರದಲ್ಲಿ ಶಂಕರನ ವಿಶ್ರಾಂತಿಸ್ಥಾನವಾದ ವಟವೃಕ್ಷವಿತ್ತು. ಯೋಗಸಮಾಧಿಗೆ ಯೋಗ್ಯವಾದ ವಟವೃಕ್ಷದ ನೆರಳಿನಲ್ಲಿ ಶಿವ ಕುಳಿತಿದ್ದ. ಮಹಾಸಿದ್ಧರಾದ ಸನಕಾದಿಮುನಿಗಳು, ಕುಬೇರ ಮತ್ತವನ ಗಣಗಳು ಹಾಗೂ ಬಂಧುಗಳು ಭಕ್ತಿಯಿಂದ ಶಿವನನ್ನು ಸೇವಿಸುತ್ತಲಿದ್ದರು. ಶಿವನಿಗೆ ಹರಿ, ಬ್ರಹ್ಮ ಮೊದಲಾದ ದೇವತೆಗಳು ನಮಸ್ಕರಿಸಿದರು. ರುದ್ರ ಪ್ರತ್ಯಭಿವಾದನವನ್ನು ಮಾಡಿದ. ದೇಪರಮೇಶ್ವರನಿಗೆ ವಿಷ್ಣುವು ಭಕ್ತಿ-ವಿನಯದಿಂದ ಬಿನ್ನವಿಸಿಕೊಳ್ಳಲು ಉದ್ಯುಕ್ತನಾದ ಎಂಬಲ್ಲಿಗೆ ಸತೀಖಂಡದ ನಲವತ್ತನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಶಾಶ್ವತ ಮರೆವಿನ ಮುಸುಕು

ಅಂತೊ ಇಂತೋ ಎಂತೊ ಜೀವಕಥೆ
ಮುಗಿಯುವುದು |
ಅಂದೊ ಇಂದೋ ಎಂದೊ ಜನುಮ
ಕಳೆಯುವುದು||
ಒಂದೆ ಮರೆವಿನ ಮುಸುಕು ಮುಸುಕಲಿಹುದೆಲ್ಲವನು|
ಸಂತಸದ ಮಾತಿಷ್ಟೆ – ಮಂಕುತಿಮ್ಮ || 685 ||

ಪದ-ಅರ್ಥ: ಮುಸುಕಲಿಹುದೆಲ್ಲವನು = ಮುಸುಕಲು + ಇಹುದು + ಎಲ್ಲವನು.

ವಾಚ್ಯಾರ್ಥ: ಹೇಗೋ, ಹಾಗೋ ಈ ಜೀವಕಥೆ ಮುಗಿಯುತ್ತದೆ. ಎಂದೋ ಒಂದು ದಿನ ಈ ಜನ್ಮ ಕಳೆಯುತ್ತದೆ. ನಂತರ ಎಲ್ಲವೂ ಮರೆವಿನ ಮುಸುಕಿನಲ್ಲಿ ಮುಚ್ಚಿ ಹೋಗುತ್ತದೆ. ಅದೇ ಸಂತೋಷದ ವಿಷಯ.

ವಿವರಣೆ: ಈ ಜಗತ್ತಿನ ವಿಶೇಷ ಅದರ ಆವರ್ತನ ಗುಣ. ಎಲ್ಲಿಂದ ಪ್ರಾರಂಭವಾಗುತ್ತದೆಯೋ ಮತ್ತೆ ಅಲ್ಲಿಗೇ ಹೋಗಿ ಮುಕ್ತಾಯವಾಗುತ್ತದೆ. ಹೀಗೆ ಅದರ ಚಕ್ರ ಸುತ್ತುತ್ತಿರುತ್ತದೆ. ಪುಟ್ಟದಾಗಿ ಮೊಟ್ಟೆಯಂತಿದ್ದದ್ದು ಸಿಡಿದು ದಿಕ್ಕು ದಿಕ್ಕುಗಳಿಗೆ ಹಬ್ಬಿ ವಿಸ್ತಾರಗೊಳ್ಳುತ್ತ ಅನಂತ ವಿಶ್ವವಾಯಿತು. ಮುಂದೊಂದು ದಿನ ಅದು ಆಕುಂಚನಗೊಳ್ಳುತ್ತ, ಚಿಕ್ಕದಾಗುತ್ತ ಮತ್ತೆ ಮೊದಲಿನ ಅಣುರೂಪಕ್ಕೆ ಬರುತ್ತದೆ. ಮತ್ತೆ ವಿಸ್ತಾರ, ಆಕುಂಚನಗಳ ಚಕ್ರ ತಿರುಗುತ್ತದೆ. ಒಂದು ಬೀಜ ತನ್ನನ್ನು ಸೀಳಿಕೊಂಡು ವೃಕ್ಷವಾಗುತ್ತದೆ. ವೃಕ್ಷದಿಂದ ಅನೇಕ ಬೀಜಗಳು. ಆ ಬೀಜಗಳಿಂದ ಮತ್ತನೇಕ ವೃಕ್ಷಗಳು. ಬೀಜದ ಸಾವು, ಮರದ ಬದುಕು. ಇದೊಂದು ಚಕ್ರ, ತಾಯಗರ್ಭದಲ್ಲಿ ಅಣುಮಾತ್ರದ ಜೀವಸ್ಫುರಣ. ಅಲ್ಲಿಂದ ಬೆಳವಣಿಗೆ. ಮಗು, ಯೌವನ, ಮಧ್ಯವಯಸ್ಸು, ವೃದ್ಧಾಪ್ಯ, ಕೊನೆಗೆ ಅನಿವಾರ್ಯವಾದ ಸಾವು. ಅದು ಮತ್ತೊಂದು ಹುಟ್ಟಿಗೆ ಕಾರಣ. ಇದೊಂದು ಆವರ್ತನ. ಚಿರಂತನವಾದ ಆವರ್ತನ. ಈ ಆವರ್ತನದಲ್ಲಿ ಒಂದು ನಿಲ್ದಾಣ ದೇಹ. ದೇಹಭಾವ ಬಲಿತ ಕೂಡಲೇ ಅದರೊಂದಿಗೆ ಮೋಹ, ಲೋಭ ಮುಂತಾದ ಪಾಶಗಳು ಬಿಗಿಯತೊಡಗುತ್ತವೆ. ಬುದ್ಧಿವಂತರಿಗೂ ದೇಹವೇ ನಾನು ಎಂಬ ಭಾವ ಬಲಿಯುತ್ತದೆ. ದೇಹ ಪ್ರಜ್ಞೆ ಬಲವಾಗಿದ್ದಾಗ ಮರಣದ, ದೇಹನಾಶದ ಕಲ್ಪನೆ ಬರುವುದೇ ಇಲ್ಲ. ದೇಹ ಅಶಕ್ತವಾದಂತೆ ಸಾವಿನ ದಂಡೆ ಕಾಣತೊಡಗುತ್ತದೆ. ಯಾವ ದೇಹ ಅಭಿಮಾನಕ್ಕೆ ಕಾರಣವಾಗಿತ್ತೋ, ಅದು ಈಗ ಭಾರವಾಗತೊಡಗುತ್ತದೆ. ಸಾಕು ಎನ್ನಿಸುತ್ತದೆ. ಹೇಗೋ, ಎಂದೋ, ಈ ಜನ್ಮ ಕರಗಿ ಹೋಗಲಿ, ಕರಗುವುದು ಮಾತ್ರವಲ್ಲ ಮತ್ತೊಮ್ಮೆ ಬರದಿರಲಿ, ಎಲ್ಲವೂ ಮರವೆಯಲ್ಲಿ ಮುಚ್ಚಿ ಹೋಗಲಿ ಎನ್ನುತ್ತಾನೆ ಸಾಧಕ. ದೇಹ ಬರೀ ನಾಶವಾಗುವುದಲ್ಲ, ಅದು ಶಿವಾರ್ಪಣವಾಗಿ ಪುನರ್ಜನ್ಮವಿಲ್ಲದಂತಾಗಬೇಕು ಎಂದು ಆಶಿಸುತ್ತಾನೆ. ಪಾವನಾತ್ಮರಾದ ಶ್ರೀ ಶಿವಯೋಗಿ ಶಿವಾಚಾರ್ಯರು ರಚಿಸಿದ ಸಿದ್ಧಾಂತ ಶಿಖಾಮಣಿಯಲ್ಲಿ ಒಂದು ಸುಂದರವಾದ ಮಾತಿದೆ:

ಯದಾ ಶಿವಾಯ ಸ್ವಾತ್ಮಾನುದತ್ತವಾನ್
ದೇಶಿಕಾತ್ಮನೇ |
ತದಾ ಶೈವೊ ಭವೇದ್ದೇವಿ ತ ತತೋಸ್ತಿ ಪುನರ್ಭವ:||

'ಹೇ ದೇವಿ, ಶಿವಸ್ವರೂಪದಂತಿರುವ ಶ್ರೀ ಗುರುವಿಗೆ ದೇಹವನ್ನು ಅರ್ಪಿಸಿದಾಗ ಜೀವನು ದೇವನೇ ಆಗುತ್ತಾನೆ. ಹೀಗಾಗಿ ಅವನಿಗೆ ಪುನರ್ಜನ್ಮವಿಲ್ಲ'.

ಹೀಗೆ ಜೀವಕಥೆ, ದೇಹಕಥೆ ಮುಗಿಯುತ್ತದೆ. ಜನ್ಮದ ಭಾರ ಕಳೆಯುತ್ತದೆ. ಆದರೆ ಅದು ಮತ್ತೊಮ್ಮೆ ಬಾರದಂತೆ ಶಾಶ್ವತವಾದ ಮರೆವಿನ ಮುಸುಕಲಿ ಎಂಬುದು ಪ್ರಾರ್ಥನೆ. ಹಾಗಾದರೆ ಅದೊಂದು ಸಂತೋಷ. ಕಗ್ಗದ ಧ್ವನಿ ಅದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಆಗಸ್ಟ್ 3, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುದ್ಧ ಪಂಚಮಿ ಗಂ.05-42 **ನಕ್ಷತ್ರ:** ಹಸ್ತ ಗಂ.18-24 **ಯೋಗ:** ಸಿದ್ಧ ಗಂ.17-48, **ಕರಣ:** ಬಾಲವ ಗಂ.05-42, ಕರ್ಕಾಟಕ ಮಾಸದ 17ನೇ ದಿನ.
ರಾಹುಕಾಲ: ಮಧ್ಯಾಹ್ನ 12:00–01:30
ಸೂರ್ಯೋದಯ : 06-20 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ: 04 ಮೊಹರಮ್
ಅದೃಷ್ಟ ಸಂಖ್ಯೆ : 5, 9

ಮೇಷ: ನಿಮ್ಮ ಸಾಧನೆಗಳಿಗಾಗಿ ಸುತ್ತಮುತ್ತಲಿನವರಿಂದ ಪ್ರಶಂಸೆಯ ನುಡಿಯನ್ನು ಎದುರು ನೋಡಬಹುದು. ಆಸ್ತಿ ವಿಷಯಗಳನ್ನು ತ್ವರಿತ ಗತಿಯಲ್ಲಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ.

ವೃಷಭ: ಪೊಲೀಸ್ ಹುದ್ದೆಯಲ್ಲಿರುವವರಿಗೆ ಮಹತ್ವದ ಕಾರ್ಯಾಚರಣೆಗಾಗಿ ದೂರ ಸಂಚಾರ ಕಂಡುಬರಲಿದೆ. ಗುರುಗಳು ನೀಡಿದ ಸಮಾಧಾನದ ನುಡಿಯಿಂದ ಇಂದಿನ ಜೀವನದಲ್ಲಿ ನೆಮ್ಮದಿ ದೊರಕುವುದು.

ಮಿಥುನ: ರಾಜಕೀಯ ವ್ಯಕ್ತಿಗಳಿಗೆ ವಿರೋಧ ಪಕ್ಷದವರಿಂದ ಅಥವಾ ಶತ್ರುಗಳಿಂದ ತೊಂದರೆಗಳು ಆಗಬಹುದು. ನಿಮ್ಮ ಅಧಿಕ ಕೋಪದಿಂದ ಕೆಲವೊಂದು ವಿಚಾರದಲ್ಲಿ ನಷ್ಟದ ಅನುಭವ ಆಗುವಂತಾಗಲಿದೆ.

ಕರ್ಕಾಟಕ: ತಾಂತ್ರಿಕ ಕ್ಷೇತ್ರದಲ್ಲಿನ ನಿಮ್ಮ ತಿಳಿವಳಿಕೆಯ ಸಲಹೆ ಸೂಚನೆಗಳಿಗೆ ನಿಮ್ಮ ಅಧಿಕಾರಿ ವರ್ಗದವರಲ್ಲಿ ಹೆಚ್ಚು ಮನ್ನಣೆ ಸಿಗಲಿದೆ. ತೀರ್ಥ ಯಾತ್ರೆ ಕೈಗೊಳ್ಳುವ ಮನಸ್ಸಾಗಲಿದೆ. .

ಸಿಂಹ: ಮಹಿಳೆಯರಿಗೆ ಉನ್ನತ ಉದ್ಯೋಗ ಹಾಗೂ ಪ್ರಾಪ್ತವಯಸ್ಕರಿಗೆ ವಿವಾಹದ ಶುಭ ಫಲಗಳು ದೊರೆಯಲಿವೆ. ನೂತನ ವಾಹನವನ್ನು ಕೊಳ್ಳುವ ಬಗ್ಗೆಯೋಚನೆ ಬರುವುದು.

ಕನ್ಯಾ: ದ್ರವರೂಪದ ವಸ್ತುವಿನ ಅದರಲ್ಲೂ ತೈಲಗಳ ಮಾರಾಟದಲ್ಲಿ ಅಧಿಕ ಲಾಭವಿರುವುದು. ಅಧಿಕಾರಿ ವರ್ಗದವರಲ್ಲಿ ಸಹನಶೀಲರಾಗಿ ವರ್ತಿಸಿ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮ ಮಾಡಲು ತೀರ್ಮಾನಿಸುವಿರಿ.

ತುಲಾ: ಕತ್ತಲೆಯ ಪ್ರಪಂಚದಲ್ಲಿರುವ ನಿಮ್ಮ ಜೀವನಕ್ಕೆ ದೂರದಲ್ಲೊಂದು ಸುಜ್ಯೋತಿ ಕಾಣಲಿದೆ. ಮೇಲಧಿಕಾರಿಗಳ ಕಿರುಕುಳದಿಂದ ಹೊರಬರುವ ಕಾಲ ಸಮೀಪದಲ್ಲಿದೆ.ಆರ್ಥಿಕವಾಗಿ ಸಾಲ ಮಾಡುವ ಸಾಧ್ಯತೆಗಳಿರುವುದು.

ವೃಶ್ಚಿಕ: ಗುರು-ಹಿರಿಯರ ದರ್ಶನ ಭಾಗ್ಯವಿರುವುದು. ನಿಮ್ಮ ಚಾಣಾಕ್ಷತನದ ನಿರ್ಧಾರಗಳು ನಿಮ್ಮನ್ನು ತೂಕದ ವ್ಯಕ್ತಿಯನ್ನಾಗಿ ಮಾಡಲಿದೆ. ದುರ್ಗಾಪರಮೇಶ್ವರಿಯನ್ನು ಆರಾಧಿಸಿ ಶುಭ ಫಲಗಳನ್ನು ಪಡೆಯುವಿರಿ.

ಧನು: ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದಲ್ಲಿ ದುಡುಕು ನಿರ್ಧಾರ ತೆಗೆದುಕೊಳ್ಳಬೇಡಿ. ಪತ್ರಿಕೋದ್ಯಮಿಗಳಿಗೆ ಬಿಡುವಿಲ್ಲದ ಕೆಲಸಗಳು ಮತ್ತು ವಿಮರ್ಶಿಸಲು ಕಷ್ಟವಾಗುವಂತಹ ಪರಿಸ್ಥಿತಿಗಳು ಎದುರಾಗುತ್ತದೆ.

ಮಕರ: ಮನೋಬಲದಿಂದ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುವಿರಿ. ದಾಂಪತ್ಯ ಜೀವನ ಸುಖಮಯವಾಗಿರುತ್ತದೆ. ವಿದ್ಯುತ್‌ನಿಂದಾಗಿ ಅಥವಾ ಅಗ್ನಿಯಿಂದಾಗಲೀ ಅಪಘಾತಗಳು ಸಂಭವಿಸಬಹುದು.

ಕುಂಭ: ಎಲ್ಲಾ ಕಾರ್ಯದಲ್ಲೂ ಆತ್ಮ ವಿಶ್ವಾಸವಿರಲಿ ಆದರೇ ನಿಮಗಿರುವ ಅತಿಯಾದ ಆತ್ಮ ವಿಶ್ವಾಸ ನಿಮ್ಮ ಜಯಕ್ಕೆ ಹೊಡೆತವನ್ನು ನೀಡುವುದು. ಹಸಿರು ಬಣ್ಣ ನಿಮ್ಮ ವ್ಯಕ್ತಿತ್ವಕ್ಕೆ ಉತ್ತಮವಾಗಿರುವುದು.

ಮೀನ: ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಸುಮಧುರ ಘಟನೆಯು ಇಂದು ನಿಮ್ಮ ಬಾಳಲ್ಲಿ ನಡೆಯಲಿದೆ. ಅಧಿಕ ತಿರುಗಾಟಗಳಿದ್ದರು ಆದಾಯಕ್ಕೆ ಕೊರತೆ ಇರುವುದಿಲ್ಲ.

ಪದಬಂಧ 5038

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಭಾರವಿರುವ ಅಡಿಪಾಯ! (4)
2.ಉತ್ತಮ ಕುಲದಲ್ಲಿ ಹುಟ್ಟಿದವನು (4)
4.ಸಂಪೂರ್ಣ ನಾಶವನ್ನು ಹೀಗೆನ್ನಿ (3)
6.ಹಾಡಿನ ಪುನರಾವರ್ತನೆಗೊಳ್ಳುವ ಸಾಲು (3)
8.ಕರುವಿಗೆ ತೋರಿದ ದಯೆ (3)
9.ಜಗತ್ತಿನ ಒಳಿತಿದು (5)
10.ಮಲಗುವಾಗ ಸೇವಕ ಕಾಣಿಸಿಹನಲ್ಲಾ! (3)
11.ಇನ್ನೂ ಕರು ಹಾಕದ ಹಸು (3)
13.ಕಲೆಸಿರುವ ಗೋಧಿಹಿಟ್ಟು (3)
14.ತೋರಿಕೆಗೆ ಸ್ನೇಹಿತನಂತಿದ್ದು ಮರೆಯಲ್ಲಿ ಹಗೆ ಸಾಧಿಸುವವನು (4)
15.ಒಪ್ಪವಾಗಿ ಬಳಿಯುವುದು (4)

ಮೇಲಿಂದ ಕೆಳಕ್ಕೆ
1.ಸಾಮಾನ್ಯವಾಗಿ ದೊರಕದೆ ವಿರಳವಾಗಿರುವಂಥದ್ದು (4)
3.ಶಿರ ಮೇಲೆತ್ತಿರುವ ಧೂರ್ತ! (4)
5.ಹೆಸರಿಡುವ ಶಾಸ್ತ್ರವಿದು (5)
7.ವಿರುದ್ಧವಾದುದನ್ನು ಹೀಗೆನ್ನಿ (3)
8.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
10.ಒಳ್ಳೆಯದನ್ನ ಗ್ರಹಿಸುವವನು (4)
12.ಚಾರನಿಗೆ ಕಾಣುತ್ತಿರುವ ಕಾಮನಬಿಲ್ಲು (4)

1				■	2			3
	■	■	■	■	■	■	■	
	■	■	4	5		■	■	
6		7	■		■	8		
■	■	9					■	■
10			■		■	11		12
	■	■	13			■	■	
	■	■	■	■	■	■	■	
14				■	15			

5037ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಲ್ಮೀಕ 3.ಸಮೀಕ್ಷೆ
4.ಗಡಾರಿ 5.ಅಳು
6.ಕರಗ 8.ವಿಷಾದ
9.ಮಾತುಲ 11.ನಗರ
14.ದಿಟ 15.ಹಮಾಲ
16.ಬಯಲು 17.ನಕ್ಷತ್ರ

ಮೇಲಿಂದ ಕೆಳಕ್ಕೆ:
2.ಕರುಳು 3.ಸರಿಗೆ
4.ಗಟಾರ 5.ಅಡವಿ
6.ಕದನ 7.ಗಮಾರ
10.ಲಲಾಟ 12.ಗದ್ದಲ
13.ಮಹಲು 14.ದಿವಾನ

ಸುಡೊಕು 5424

				5		7		2
		3	6		7			
		7		3		6		9
	6			1		8		7
7		9	5				1	
	8			9		3		5
	7		3		1			
5							7	3
	3		9		5		6	8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5423 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,340
ಇಂದಿನ ಅಂತ್ಯ	17,345
▲	5
ದಿನದ ಕನಿಷ್ಠ	17,390

ವಿನಿಮಯ ದರ

$ ಡಾಲರ್	78.53
£ ಪೌಂಡ್	95.85
€ ಯುರೊ	80.42
¥ ಯೆನ್ (100ಕ್ಕೆ)	59.6

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹405
12 ಮೊಟ್ಟೆಗೆ	₹57

ಮೈಸೂರು

100 ಮೊಟ್ಟೆಗೆ	₹405

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1620 (1620)
ಸೋಯಾ (ರಿಫೈಂಡ್)	₹1270 (1290)
ಸೂರ್ಯಕಾಂತಿ (ರಿಫೈಂಡ್)	₹1570 (1590)
ಪಾಮೋಲಿನ್	₹1240 (1275)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹800-1000
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹165
ಆರ್‌ಎಸ್‌ಎಸ್-5	₹156
ಗುಡ್ ಲಾಟ್	₹150

ಐಟಿಸಿ ಲಾಭ ಶೇಕಡ 33ರಷ್ಟು ಏರಿಕೆ

ನವದೆಹಲಿ (ಪಿಟಿಐ): ಜೂನ್ ತ್ರೈಮಾಸಿಕದಲ್ಲಿ ಐಟಿಸಿ ಲಿಮಿಟೆಡ್ ಕಂಪನಿಯ ನಿವ್ವಳ ಲಾಭದ ಪ್ರಮಾಣದಲ್ಲಿ ಶೇಕಡ 33.46ರಷ್ಟು ಏರಿಕೆ ಆಗಿದೆ. ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ₹ 3,343 ಕೋಟಿ ಲಾಭ ಗಳಿಸಿತ್ತು.

ಕಾರ್ಯಾಚರಣೆ ವರಮಾನವು ಶೇ 39.25ರಷ್ಟು ಹೆಚ್ಚಳ ಕಂಡು ₹ 19,831 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಾರ್ಯಾಚರಣೆ ವರಮಾನವು ₹ 14,240 ಕೋಟಿ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. 'ಕಂಪನಿಯ ಎಲ್ಲ ವಹಿವಾಟುಗಳಲ್ಲಿಯೂ ಉತ್ತಮ ಸಾಧನೆ ಸಾಧ್ಯವಾಗಿದೆ' ಎಂದು ಅದು ತಿಳಿಸಿದೆ.

ಕೊಬ್ಬರಿ ಧಾರಣೆ



ಅರಸೀಕೆರೆ	₹13000-14710
ತುರುವೇಕೆರೆ	₹14600-14700
ತುರುವೇಕೆರೆ	₹16000-18000

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹335-595
ದ್ವಿತಳಿ (ಬಿ.ವಿ)	₹322-728

ಮುಂಬೈ ಧಾರಣೆ

ಶೇಂಗಾ

2-8-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1210 (1260)
ಪಾಮ್ ವಾರದ ಡೆಲಿವರಿ	1238 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1490 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,250 (51,500)
ಬೆಳ್ಳಿ ಕೆ.ಜಿ 57,850 (58,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಇ–ಇನ್‌ವಾಯ್ಸ್ ಕಡ್ಡಾಯ

ನವದೆಹಲಿ (ಪಿಟಿಐ): ವಾರ್ಷಿಕ ₹10 ಕೋಟಿಗಿಂತ ಹೆಚ್ಚಿನ ವಹಿವಾಟು ನಡೆಸುವ, ಜಿಎಸ್‌ಟಿ ಅಡಿ ನೋಂದಾಯಿತ ಆಗಿರುವ ವರ್ತಕರು, ಉದ್ದಿಮೆಗಳು ಬಿ2ಬಿ ವಹಿವಾಟುಗಳಿಗೆ ಇ–ಇನ್‌ವಾಯ್ಸ್ ಸೃಷ್ಟಿಸುವುದು ಅಕ್ಟೋಬರ್ 1ರಿಂದ ಕಡ್ಡಾಯವಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಈಗಿರುವ ನಿಯಮಗಳ ಅನ್ವಯ ವಾರ್ಷಿಕ ₹ 20 ಕೋಟಿಗಿಂತ ಹೆಚ್ಚಿನ ವಹಿವಾಟು ಇರುವ ವರ್ತಕರು, ಉದ್ದಿಮೆಗಳು ಬಿ2ಬಿ ವಹಿವಾಟುಗಳಿಗೆ ಇ–ಇನ್‌ವಾಯ್ಸ್ ಕಡ್ಡಾಯವಾಗಿ ಸೃಷ್ಟಿಸಬೇಕಿದೆ.

ಮುಂದಿನ ದಿನಗಳಲ್ಲಿ ಇ-ಇನ್‌ವಾಯ್ಸ್ ಸೃಷ್ಟಿಸುವುದನ್ನು ₹5 ಕೋಟಿ ವಹಿವಾಟು ನಡೆಸುವ ವರ್ತಕರು, ಉದ್ದಿಮೆಗಳಿಗೂ ಕಡ್ಡಾಯ ಮಾಡುವ ಚಿಂತನೆ ಕೇಂದ್ರ ಸರ್ಕಾರಕ್ಕೆ ಇದೆ.

ಕೇಂದ್ರದ ಕ್ರಮಗಳು ತೆರಿಗೆ ವರಮಾನದ ವ್ಯಾಪ್ತಿಯನ್ನು ಹೆಚ್ಚಿಸುತ್ತದೆ ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ಎಂ.ಎಸ್. ಮಣಿ ಹೇಳಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಿಜಯಲಕ್ಷ್ಮಿ ಕಲ್ಮಠ, ಗುಳೇದಗುಡ್ಡ

● **ಪ್ರಶ್ನೆ: ನಾನು ಕಾಲೇಜು ಪ್ರಾಧ್ಯಾಪಕಿ. ನಿವೃತ್ತ ಜೀವನಕ್ಕಾಗಿ ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಬೇಕೆಂದಿದ್ದೇನೆ. ಇದರಲ್ಲಿ ಟೈರ್ 1 ಹಾಗೂ ಟೈರ್ 2 ಎಂಬ ವರ್ಗಗಳು ಇವೆ ಎಂದು ಕೇಳಿದ್ದೇನೆ. ನಾನು ಯಾವುದನ್ನು ಆಯ್ಕೆ ಮಾಡಬೇಕು ಹಾಗೂ ಇವುಗಳ ವೈಶಿಷ್ಟ್ಯ ಏನು? ಯಾವುದು ನಮಗೆ ಅಧಿಕ ಲಾಭದಾಯಕ ಹಾಗೂ ಹೆಚ್ಚು ಭದ್ರತೆ ಹೊಂದಿದೆ ಎಂಬುದನ್ನು ತಿಳಿಸಿ.**

ಉತ್ತರ: ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ (ಎನ್‌ಪಿಎಸ್) ಅಡಿಯಲ್ಲಿ ಸಂಗ್ರಹವಾದ ಮೊತ್ತವನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಪಿಎಫ್‌ಆರ್‌ಡಿಎ) ಅನುಮೋದನೆ ಪಡೆದ ಹೂಡಿಕೆ ಮಾರ್ಗಸೂಚಿ ಪ್ರಕಾರ ಸರ್ಕಾರಿ ಬಾಂಡ್‌ಗಳು, ಬಿಲ್‌ಗಳು, ಕಾರ್ಪೊರೇಟ್ ಡಿಬೆಂಚರ್‌ಗಳು ಮತ್ತು ಷೇರುಗಳನ್ನು ಒಳಗೊಂಡಿರುವ ವೈವಿಧ್ಯಮಯ ಪೋರ್ಟ್‌ಫೋಲಿಯೊಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಎನ್‌ಪಿಎಸ್ ಖಾತೆಯನ್ನು ತೆರೆಯಲು ಶಾಶ್ವತ ನಿವೃತ್ತಿ ಖಾತೆ ಸಂಖ್ಯೆಯನ್ನು (ಪ್ರಾಣ್) ಹೊಂದಿರಬೇಕಾಗುತ್ತದೆ. ಎನ್‌ಪಿಎಸ್ ಚಂದಾದಾರರ ಜೀವಿತಾವಧಿಯಲ್ಲಿ ಎನ್‌ಪಿಎಸ್ ಸಂಬಂಧಿತ ಯಾವುದೇ ವ್ಯವಹಾರಕ್ಕೆ ಇದನ್ನು ಬಳಸಿಕೊಳ್ಳಬೇಕು. ಯೋಜನೆಯನ್ನು ಎರಡು ಹಂತಗಳಾಗಿ ರೂಪಿಸಲಾಗಿದೆ:

1) 'ಟೈರ್ 1' ಹೂಡಿಕೆಯ ಅಡಿ, 60 ವರ್ಷ ವಯಸ್ಸಿನ ನಂತರವಷ್ಟೇ ಹೂಡಿಕೆದಾರರಿಗೆ ಹಣ ಹಿಂಪಡೆಯುವುದಕ್ಕೆ ಅವಕಾಶ ಕೊಡಲಾಗುತ್ತದೆ. ಇದರಲ್ಲಿ ಮಾಡುವ ಹೂಡಿಕೆಗೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 ಸಿಸಿಡಿ(1) ಅಡಿ ತೆರಿಗೆ ವಿನಾಯಿತಿ ಇದೆ. ಇಲ್ಲಿ ವಾರ್ಷಿಕವಾಗಿ ₹ 1.50 ಲಕ್ಷದ ತನಕ ತೆರಿಗೆ ವಿನಾಯಿತಿ ಪಡೆಯಬಹುದು. ಟೈರ್ 1 ಖಾತೆ ಹೊಂದಿರುವವರ ₹ 50 ಸಾವಿರದವರೆಗಿನ ಹೂಡಿಕೆಗೆ ಸೆಕ್ಷನ್ 80 ಸಿಸಿಡಿ1(ಬಿ) ಅಡಿ ಪ್ರತಿ ವರ್ಷ ಹೆಚ್ಚುವರಿ ತೆರಿಗೆ ವಿನಾಯಿತಿ ಇದೆ. ಈ ಯೋಜನೆಯಲ್ಲಿ ವಾರ್ಷಿಕವಾಗಿ ಕನಿಷ್ಠ ಹೂಡಿಕೆ ಮೊತ್ತ ₹ 1,000. ₹ 500 ತೊಡಗಿಸಿ ಖಾತೆ ತೆರೆಯಬಹುದು. ನಿವೃತ್ತಿಯ ಸಮಯದಲ್ಲಿ ಹಿಂಪಡೆಯುವ ಒಟ್ಟು ಮೊತ್ತದ ಮೇಲೆ ತೆರಿಗೆ ಇರುವುದಿಲ್ಲ.

2) 'ಟೈರ್ 2' ಖಾತೆಯಲ್ಲಿನ ಹೂಡಿಕೆಯನ್ನು ಯಾವುದೇ ನಿರ್ಬಂಧಗಳಿಲ್ಲದೆ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಹೂಡಿಕೆದಾರರಿಗೆ ಅವರ ಅಗತ್ಯಕ್ಕೆ ತಕ್ಕಂತೆ ಹಣ ವಾಪಸ್ ಪಡೆಯುವ ಅವಕಾಶ ಇರುವುದು ಇದರ ವಿಶೇಷ. ಪ್ರತಿ ವರ್ಷ ಕನಿಷ್ಠ ಮೊತ್ತ ಪಾವತಿಯ ಅಗತ್ಯವಿಲ್ಲ. ಆದರೆ ಈ ಖಾತೆಯಲ್ಲಿ ಹೂಡಿಕೆ ಮಾಡುವ ಮುನ್ನ ಟೈರ್ 1 ಖಾತೆ ತೆರೆಯಬೇಕು. ಇಲ್ಲಿನ ಹೂಡಿಕೆಗೆ ತೆರಿಗೆ ವಿನಾಯಿತಿ ಸಿಗುವುದಿಲ್ಲ. ಹೀಗಾಗಿ, ಇದು ಹೂಡಿಕೆ ಮಾತ್ರದ ಖಾತೆ.

ಈ ಎರಡೂ ಹೂಡಿಕೆಗಳು ಪ್ರತ್ಯೇಕ ಹಾಗೂ ಅವುಗಳ ಉದ್ದೇಶ ವಿಭಿನ್ನ. ಟೈರ್ 1 ಹೂಡಿಕೆ ದೀರ್ಘಾವಧಿಯದು. ಟೈರ್ 2 ಹೂಡಿಕೆ ಯಾವುದೇ ಸಮಯ ಹಿಂಪಡೆಯಬಹುದಾದ ಹೂಡಿಕೆ. ದೀರ್ಘಾವಧಿ ಹೂಡಿಕೆಗಳಲ್ಲಿ ಹೆಚ್ಚಿನ ಪ್ರತಿಶತ ಮೊತ್ತವನ್ನು ಈಕ್ವಿಟಿ ವಿಭಾಗಕ್ಕೆ ತೊಡಗಿಸುವ ಮೂಲಕ ಹೂಡಿಕೆಯ ಮೌಲ್ಯವನ್ನು ಹೆಚ್ಚಿಸಬಹುದು. ಟೈರ್ 2 ಖಾತೆಯನ್ನು ದೀರ್ಘಾವಧಿಯ ಖಾತೆಯಾಗಿಯೂ ಬಳಸಿಕೊಳ್ಳಬಹುದು. ಖಾತೆಯನ್ನು ಆಧಾರ್ ಹಾಗೂ ಬ್ಯಾಂಕ್ ಖಾತೆಯ ವಿವರದೊಂದಿಗೆ ಎನ್‌ಪಿಎಸ್ ಪೋರ್ಟಲ್ ಮೂಲಕ ನೀವೇ ತೆರೆಯಬಹುದು. ಯೋಚಿಸಿ ನಿರ್ಧಾರ ಕೈಗೊಳ್ಳಿ.

ಹೆಸರು ಬೇಡ, ಬೆಂಗಳೂರು

● **ಪ್ರಶ್ನೆ: ನಾನು ಈ ಹಿಂದೆ ಒಂದು ಬ್ಯಾಂಕ್ ಮೂಲಕ ಎಸ್‌ಐಪಿ ಹೂಡಿಕೆ ಮಾಡಿದ್ದೆ. ಈಗ ಆ ಬ್ಯಾಂಕ್ ಖಾತೆ ಚಾಲ್ತಿಯಲ್ಲಿಲ್ಲ. ನಾನು ಈಗ ಎಸ್‌ಐಪಿ ಹಣ ಹಿಂಪಡೆಯಬೇಕು. ಬ್ಯಾಂಕ್ ಖಾತೆಯನ್ನು ಮತ್ತೆ ಸಕ್ರಿಯ ಮಾಡಿಕೊಳ್ಳಬೇಕೆ? ಬೇರೆ ಖಾತೆಗೆ ಹಣ ಬರುವಂತೆ ಮಾಡಲಾಗದೆ?**

ಉತ್ತರ: ಸಾಮಾನ್ಯವಾಗಿ, ಬ್ಯಾಂಕ್ ಗ್ರಾಹಕರು ಅನೇಕ ಖಾತೆಗಳನ್ನು ಹೊಂದಿದ್ದಾಗ ಅಥವಾ ಒಂದು ಸ್ಥಳದಿಂದ ಇನ್ನೊಂದೆಡೆಗೆ ಉದ್ಯೋಗ ನಿಮಿತ್ತ ವರ್ಗಾವಣೆಯಾದಾಗ ತಮ್ಮ ಎಲ್ಲ ಖಾತೆಗಳನ್ನು ಚಾಲ್ತಿಯಲ್ಲಿಡಲು ಸಾಧ್ಯವಾಗದ ಪರಿಸ್ಥಿತಿ ಎದುರಾಗುತ್ತದೆ. ಖಾತೆಯಲ್ಲಿ ಎರಡು ವರ್ಷಗಳಿಂದ ಹೊರಗಿನ ಜಮಾ-ಪಾವತಿ ವ್ಯವಹಾರ ನಡೆಯದಿದ್ದಲ್ಲಿ ಅಂತಹ ಖಾತೆಗಳನ್ನು ಬ್ಯಾಂಕ್‌ಗಳು ಗ್ರಾಹಕರ ಹಿತದೃಷ್ಟಿಯಿಂದ ನಿಷ್ಕ್ರಿಯಗೊಳಿಸುತ್ತವೆ. ಇದರ ಉದ್ದೇಶ, ಗ್ರಾಹಕರ ನಿಷ್ಕ್ರಿಯ ಖಾತೆ ಉಪಯೋಗಿಸಿ ಯಾವುದೇ ಒಳ-ಹೊರಗಿನ ವ್ಯಕ್ತಿಗಳು ಅಕ್ರಮ ವ್ಯವಹಾರ ನಡೆಸುವುದನ್ನು ತಡೆಗಟ್ಟುವುದು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಬ್ಯಾಂಕ್‌ಗಳು ಗ್ರಾಹಕರಿಂದ ವಸೂಲು ಮಾಡುವ ಶುಲ್ಕ, ಅಥವಾ ಗ್ರಾಹಕರಿಗೆ ನೀಡುವ ಶಿಲ್ಕಿನ ಮೇಲಿನ ಬಡ್ಡಿಯನ್ನು ಹೊರಗಿನ ವ್ಯವಹಾರವೆಂದು ಪರಿಗಣಿಸಲಾಗುವುದಿಲ್ಲ. ಹೀಗಾಗಿ, ಖಾತೆಯನ್ನು ಸದಾ ಚಾಲ್ತಿಯಲ್ಲಿಡಲು ಅದನ್ನು ನಿಮ್ಮ ನಿತ್ಯದ ವ್ಯವಹಾರಕ್ಕೆ ಬಳಸಿಕೊಳ್ಳುತ್ತಿರಬೇಕು ಅಥವಾ ನಿಮ್ಮದೇ ಇತರ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡುತ್ತಿರಬೇಕು.

ಮೇಲಿನ ಸನ್ನಿವೇಶದಲ್ಲಿ ನಿಮಗೆ ಎರಡು ಅವಕಾಶಗಳಿವೆ.

1) ನಿಮ್ಮ ಎಸ್‌ಐಪಿ ಹೂಡಿಕೆಯನ್ನು ನಿರ್ವಹಿಸುತ್ತಿರುವ ಫಂಡ್ ಹೌಸ್‌ಗೆ ಅಥವಾ ಸಮೀಪದ ಕ್ಯಾಮ್ಸ್ (CAMS) ಕೇಂದ್ರಕ್ಕೆ ನಿಮ್ಮ ಬೇರೆ ಬ್ಯಾಂಕ್ ಖಾತೆಯ ಮಾಹಿತಿಯನ್ನು ನೀಡುವ ಮೂಲಕ ನಿಮ್ಮ ಹೂಡಿಕೆಯನ್ನು ತ್ವರಿತವಾಗಿ ಪಡೆಯಬಹುದು. ಇದಕ್ಕಾಗಿ ನಿಮ್ಮ ಇತರ ಖಾತೆಯ, ರದ್ದು ಮಾಡಲಾದ ಚೆಕ್ (cancelled cheque) ಜೊತೆ ಅರ್ಜಿ ಸಲ್ಲಿಸುವ ಮೂಲಕ ಅಗತ್ಯ ಬದಲಾವಣೆ ಮಾಡಿಕೊಳ್ಳಬಹುದು. ಬ್ಯಾಂಕ್ ಮ್ಯಾಂಡೇಟ್ ಬದಲಾವಣೆ ಸೇವೆಯನ್ನು ಕ್ಯಾಮ್ಸ್ ಆನ್ಲೈನ್ ಪೋರ್ಟಲ್ (https://www.camsonline.com) ಮೂಲಕವೂ ಕೆಲವು ಮೌಲ್ಯಮಾಪನ ಮಿತಿಯೊಳಗೆ ಬರುವ ಫೋಲಿಯೊಗಳಿಗೆ ಮಾಡಬಹುದು.

2) ಗ್ರಾಹಕರು ಸೂಕ್ತ ಅರ್ಜಿಯೊಡನೆ ತಮ್ಮ ಭಾವಚಿತ್ರ, ಗುರುತು ಪತ್ರ, ಪ್ಯಾನ್, ಆಧಾರ್ ಇತ್ಯಾದಿ ಅಗತ್ಯ ದಾಖಲೆಗಳನ್ನು ಬ್ಯಾಂಕಿಗೆ ಸಲ್ಲಿಸಿ, ನಿಷ್ಕ್ರಿಯ ಖಾತೆಯನ್ನು ಪುನಃ ಚಾಲ್ತಿಗೊಳಿಸಬಹುದು. ಇದಕ್ಕಾಗಿ ಕೆಲವೊಮ್ಮೆ ಗ್ರಾಹಕರು ಮೇಲೆ ತಿಳಿಸಿದ ದಾಖಲೆಗಳೊಡನೆ ಬ್ಯಾಂಕ್ ಶಾಖೆಗೆ ಖುದ್ದಾಗಿ ಭೇಟಿ ನೀಡಬೇಕಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001 ಇ-ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಭದ್ರಾವತಿ	
ರಾಶಿ	46699-50399
ಪುತ್ತೂರು	
ಕೋಕ	11000-26000
ಹೊಸತು	27500-45000
ಚಿತ್ರದುರ್ಗ	
ಆಪಿ	50339-50729
ಬೆಟ್ಟೆ	40000-40400
ಕೆಂಪುಗೋಟು	30649-31099
ರಾಶಿ	49819-50269
ಕುಂದಾಪುರ	
ಹೊಸಚಾಲಿ	39000-41500
ಪುತ್ತೂರು	
ಹೊಸತು	32000-45000
ಶಿವಮೊಗ್ಗ	
ರಾಶಿ	47100-50609
ಸಿದ್ದಾಪುರ	
ಬಿಳಿಗೋಟು	24699-32255
ಚಾಲಿ	36222-40239
ಕೋಕ	23191-33919
ರಾಶಿ	49699-50055
ತಟ್ಟಿಬೆಟ್ಟೆ	38069-40699
ಶಿರಸಿ	
ಬೆಟ್ಟೆ	40699-44610
ಬಿಳಿಗೋಟು	26999-33399
ಚಾಲಿ	37472-40558
ರಾಶಿ	47899-50299
ಯಲ್ಲಾಪುರ	
ಬಿಳಿಗೋಟು	29212-33369
ಚಾಲಿ	35299-40050
ಕೋಕ	18012-29699
ಕೆಂಪುಗೋಟು	31118-34399
ರಾಶಿ	46299-50899
ತಟ್ಟಿಬೆಟ್ಟೆ	37860-45299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	15850	219.10 ಸೆಂಟ್ಸ್
ಎಸಿ	8820	8400	8800	
ಆರ್‌ಪಿ	9500	9500	9700	ಲಂಡನ್
ಆರ್‌ಸಿ	4700	4500	4550	2009 ಡಾಲರ್ಸ್

'ಕುಸಿದುಬಿದ್ದಿಲ್ಲ ರೂಪಾಯಿ ಮೌಲ್ಯ'

ನವದೆಹಲಿ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಕುಸಿದುಬಿದ್ದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ರೂಪಾಯಿ ಮೌಲ್ಯವು ಸಹಜ ಏರಿಳಿತ ಕಾಣುತ್ತಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ರೂಪಾಯಿ ಮೌಲ್ಯದ ಮೇಲೆ ಆರ್‌ಬಿಐ ನಿರಂತರ ನಿಗಾ ಇರಿಸಿದೆ, ಅಸ್ಥಿರತೆ ಇದ್ದಾಗಲೆಲ್ಲ ಮಧ್ಯಪ್ರವೇಶ ಮಾಡುತ್ತಿದೆ ಎಂದು ನಿರ್ಮಲಾ ಅವರು ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

'ರೂಪಾಯಿ ತನ್ನ ಮೌಲ್ಯವನ್ನು ತಾನಾಗಿಯೇ ಕಂಡುಕೊಳ್ಳುತ್ತದೆ. ಆರ್‌ಬಿಐ ಮಧ್ಯಪ್ರವೇಶ ಮಾಡುವುದು ರೂಪಾಯಿ ಮೌಲ್ಯವನ್ನು ನಿಗದಿ ಮಾಡುವುದಕ್ಕೆ ಅಲ್ಲ. ಆರ್‌ಬಿಐ ಮಧ್ಯಪ್ರವೇಶವು ಅಸ್ಥಿರತೆಯನ್ನು ನಿಯಂತ್ರಿಸುವ ಉದ್ದೇಶ ಹೊಂದಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಬಹಳ ಏರಿಳಿತಗಳನ್ನು ಕಂಡಿದೆ. ಆದರೆ, ಇತರ ದೇಶಗಳ ಕರೆನ್ಸಿಗಳಿಗೆ ಹೋಲಿಸಿದರೆ ರೂಪಾಯಿಯ ಸಾಧನೆಯು ಉತ್ತಮವಾಗಿದೆ. ಅಮೆರಿಕದ ಫೆಡರಲ್ ರಿಸರ್ವ್‌ನ ತೀರ್ಮಾನಗಳ ಪರಿಣಾಮವನ್ನು ರೂಪಾಯಿಯು ಇತರ ಕರೆನ್ಸಿಗಳಿಗಿಂತ ಹೆಚ್ಚು ಚೆನ್ನಾಗಿ ತಾಳಿಕೊಂಡಿದೆ' ಎಂದರು.

'ಅಮೆರಿಕದ ಡಾಲರ್ ಹೊರತುಪಡಿಸಿ ಇತರ ದೇಶಗಳ ಕರೆನ್ಸಿಗಳ ಜೊತೆ ರೂಪಾಯಿಯನ್ನು ಹೋಲಿಕೆ ಮಾಡಿದರೆ, ರೂಪಾಯಿ ಮೌಲ್ಯವು ಹೆಚ್ಚಾಗುತ್ತಿರುವುದು ಗೊತ್ತಾಗುತ್ತದೆ. ರೂಪಾಯಿಯ ಮೌಲ್ಯವು ಕುಸಿದುಬಿದ್ದಿಲ್ಲ ಎಂಬುದನ್ನು ಸದನದ ಸದಸ್ಯರಿಗೆ ತಿಳಿಸಲು ಬಯಸುವೆ' ಎಂದಿದ್ದಾರೆ.

ವಿದೇಶಿ ಮೀಸಲು ಮೊತ್ತ ಕಡಿಮೆ ಆಗುತ್ತಿದೆ ಎಂಬ ಬಗ್ಗೆ ಪ್ರತಿಕ್ರಿಯೆ ನೀಡಿದ ನಿರ್ಮಲಾ, 'ಈಗಲೂ ನಮ್ಮಲ್ಲಿ ಸರಿಸುಮಾರು 500 ಬಿಲಿಯನ್ ಡಾಲರ್ (₹ 39 ಲಕ್ಷ ಕೋಟಿ) ಮೀಸಲು ಇದೆ' ಎಂದಿದ್ದಾರೆ.

'ಹಿಜಾಬ್ ಕುರಿತ ಮೇಲ್ಮನವಿ ವಿಚಾರಣೆಗೆ ಪೀಠ ರಚನೆ'

ನವದೆಹಲಿ (ಪಿಟಿಐ): ಮುಸ್ಲಿಂ ವಿದ್ಯಾರ್ಥಿನಿಯರು ಶಾಲೆಗೆ ಹಿಜಾಬ್ ಧರಿಸಿ ಬರುವುದಕ್ಕೆ ಹೇರಿರುವ ನಿಷೇಧ ರದ್ದು ಪಡಿಸಿ ಆದೇಶ ನೀಡಲು ನಿರಾಕರಿಸಿರುವ ಕರ್ನಾಟಕ ಹೈಕೋರ್ಟ್ ವಿರುದ್ಧದ ಅರ್ಜಿಗಳ ವಿಚಾರಣೆಗೆ ಸುಪ್ರೀಂ ಕೋರ್ಟ್ ಪ್ರತ್ಯೇಕ ಪೀಠ ರಚಿಸಲಿದೆ.



ಹಿರಿಯ ವಕೀಲರಾದ ಮೀನಾಕ್ಷಿ ಅರೋರಾ ಅವರ ವಾದವನ್ನು ಆಲಿಸಿದ ಬಳಿಕ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿ ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಅವರಿದ್ದ ಪೀಠವು ಈ ತೀರ್ಮಾನ ಪ್ರಕಟಿಸಿತು.

ಹಿಜಾಬ್ ಧರಿಸುವುದರ ವಿರುದ್ಧದ ನಿಷೇಧ ರದ್ದುಪಡಿಸಬೇಕು ಎಂದು ಕೋರಿ ಕಳೆದ ಮಾರ್ಚ್ ತಿಂಗಳಲ್ಲೇ ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ಇನ್ನೂ ಅವುಗಳನ್ನು ವಿಚಾರಣೆಗೆ ಪರಿಗಣಿಸಿಲ್ಲ ಎಂದು ವಕೀಲರು ಪೀಠದ ಗಮನಕ್ಕೆ ತಂದರು.

'ಈ ಅರ್ಜಿಗಳ ವಿಚಾರಣೆಗೆ ನಾವು ಪ್ರತ್ಯೇಕ ಪೀಠವನ್ನು ರಚಿಸುತ್ತೇವೆ. ಸದ್ಯ, ನ್ಯಾಯಮೂರ್ತಿಯೊಬ್ಬರ ಆರೋಗ್ಯ ಸರಿ ಇಲ್ಲ. ಕಾಯಿರಿ, ನ್ಯಾಯಮೂರ್ತಿಯವರು ಚೇತರಿಸಿಕೊಂಡ ಕೂಡಲೇ ಇದು ವಿಚಾರಣೆಗೆ ಬರಬಹುದು' ಎಂದು ಸಿಜೆಐ ಹೇಳಿದರು.

ಈ ವಿಷಯ ಕುರಿತ ಅರ್ಜಿಗಳ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಇದೇ 13ರಂದು ಒಪ್ಪಿಕೊಂಡಿತ್ತು. ಅಂದು ವಕೀಲ ಪ್ರಶಾಂತ್ ಭೂಷಣ್ ಅವರು, 'ವಿದ್ಯಾರ್ಥಿನಿಯರು ಕಲಿಕೆ ಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದು, ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಗಮನಸೆಳೆದಿದ್ದರು.

ಹಿಜಾಬ್ ಧರಿಸಿ ತರಗತಿಗೆ ಬರುವುದನ್ನು ನಿಷೇಧಿಸಿದ್ದ ಕರ್ನಾಟಕ ಸರ್ಕಾರದ ಆದೇಶ ರದ್ದುಪಡಿಸಲು ನಿರಾಕರಿಸಿದ್ದ ಕರ್ನಾಟಕ ಹೈಕೋರ್ಟ್ ಈ ಕುರಿತ ಅರ್ಜಿಗಳನ್ನು ವಜಾ ಮಾಡಿತ್ತು. 'ಹಿಜಾಬ್ ಧರಿಸುವುದು ಧಾರ್ಮಿಕ ಆಚರಣೆಯ ಭಾಗವಲ್ಲ. ಹೀಗಾಗಿ, ಸಂವಿಧಾನದ ವಿಧಿ 25ರ ಅನ್ವಯ ಈ ಹಕ್ಕನ್ನು ರಕ್ಷಿಸಲಾಗದು' ಎಂದು ಹೈಕೋರ್ಟ್ ಆಗ ಹೇಳಿತ್ತು.

ತರಗತಿಯಲ್ಲಿ ಹಿಜಾಬ್ ಅನ್ನು ಧರಿಸಲು ಅವಕಾಶ ಕಲ್ಪಿಸಬೇಕು ಎಂದು ಕೋರಿ ಉಡುಪಿಯ ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿನಿಯರು ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಸಂಕ್ಷಿಪ್ತ ಸುದ್ದಿ

ದೇಶದಲ್ಲಿ 8ಕ್ಕೇರಿದ ಮಂಕಿಪಾಕ್ಸ್ ಪ್ರಕರಣ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ನೆಲೆಸಿರುವ ಆಫ್ರಿಕಾ ಮೂಲದ ವ್ಯಕ್ತಿಯಲ್ಲಿ ಮಂಕಿಪಾಕ್ಸ್ ವೈರಾಣು ಸೋಂಕು ಇರುವುದು ದೃಢಪಟ್ಟಿದೆ. ಈ ವ್ಯಕ್ತಿಗೂ ಯಾವುದೇ ವಿದೇಶ ಪ್ರಯಾಣದ ಹಿನ್ನೆಲೆ ಇರಲಿಲ್ಲ. ದೇಶದ ರಾಜಧಾನಿಯಲ್ಲಿ ಇದು ಮೂರನೇ ಪ್ರಕರಣ ಹಾಗೂ ದೇಶದಲ್ಲಿ ಈವರೆಗಿನ ಪ್ರಕರಣಗಳ ಸಂಖ್ಯೆ 8ಕ್ಕೇರಿದೆ.

35 ವರ್ಷದ ಸೋಂಕಿತ ವ್ಯಕ್ತಿಯನ್ನು ಮಂಗಳವಾರ ದೆಹಲಿ ಸರ್ಕಾರಿ ಎಲ್‌ಎನ್‌ಜೆಪಿ ಆಸ್ಪತ್ರೆಗೆ ದಾಖಲಿಸಲಾಗಿದೆ. ರಾಜಧಾನಿಯಲ್ಲಿ ಮೊದಲ ಪ್ರಕರಣವಾಗಿ ವರದಿಯಾಗಿದ್ದ ಮಂಕಿಪಾಕ್ಸ್ ಸೋಂಕಿತ ಸಂಪೂರ್ಣ ಗುಣಮುಖವಾಗಿದ್ದು, ಭಾನುವಾರ ರಾತ್ರಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ ಎಂದು ಅಧಿಕೃತ ಮೂಲಗಳು ಮಂಗಳವಾರ ತಿಳಿಸಿವೆ.

ತಿರುವನಂತಪುರ ವರದಿ: ಕೇರಳದಲ್ಲಿ ಮಂಗಳವಾರ ಮತ್ತೊಂದು ಮಂಕಿ ಪಾಕ್ಸ್ ಪ್ರಕರಣ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಐದನೇ ಪ್ರಕರಣ ವರದಿಯಾದಂತಾಗಿದೆ. 30 ವರ್ಷ ವಯಸ್ಸಿನ ಸೋಂಕಿತ ವ್ಯಕ್ತಿ ಮಲಪ್ಪುರಂನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರು ಜುಲೈ 27ರಂದು ಯುಎಇಯಿಂದ ಕೋಯಿಕ್ಕೋಡ್‌ಗೆ ವಿಮಾನದಲ್ಲಿ ಬಂದಿದ್ದರು ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಮಾಹಿತಿ ನೀಡಿದ್ದಾರೆ.

ಹೆಲಿಕಾಪ್ಟರ್ ದುರಂತ: ಪಾಕ್ ಸೇನೆಯ 6 ಮಂದಿ ದುರ್ಮರಣ

ಇಸ್ಲಾಮಾಬಾದ್ (ಪಿಟಿಐ): ಲೆಫ್ಟಿನೆಂಟ್ ಜನರಲ್ ಸರ್ಫರಾಜ್ ಅಲಿ ಸೇರಿದಂತೆ ಪಾಕಿಸ್ತಾನ ಸೇನೆಯ ಒಟ್ಟು ಆರು ಮಂದಿ ಹೆಲಿಕಾಪ್ಟರ್ ದುರಂತದಲ್ಲಿ ಮಂಗಳವಾರ ಮೃತಪಟ್ಟಿದ್ದಾರೆ.

ಪ್ರವಾಹ ಪರಿಹಾರ ಕಾರ್ಯಾಚರಣೆಗಾಗಿ ಬಲೂಚಿಸ್ತಾನ ಪ್ರಾಂತ್ಯದ ಲಸ್‌ಬೆಲಾ ಪ್ರದೇಶಕ್ಕೆ ತೆರಳುತ್ತಿದ್ದಾಗ ಹೆಲಿಕಾಪ್ಟರ್ ಪತನವಾಗಿದೆ. ಪ್ರತಿಕೂಲ ಹವಾಮಾನದಿಂದಾಗಿ ಅವಘಡ ಸಂಭವಿಸಿದೆ ಎಂದು ಪಾಕಿಸ್ತಾನ ಸೇನೆ ತಿಳಿಸಿದೆ.

'ಸೋಮವಾರ ಸಂಜೆ 5.10ಕ್ಕೆ ಉಥಲ್‌ನಿಂದ ಹೊರಟಿದ್ದ ಹೆಲಿಕಾಪ್ಟರ್ 6.05ರ ಸುಮಾರಿಗೆ ಕರಾಚಿ ತಲುಪಬೇಕಿತ್ತು. ಈ ನಡುವೆ ಹೆಲಿಕಾಪ್ಟರ್, ಏರ್ ಟ್ರಾಫಿಕ್ ಕಂಟ್ರೋಲರ್‌ನೊಂದಿಗೆ (ಎಟಿಸಿ) ಸಂಪರ್ಕ ಕಡಿದುಕೊಂಡಿತ್ತು' ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಇಮ್ರಾನ್ ಪಕ್ಷಕ್ಕೆ ಷೋಕಾಸ್ ನೋಟಿಸ್

ಇಸ್ಲಾಮಾಬಾದ್ (ಪಿಟಿಐ): ವಿದೇಶಗಳಿಂದ ಅಕ್ರಮವಾಗಿ ದೇಣಿಗೆ ಸ್ವೀಕರಿಸಿರುವ ಸಂಬಂಧ ಮಾಜಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷಕ್ಕೆ ಪಾಕಿಸ್ತಾನ ಚುನಾವಣಾ ಆಯೋಗ (ಇಸಿಪಿ) ಮಂಗಳವಾರ ಷೋಕಾಸ್ ನೋಟಿಸ್ ನೀಡಿದೆ.

ಪಿಟಿಐ ಪಕ್ಷ ಒಟ್ಟು 34 ರಾಷ್ಟ್ರಗಳಿಂದ ಅಕ್ರಮವಾಗಿ ದೇಣಿಗೆ ಸ್ವೀಕರಿಸಿದೆ ಎಂದು ಹೇಳಿದೆ. ಇಮ್ರಾನ್ ಅವರ ಪಕ್ಷವು 13 ಬ್ಯಾಂಕ್ ಖಾತೆಗಳನ್ನು ರಹಸ್ಯವಾಗಿ ಇಟ್ಟಿತ್ತು. ಆ ಮೂಲಕ ಪಾಕಿಸ್ತಾನದ ಸಂವಿಧಾನದ ನಿಯಮಾವಳಿಗಳನ್ನು ಗಾಳಿಗೆ ತೂರಿದೆಎಂದು ಹೇಳಿದೆ.

ಚೆಸ್: ಅಲೆಕ್ಸಿ ಶಿರೊವ್‌ಗೆ ಸೋಲುಣಿಸಿದ ಗುಕೇಶ್

ಗೆಲುವಿನ ಹಾದಿಗೆ ಭಾರತ



ಭಾರತ 'ಬಿ' ತಂಡದ (ಎಡದಿಂದ)– ಆರ್. ಪ್ರಗ್ನಾನಂದ, ಬಿ.ಅಧಿಬನ್, ಡಿ. ಗುಕೇಶ್ ಮತ್ತು ನಿಹಾಲ್ ಸರಿನ್– ಪಿಟಿಐ ಚಿತ್ರ

ಮಹಾಬಲಿಪುರಂ: ಭಾರತ 'ಎ' ತಂಡದವರು ಚೆಸ್ ಒಲಿಂಪಿಯಾಡ್‌ನಲ್ಲಿ ಗೆಲುವಿನ ಹಾದಿಗೆ ಮರಳಿದ್ದು, ಐದನೇ ಸುತ್ತಿನಲ್ಲಿ 2.5–1.5 ಪಾಯಿಂಟ್‌ಗಳಿಂದ ರೊಮೇನಿಯ ತಂಡವನ್ನು ಮಣಿಸಿದರು.

ಮೊದಲ ಮೂರು ಪಂದ್ಯ ಜಯಿಸಿದ್ದ ಭಾರತ, ನಾಲ್ಕನೇ ಪಂದ್ಯದಲ್ಲಿ ಫ್ರಾನ್ಸ್ ಜತೆ ಡ್ರಾಗೆ ತೃಪ್ತಿಪಟ್ಟುಕೊಂಡಿತ್ತು.

ಮಂಗಳವಾರ ನಡೆದ ಐದನೇ ಸುತ್ತಿನಲ್ಲಿ ಅರ್ಜುನ್ ಎರಿಗೈಸಿ ಅವರು ರೊಮೇನಿಯದ ಎಮಿಲಿಯನ್ ಪಾಲಿಗ್ರಸ್ ಅವರನ್ನು ಮಣಿಸಿ ಪೂರ್ಣ ಪಾಯಿಂಟ್ ಗಳಿಸಿದರು. ಪಿ.ಹರಿಕೃಷ್ಣ, ವಿದಿತ್ ಸಂತೋಷ್ ಗುಜರಾತಿ ಮತ್ತು ಎಸ್.ಎಲ್.ನಾರಾಯಣನ್ ತಮ್ಮ ಪಂದ್ಯಗಳನ್ನು ಡ್ರಾ ಮಾಡಿಕೊಂಡರು.

ಭಾರತ 'ಬಿ' ತಂಡದ ಗೆಲುವಿನ ಓಟ ಮುಂದುವರಿದಿದ್ದು, 2.5–1.5 ಪಾಯಿಂಟ್‌ಗಳಿಂದ ಸ್ಪೇನ್ ಎದುರು ಗೆದ್ದಿತು. ಆರ್. ಪ್ರಗ್ನಾನಂದ ಸೋಲು ಅನುಭವಿಸಿದರೂ ಡಿ.ಗುಕೇಶ್ ಮತ್ತು ಬಿ.ಅಧಿಬನ್ ಅವರು ಎದುರಾಳಿಗಳನ್ನು ಮಣಿಸಿದರು.

ಗುಕೇಶ್ ಅವರು ವಿಶ್ವ ಚಾಂಪಿಯನ್‌ಷಿಪ್ ಮಾಜಿ ಚಾಲೆಂಜರ್ ಅಲೆಕ್ಸಿ ಶಿರೊವ್ ಅವರಿಗೆ ಸೋಲುಣಿಸಿದರು. ಇತ್ತೀಚೆಗಷ್ಟೇ 2,700 ಇಎಲ್‌ಒ ಲೈವ್ ರೇಟಿಂಗ್ಸ್ ದಾಟಿರುವ ಭಾರತ ಆಟಗಾರ ಇಲ್ಲಿ ಅದ್ಭುತ ಆಟವಾಡಿ ಅಜೇಯ ಓಟ ಮುಂದುವರಿಸಿದರು. ಇದು ಅವರಿಗೆ ಟೂರ್ನಿಯಲ್ಲಿ ಸತತ ಐದನೇ ಜಯವಾಗಿದೆ.

ಈ ಗೆಲುವಿನ ಬಳಿಕ ಗುಕೇಶ್ ಲೈವ್ ರೇಟಿಂಗ್ಸ್‌ನಲ್ಲಿ ವಿದಿತ್ ಅವರನ್ನು ಹಿಂದಿಕ್ಕಿದರು. ಆ ಮೂಲಕ ವಿಶ್ವನಾಥನ್ ಆನಂದ್ ಮತ್ತು ಪೆಂಟಾಲ ಹರಿಕೃಷ್ಣ ಬಳಿಕ ಅತಿ ಹೆಚ್ಚು ರೇಟಿಂಗ್ಸ್ ಹೊಂದಿರುವ ಆಟಗಾರ ಎನಿಸಿಕೊಂಡಿದ್ದಾರೆ.

'ಶಿರೊವ್ ಅವರ ತಪ್ಪುನಡೆಯಿಂದ ನಾನು ಉತ್ತಮ ಸ್ಥಿತಿ ತಲುಪಿದೆ. ತರುವಾಯ ಅವರಿಗೆ ಸೋಲುಣಿಸಿದೆ. ಶಿರೊವ್ ಅವರಂತಹ ಆಟಗಾರನ ಎದುರು ಆಡುವುದೇ ಅದ್ಭುತ ಸಂಗತಿ. ಅವರನ್ನು ಸೋಲಿಸಿದ್ದು ಇನ್ನೂ ವಿಶೇಷ' ಎಂದು ಪಂದ್ಯದ ಬಳಿಕ ಗುಕೇಶ್ ನುಡಿದರು.

ಅಧಿಬನ್ ಅವರು ಗ್ರ್ಯಾಂಡ್‌ಮಾಸ್ಟರ್ ಎಡುರ್ಡೊ ಇಟ್ಟುರಿಜಗಾ ಅವರನ್ನು ಮಣಿಸಿದರು. ನಿಹಾಲ್ ಸರೀನ್ ಅವರು ಆ್ಯಂಟನ್ ಗಿಜಾರ್ ಅವರೊಂದಿಗೆ ಡ್ರಾ ಸಾಧಿಸಿದರು.

ಭಾರತ 'ಸಿ' ತಂಡ 2.5–1.5 ಪಾಯಿಂಟ್‌ಗಳಿಂದ ಚಿಲಿ ತಂಡವನ್ನು ಸೋಲಿಸಿತು.

ಮಹಿಳೆಯರ ವಿಭಾಗದಲ್ಲಿ 'ಎ' ತಂಡ 2.5–1.5 ಪಾಯಿಂಟ್‌ಗಳಿಂದ ಫ್ರಾನ್ಸ್ ಎದುರು ಗೆದ್ದಿತು. ತಾನಿಯಾ ಸಚ್‌ದೇವ್ ಗೆಲುವಿನ ಪಾಯಿಂಟ್ಸ್ ಗಳಿಸಿಕೊಟ್ಟರು.

'ಬಿ' ತಂಡ 1–3 ರಲ್ಲಿ ಜಾರ್ಜಿಯಾ ಕೈಯಲ್ಲಿ ಪರಾಭವಗೊಂಡರೆ, 'ಸಿ' ತಂಡ ಬ್ರೆಜಿಲ್ ಜತೆ 2–2ರಲ್ಲಿ ಡ್ರಾ ಮಾಡಿಕೊಂಡಿತು.

27ರಿಂದ ಏಷ್ಯಾ ಕಪ್ ಟಿ20 ಕ್ರಿಕೆಟ್

28ರಂದು ಭಾರತಕ್ಕೆ ಪಾಕಿಸ್ತಾನ ಎದುರಾಳಿ

ದುಬೈ (ಪಿಟಿಐ): ಇದೇ ತಿಂಗಳ ಕೊನೆಯ ವಾರದಲ್ಲಿ ಆರಂಭವಾಗಲಿರುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ತನ್ನ ಪ್ರಥಮ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಸೆಣಸಲಿದೆ.

ಗುಂಪು ಎ	ಭಾರತ, ಪಾಕಿಸ್ತಾನ ಹಾಗೂ ಅರ್ಹತಾ ಸುತ್ತಿನಿಂದ ಬಂದ ತಂಡ
ಗುಂಪು ಬಿ	ಶ್ರೀಲಂಕಾ, ಬಾಂಗ್ಲಾದೇಶ ಹಾಗೂ ಅಫ್ಗಾನಿಸ್ತಾನ

ಆ 27ರಂದು ಟೂರ್ನಿಯ ಮೊದಲ ಪಂದ್ಯದಲ್ಲಿ ಶ್ರೀಲಂಕಾ ಮತ್ತು ಅಫ್ಗಾನಿಸ್ತಾನ ಹಣಾಹಣಿ ನಡೆಸಲಿವೆ. 28ರಂದು ದುಬೈನಲ್ಲಿ ಭಾರತ ಹಾಗೂ ಪಾಕಿಸ್ತಾನ ಮುಖಾಮುಖಿಯಾಗಲಿವೆ.

ಎಲ್ಲ ಪಂದ್ಯಗಳೂ ದುಬೈ ಮತ್ತು ಶಾರ್ಜಾದಲ್ಲಿ ನಡೆಯಲಿವೆ. ಈ ಟೂರ್ನಿಯು ಶ್ರೀಲಂಕಾದಲ್ಲಿ ಆಯೋಜನೆಗೊಳ್ಳಬೇಕಿತ್ತು. ಆದರೆ, ದ್ವೀಪರಾಷ್ಟ್ರದಲ್ಲಿ ರಾಜಕೀಯ ಬಿಕ್ಕಟ್ಟು ತಲೆದೋರಿರುವ ಕಾರಣ ಶಾಂತಿ ಸುವ್ಯವಸ್ಥೆ ಹದಗೆಟ್ಟಿದೆ. ಆದ್ದರಿಂದ ಟೂರ್ನಿಯನ್ನು ಸ್ಥಳಾಂತರಿಸಲಾಗಿದೆ. ಒಟ್ಟು 13 ಪಂದ್ಯಗಳು ನಡೆಯಲಿವೆ. ಅದರಲ್ಲಿ 10 ದುಬೈನಲ್ಲಿ ಮತ್ತು ಉಳಿದವು ಶಾರ್ಜಾದಲ್ಲಿ ಆಯೋಜನೆಗೊಳ್ಳಲಿವೆ. ಎರಡು ಗುಂಪುಗಳಾಗಿ ತಂಡಗಳನ್ನು ವಿಂಗಡಿಸಲಾಗಿದೆ. ಭಾರತ ಮತ್ತು ಪಾಕ್ ಎ ಗುಂಪಿನಲ್ಲಿ ಆಡಲಿವೆ. ಉಭಯ ಗುಂಪುಗಳಲ್ಲಿ ಅಗ್ರ 2 ಸ್ಥಾನ ಪಡೆಯುವ ತಂಡಗಳು ಸೂಪರ್ ಫೋರ್ ಸುತ್ತಿನಲ್ಲಿ ಸೆಣಸಲಿವೆ.

ಕ್ರಿಕೆಟ್: ಏಷ್ಯಾ ಕಪ್ ವೇಳಾಪಟ್ಟಿ

ದಿನಾಂಕ	ತಂಡ	ಎದುರಾಳಿ	ಸ್ಥಳ
ಆ.27	ಶ್ರೀಲಂಕಾ	ಅಫ್ಗಾನಿಸ್ತಾನ	ದುಬೈ
ಆ.28	ಭಾರತ	ಪಾಕಿಸ್ತಾನ	ದುಬೈ
ಆ.30	ಬಾಂಗ್ಲಾದೇಶ	ಅಫ್ಗಾನಿಸ್ತಾನ	ಶಾರ್ಜಾ
ಅ.31	ಭಾರತ	ಕ್ವಾಲಿಫೈಯರ್	ದುಬೈ
ಸೆ.1	ಶ್ರೀಲಂಕಾ	ಬಾಂಗ್ಲಾದೇಶ	ದುಬೈ
ಸೆ.2	ಪಾಕಿಸ್ತಾನ	ಕ್ವಾಲಿಫೈಯರ್	ಶಾರ್ಜಾ

* ಸೆ.3ರಿಂದ 9ರವರೆಗೆ ದುಬೈನಲ್ಲಿ ಸೂಪರ್ ಫೋರ್ ಪಂದ್ಯಗಳು
* ಸೆ 11ರಂದು ಫೈನಲ್– ಸೂಪರ್ ಫೋರ್ ಸುತ್ತಿನ ಮೊದಲ ಹಾಗೂ ಎರಡನೇ ಸ್ಥಾನದ ತಂಡಗಳ ಮುಖಾಮುಖಿ

ಕ್ರಿಕೆಟ್: ವಿಂಡೀಸ್ ಜಯಭೇರಿ

ಭಾರತದ ಎದುರಿನ ಎರಡನೇ ಟ್ವೆಂಟಿ–20 ಪಂದ್ಯ



ಒಬೆದ್ ಮೆಕಾಯ್ ಮತ್ತು ನಿಕೋಲಸ್ ಪೂರನ್ ಸಂಭ್ರಮ– ಎಎಫ್‌ಪಿ ಚಿತ್ರ

ಸೇಂಟ್ ಕಿಟ್ಸ್ (ಪಿಟಿಐ): ಒಬೆದ್ ಮೆಕಾಯ್ ಬೌಲಿಂಗ್ ಮತ್ತು ಬ್ರೆಂಡನ್ ಕಿಂಗ್ ಅಮೋಘ ಅರ್ಧಶತಕದ ಬಲದಿಂದ ಆತಿಥೇಯ ವೆಸ್ಟ್ ಇಂಡೀಸ್ ತಂಡವು ಭಾರತ ಎದುರಿನ ಎರಡನೇ ಟ್ವೆಂಟಿ–20 ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಜಯಿಸಿತು.

ಸೋಮವಾರ ರಾತ್ರಿ ಮೂರು ಗಂಟೆ ವಿಳಂಬವಾಗಿ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ವೆಸ್ಟ್ ಇಂಡೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು ಒಬೆದ್ ಆರು ವಿಕೆಟ್‌ಗಳನ್ನು ಗಳಿಸಿದರು. ಇದರಿಂದಾಗಿ ಭಾರತ ತಂಡವು 19.4 ಓವರ್‌ಗಳಲ್ಲಿ 138 ರನ್‌ಗಳಿಗೆ ಎಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು. ಈ ಸಾಧಾರಣ ಗುರಿಯನ್ನು ಬೆನ್ನಟ್ಟಿದ ವೆಸ್ಟ್ ಇಂಡೀಸ್ ತಂಡವು ಇನಿಂಗ್ಸ್‌ನಲ್ಲಿ ನಾಲ್ಕು ಎಸೆತಗಳು ಬಾಕಿಯಿರುವಾಗಲೇ 5 ವಿಕೆಟ್‌ಗಳಿಗೆ 141 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಬ್ರೆಂಡನ್ ಕಿಂಗ್ (68; 52ಎ, 8X4, 6X2) ಅವರ ಬ್ಯಾಟಿಂಗ್‌ನಿಂದ ಜಯ ಸಾಧ್ಯವಾಯಿತು.

ಭಾರತದ ಬೌಲರ್‌ಗಳು ವಿಂಡೀಸ್ ಬಳಗಕ್ಕೆ ಕಠಿಣ ಸವಾಲೊಡ್ಡಿದರು. ಕೈಲ್ ಮೇಯರ್ಸ್, ಶಿಮ್ರಾನ್ ಹೆಟ್ಮೆಯರ್ ಮತ್ತು ರೊವ್ಮನ್ ಪೊವೆಲ್ ಒಂದಕಿ ಮಾತ್ರ ಗಳಿಸಿದರು. ನಾಯಕ ನಿಕೊಲಸ್ ಪೂರನ್ 14 ರನ್ ಮಾತ್ರ ಗಳಿಸಿ ಔಟಾದರು. ಇದರಿಂದಾಗಿ ಒಂದುಹಮತದಲ್ಲಿ ತಂಡವು ಆತಂಕ ಎದುರಿಸಿತ್ತು. ಕೊನೆಯಲ್ಲಿ ಡೆವೊನ್ ಥಾಮಸ್ (ಔಟಾಗದೆ 31; 19ಎ, 4X1, 6X2) ಅವರ ಬೀಸಾಟದಿಂದಾಗಿ ಆತಿಥೇಯರು ಜಯದ ಗಡಿ ತಲುಪಿತು.

ಸಂಕ್ಷಿಪ್ತ ಸ್ಕೋರು: ಭಾರತ: 19.4 ಓವರ್‌ಗಳಲ್ಲಿ 138, ವೆಸ್ಟ್ ಇಂಡೀಸ್: 19.2 ಓವರ್‌ಗಳಲ್ಲಿ 5ಕ್ಕೆ141 (ಬ್ರೆಂಡನ್ ಕಿಂಗ್ 68, ಡೆವೊನ್ ಥಾಮಸ್ 31,ಅರ್ಷದೀಪ್ ಸಿಂಗ್ 26ಕ್ಕೆ1, ರವೀಂದ್ರ ಜಡೇಜ 16ಕ್ಕೆ1, ಆರ್. ಅಶ್ವಿನ್ 32ಕ್ಕೆ1, ಹಾರ್ದಿಕ್ ಪಾಂಡ್ಯ 22ಕ್ಕೆ1, ಆವೇಶ್ ಖಾನ್ 31ಕ್ಕೆ1).

ಕೈಲ್ ಮೇಯರ್ಸ್ ಆಸರೆ

ಸೇಂಟ್ ಕಿಟ್ಸ್: ಕೈಲ್ ಮೇಯರ್ಸ್ (73) ಅವರ ಅರ್ಧಶತಕದ ನೆರವಿನಿಂದ ವೆಸ್ಟ್ ಇಂಡೀಸ್ ತಂಡ ಮೂರನೇ ಟಿ20 ಪಂದ್ಯದಲ್ಲಿ ಭಾರತದ ಗೆಲುವಿಗೆ 165 ರನ್‌ಗಳ ಗುರಿ ನೀಡಿದೆ.ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 164 ರನ್ ಗಳಿಸಿತು. 50 ಎಸೆತಗಳನ್ನು ಎದುರಿಸಿದ ಮೇಯರ್ಸ್ 8 ಬೌಂಡರಿ ಮತ್ತು 4 ಸಿಕ್ಸರ್ ಹೊಡೆದರು. ಬ್ರೆಂಡನ್ ಕಿಂಗ್ (20 ರನ್, 20 ಎ.) ಜತೆ ಮೊದಲ ವಿಕೆಟ್‌ಗೆ 57 ರನ್ ಹಾಗೂ, ನಾಯಕ ನಿಕೊಲಸ್ ಪೂರನ್ (22ರನ್, 23 ಎ.) ಎರಡನೇ ವಿಕೆಟ್‌ಗೆ 50 ರನ್ ಸೇರಿಸಿ ಅವರು ತಂಡಕ್ಕೆ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್: ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 164 (ಬ್ರೆಂಡನ್ ಕಿಂಗ್ 20, ಕೈಲ್ ಮೇಯರ್ಸ್ 73, ನಿಕೊಲಸ್ ಪೂರನ್ 22, ರೊವ್ಮನ್ ಪೊವೆಲ್ 23, ಭುವನೇಶ್ವರ್ ಕುಮಾರ್ 35ಕ್ಕೆ 2) ವಿವರ ಅಪೂರ್ಣ

ಏಷ್ಯನ್ ದಾಖಲೆ ಬರೆದ ಭಾರತ ರಿಲೇ ತಂಡ



ಪ್ರಿಯಾ ಮೋಹನ್

ಕ್ಯಾಲಿ, ಕೊಲಂಬಿಯಾ (ಪಿಟಿಐ): ಕರ್ನಾಟಕದ ಪ್ರಿಯಾ ಮೋಹನ್ ಅವರನ್ನೊಳಗೊಂಡ ಭಾರತ 4X400 ಮಿಟರ್ಸ್ ಮಿಶ್ರ ರಿಲೇ ತಂಡವು 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಏಷ್ಯನ್ ಜೂನಿಯರ್ ದಾಖಲೆ ಬರೆದಿದೆ. ಇದರೊಂದಿಗೆ ಚಾಂಪಿಯನ್‌ಷಿಪ್‌ನ ಫೈನಲ್‌ಗೆ ಲಗ್ಗೆಯಿಟ್ಟಿದೆ.

ಇಲ್ಲಿ ನಡೆಯುತ್ತಿರುವ ಕೂಟದ ಮೂರನೇ ಹೀಟ್‌ನಲ್ಲಿ ಸೋಮವಾರ ಪ್ರಿಯಾ, ಭರತ್ ಶ್ರೀಧರ್, ರೂಪಾಲ್ ಚೌಧರಿ ಮತ್ತು ಕಪಿಲ್ ಅವರಿದ್ದ ತಂಡವು 3 ನಿಮಿಷ 19.62 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಒಟ್ಟಾರೆ ಹೀಟ್ಸ್‌ನಲ್ಲಿ ಎರಡನೇ ಸ್ಥಾನ ಗಳಿಸಿತು.

ಅಮೆರಿಕ ತಂಡವು ಎರಡನೇ ಹೀಟ್‌ನಲ್ಲಿ ಕೂಟ ದಾಖಲೆಯ ಸಮಯದೊಂದಿಗೆ (3 ನಿ.18.65 ಸೆ.) ಅಗ್ರಸ್ಥಾನ ಗಳಿಸಿತು. ಫೈನಲ್ ಬುಧವಾರ ನಸುಕಿನ ಜಾವ 3.20ಕ್ಕೆ (ಭಾರತೀಯ ಕಾಲಮಾನ) ಆರಂಭವಾಗಲಿದೆ.

ನೈರೋಬಿಯಲ್ಲಿ ನಡೆದ ಕಳೆದ ಆವೃತ್ತಿಯ ಕೂಟದಲ್ಲಿ ಭಾರತ 4X400 ಮೀ. ರಿಲೇ ತಂಡವು ಕಂಚು ಗೆದ್ದಿತ್ತು.

ಆಶಾಕಿರಣ್ ಮಿಂಚು: 15 ವರ್ಷದ ಆಶಾಕಿರಣ್ ಬರ್ಲಾ ಅವರು ಮಹಿಳೆಯರ 800 ಮೀಟರ್ಸ್ ಓಟದಲ್ಲಿ ಸೆಮಿಫೈನಲ್ಸ್ ತಲುಪಿದರು. ಹೀಟ್‌ನಲ್ಲಿ ಅವರು 2 ನಿ. 9.01ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಆರನೇ ಸ್ಥಾನ ಗಳಿಸಿದರು. ಶಾಟ್‌ಪಟ್‌ನಲ್ಲಿ ಸನ್ಯಾಮ್ ಸಂಜಯ್ 18.36 ಮೀ. ಸಾಧನೆ ಮಾಡಿದರು. ಆದರೆ ಕೇವಲ 0.01ಮೀಟರ್ ಅಂತರದಲ್ಲಿ ಫೈನಲ್ ಅರ್ಹತೆ ಕಳೆದುಕೊಂಡರು.

ಅಮನ್ ಖೋಕರ್ 100 ಮೀ. ಓಟದ ಸೆಮಿಫೈನಲ್ ತಲುಪಲು ವಿಫಲರಾದರು. ಹೀಟ್‌ನಲ್ಲಿ 10.84 ಸೆ.ದಾಖಲಿಸಿದ ಅವರು ಒಟ್ಟಾರೆ 48ನೇ ಸ್ಥಾನ ಗಳಿಸಿದರು. 1,500 ಮೀ. ವಿಭಾಗದಲ್ಲಿ ಅರ್ಜುನ್ ವಾಸ್ಕಲೆ 3 ನಿ. 51.10 ಸೆಕೆಂಡುಗಳಲ್ಲಿ ಗುರಿ ತಲುಪಿ 26ನೇ ಸ್ಥಾನ ಗಳಿಸಿದರು.

12ರಿಂದ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಬೆಂಗಳೂರು: ಬಳ್ಳಾರಿ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು ಇದೇ 12ರಿಂದ 15ವರೆಗೆ ರಾಜ್ಯ ರ‍್ಯಾಂಕಿಂಗ್ ಟೂರ್ನಿಯನ್ನು ಆಯೋಜಿಸಲಿದೆ.

ತುಂಗಭದ್ರಾ ಪ್ರಾಜೆಕ್ಟ್ ರಿಕ್ರಿಯೇಷನ್ ಕ್ಲಬ್‌ನಲ್ಲಿ 11, 13, 15, 17 ಮತ್ತು 19 ವರ್ಷದೊಳಗಿನವರ ವಿಭಾಗದಲ್ಲಿ ಟೂರ್ನಿ ನಡೆಯಲಿದೆ. http://karnatakatt.com/hospete ವೆಬ್ ವಿಳಾಸದಲ್ಲಿ ಹೆಸರು ನೋಂದಾಯಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆ (ಕೆಟಿಟಿಎ) ಖಜಾಂಚಿ ಮಂಜುನಾಥ್ (ಮೊಬೈಲ್ ಸಂಖ್ಯೆ 91 98809 77827) ಅವರನ್ನು ಸಂಪರ್ಕಿಸಬೇಕು ಎಂದು ಕೆಟಿಟಿಎ ಕಾರ್ಯದರ್ಶಿ ಟಿ.ಜಿ.ಉಪಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟೆನಿಸ್: ಕ್ವಾರ್ಟರ್‌ಫೈನಲ್‌ಗೆ ಶ್ರೇಯಾಂತ್, ಸಾನ್ವಿ ಲಗ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎಂ. ಶ್ರೇಯಾಂತ್ ಅವರು 3ನೇ ಶ್ರೇಯಾಂಕದ ವೀರ್ ಜಿತೇನ್ ಮದಾಮ್ ಅವರನ್ನು ಮಣಿಸಿ ಕೆಎಸ್‌ಎಲ್‌ಟಿಎ 14 ವರ್ಷದೊಳಗಿನವರ ಟ್ರಾನ್ಸ್‌ಫಾರ್ಮ್ ಸೂಪರ್ ಸಿರೀಸ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕರ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಶ್ರೇಯಾಂತ್ 6-2, 5-7, 4-6ರಿಂದ ಗುಜರಾತ್‌ನ ವೀರ್ ಜಿತೇನ್ ಅವರನ್ನು ಪರಾಭವಗೊಳಿಸಿದರು.

ಬಾಲಕರ ವಿಭಾಗದ 16ರ ಘಟ್ಟದ ಇನ್ನುಳಿದ ಪಂದ್ಯಗಳಲ್ಲಿ ಕೌಶಿಕ್ ರಾಜೇಶ್ 6-2, 6-3ರಿಂದ ಧನುಷ್ ಬಿಲ್ಲಾಪುರ ಎದುರು, ಶ್ರೀಕರ್ ಧೋನಿ 6-1, 6-1ರಿಂದ ತಮಿಳುನಾಡಿನ ಅಥರ್ವ್ ರಾಜಪ್ರಕಾಶ್ ಎದುರು, ರೋಹಿತ್ ಗೋಪಿನಾಥ್ 4-6, 6-3, 6-2ರಿಂದ ಅನುರಾಗ್ ಕಳ್ಳಂಬೆಳ್ಳ ಎದುರು, ಬಾಲಗಣೇಶ್ ಪಟೇಲ್ 6-4, 6-1ರಿಂದ ಹೃತಿಕ್ ಕಟಕಂ ವಿರುದ್ಧ, ಎಂ.ದಿಗಂತ್ 6-4, 6-1ರಿಂದ ಸದಾಶಿವಂ ಕಣ್ಣನ್ ಎದುರು, ಕ್ರಿಸ್ಟೊಬಾಬು 6-0, 6-2ರಿಂದ ರಣವೀರ್ ಪನ್ನು ಎದುರು, ವೇದಾಂತ್ ಗುಂಡು 6-1, 6-4ರಿಂದ ಶರಣ್ ಸೋಮಾಸಿ ಜಯ ಸಾಧಿಸಿದರು.

ಬಾಲಕಿಯರ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಶೈವಿ ದಲಾಲ್ 6-1, 6-0ರಿಂದ ಲಾವಣ್ಯ ತಿವಾರಿ ಎದುರು, ಸಾನ್ವಿ ಮಿಶ್ರಾ 6-0, 6-1ರಿಂದ ಗದ್ದಂ ಗೀತಿಕಾ ವಿರುದ್ಧ, ಕಾಶ್ವಿ ಸುನೀಲ್ 7-5, 6-3ರಿಂದ ಪಾರ್ಥಸಾರಥಿ ಮುಂಡೆ ಎದುರು, ಸವಿತಾ ಭುವನೇಶ್ವರನ್ 6-0, 6-3ರಿಂದ ದೀಪ್ತಿ ವೆಂಕಟೇಶನ್ ವಿರುದ್ಧ, ಅನ್ವಿ ಪುನಗಂಟ 6-3, 6-2ರಿಂದ ಅರುಣಿಮಾ ನಾಯರ್ ಎದುರು, ಸ್ನಿಗ್ಧಾ ಕಾಂತ 6-0, 6-1ರಿಂದ ಕಸ್ತೂರಿ ವಿ.ಜಿ. ಎದುರು, ಶ್ರೀನೀತಿ ಚೌಧರಿ 6-2, 6-2ರಿಂದ ತಮನ್ನಾ ಸಹಾ ವಿರುದ್ಧ, ಮೇಘನಾ ಜಿ.ಡಿ. 6-3, 6-1ರಿಂದ ಆದ್ಯಾ ಚೌರಾಸಿಯಾ ಎದುರು ಗೆದ್ದರು.

ಉದ್ಯೋಗ ವಾಣಿ

ಲಾನ್ ಬಾಲ್ಸ್: ಭಾರತ ಮಹಿಳೆಯರ ಐತಿಹಾಸಿಕ ಸಾಧನೆ

ಚೊಚ್ಚಲ ಚಿನ್ನದ ಸಂಭ್ರಮ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಇಲ್ಲಿನ ವಿಕ್ಟೋರಿಯಾ ಪಾರ್ಕ್‌ನಲ್ಲಿರುವ ಲಾನ್ ಬಾಲ್ಸ್ ರಿಂಕ್ಸ್‌ನಲ್ಲಿ ಭಾರತ ಮಹಿಳಾ ಲಾನ್ ಬಾಲ್ಸ್ ತಂಡದವರು ಮಂಗಳವಾರ ಚಿನ್ನದ ಪದಕ ಗೆದ್ದು ಇತಿಹಾಸ ನಿರ್ಮಿಸಿದರು.

ಭಾರತದಲ್ಲಿ ಅಷ್ಟೊಂದು ಜನಪ್ರಿಯತೆ ಹೊಂದಿಲ್ಲದ ಲಾನ್ ಬಾಲ್ಸ್ ಕ್ರೀಡೆಯಲ್ಲಿ ಲಭಿಸಿದ ಮೊದಲ ಪದಕ ಇದಾಗಿದೆ. ಫೋರ್ಸ್ (ನಾಲ್ವರ ತಂಡ) ವಿಭಾಗದ ಫೈನಲ್‌ನಲ್ಲಿ ಭಾರತ 17–10 ರಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿತು. ವೇಟ್‌ಲಿಫ್ಟಿಂಗ್‌ಅನ್ನು ಹೊರತುಪಡಿಸಿ, ಈ ಕೂಟದಲ್ಲಿ ಭಾರತಕ್ಕೆ ದೊರೆತ ಮೊದಲ ಚಿನ್ನ ಇದಾಗಿದೆ.

ಲವ್ಲಿ ಚೌಬೆ, ಪಿಂಕಿ, ನಯನ್ಮಣಿ ಸೈಕಿಯಾ ಮತ್ತು ರೂಪಾ ರಾಣಿ ಟಿರ್ಕೆ ಅವರನ್ನೊಳಗೊಂಡ ಭಾರತ ಫೈನಲ್‌ನಲ್ಲಿ ಪ್ರಭಾವಿ ಪ್ರದರ್ಶನ ನೀಡಿತು. ಆರಂಭದಲ್ಲೇ ಗುರಿ ಹಿಡಿಯುವಲ್ಲಿ ನಿಖರತೆ ಸಾಧಿಸಿದ ತಂಡ, 8–2 ರಲ್ಲಿ ಮೇಲುಗೈ ಪಡೆಯಿತು.

ತಬೆಬೊ ಮುವಾಂಗೊ, ಬ್ರಿಜೆಟ್ ಕ್ಯಾಲಿಟ್ಜ್, ಎಸ್ಮೆ ಕ್ರುಗೆರ್ ಮತ್ತು ಯೋಹಾನ ಸ್ನೈಮನ್ ಅವರನ್ನು ಒಳಗೊಂಡ ಅನುಭವಿ ದಕ್ಷಿಣ ಆಫ್ರಿಕಾ ತಂಡ ಮರುಹೋರಾಟ ನಡೆಸಿ 8–8 ರಲ್ಲಿ ಸಮಬಲ ಮಾಡಿತು.

ಆದರೆ ಕೊನೆಯ ಮೂರು ಸುತ್ತುಗಳಲ್ಲಿ ಒತ್ತಡವನ್ನು ಸಮರ್ಥವಾಗಿ ಮೆಟ್ಟಿನಿಂತ ಭಾರತ ತಂಡದವರು, ಗೆಲುವು ಪಡೆದು ಚಾರಿತ್ರಿಕ ಸಾಧನೆ ಮಾಡಿದರು.

ಮಹಿಳೆಯರ ಫೋರ್ಸ್ ವಿಭಾಗದಲ್ಲಿ ಭಾರತ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಗೆದ್ದು, ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿತ್ತು. ಚೊಚ್ಚಲ ಫೈನಲ್‌ನಲ್ಲೇ ಯಶಸ್ಸು ದೊರೆತಿದೆ.



ಚಿನ್ನ ಗೆದ್ದ ಲವ್ಲಿ ಚೌಬೆ, ಪಿಂಕಿ, ನಯನ್ಮಣಿ ಸೈಕಿಯಾ ಮತ್ತು ರೂಪಾ ರಾಣಿ ಟಿರ್ಕೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಆಸ್ಟ್ರೇಲಿಯಾ	36	25	29	90
2	ಇಂಗ್ಲೆಂಡ್	27	28	17	72
3	ನ್ಯೂಜಿಲೆಂಡ್	13	7	5	25
4	ಕೆನಡಾ	8	13	19	40
5	ದಕ್ಷಿಣ ಆಫ್ರಿಕಾ	6	5	5	16
6	ಭಾರತ	5	4	3	12

ಲವ್ಲಿ ಅವರು ಜಾರ್ಖಂಡ್ ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೆಬಲ್ ಆಗಿದ್ದರೆ, ರಾಂಚಿಯವರಾದ ರೂಪಾ ಅವರು ಕ್ರೀಡಾ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದಾರೆ. ಪಿಂಕಿ ಅವರು ನವದೆಹಲಿಯ ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದು, ನಯನ್ಮಣಿ ಅವರು ಅಸ್ಸಾಂನ ಅರಣ್ಯ ಇಲಾಖೆಯ ಉದ್ಯೋಗಿ.

‘ಪದಕ ಗೆದ್ದರಷ್ಟೇ ಭಾರತದಲ್ಲಿ ಈ ಕ್ರೀಡೆಯ ಬಾಗಿಲು ತೆರೆಯಲಿದೆ ಎಂಬುದು ನಮಗೆ ಗೊತ್ತಿತ್ತು. ಮುಂದಿನ ದಿನಗಳಲ್ಲಿ ಲಾನ್ ಬಾಲ್ಸ್ ಭಾರತದಲ್ಲಿ ಜನಪ್ರಿಯತೆ ಪಡೆದುಕೊಳ್ಳಲಿದೆ. ಲಾನ್ ಬಾಲ್ಸ್ ಫೆಡರೇಷನ್ ಮತ್ತು ಐಒಎ ನೀಡಿದ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸುತ್ತೇವೆ’ ಎಂದು ಲವ್ಲಿ ಪ್ರತಿಕ್ರಿಯಿಸಿದರು.



ಭಾರತದ ನಯನ್ಮಣಿ ಸೈಕಿಯಾ ಆಟದ ರೀತಿ– ಪಿಟಿಐ ಚಿತ್ರ

ಟಿಟಿ: ಭಾರತ ತಂಡಕ್ಕೆ ಚಿನ್ನ

ಫೈನಲ್‌ನಲ್ಲಿ ಸಿಂಗಪುರ ಎದುರು 3–1 ಗೆಲುವು: ಸತ್ಯನ್, ಹರ್ಮೀತ್ ಮಿಂಚು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಪುರುಷರ ಟೇಬಲ್ ಟೆನಿಸ್ ತಂಡ ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನಕ್ಕೆ ಮುತ್ತಿಕ್ಕಿದೆ.

ಮಂಗಳವಾರ ನಡೆದ ಫೈನಲ್‌ನಲ್ಲಿ ಭಾರತ 3–1 ರಲ್ಲಿ ಸಿಂಗಪುರ ತಂಡವನ್ನು ಮಣಿಸಿತು. ನಾಲ್ಕು ವರ್ಷಗಳ ಹಿಂದೆ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕೂಟದಲ್ಲೂ ಭಾರತ ಚಿನ್ನ ಜಯಿಸಿತ್ತು.

ಡಬಲ್ಸ್ ವಿಭಾಗದ ಪಂದ್ಯದಲ್ಲಿ ಜಿ.ಸತ್ಯನ್ ಮತ್ತು ಹರ್ಮೀತ್ ದೇಸಾಯಿ ಅವರು 13–11, 11–7, 11–5 ರಲ್ಲಿ ಸಿಂಗಪುರದ ಯೊಂಗ್ ಐಸಾಕ್ ಕ್ವೆಕ್ – ಯೆವ್ ಎನ್ ಅವರನ್ನು ಮಣಿಸಿ ಭಾರತಕ್ಕೆ 1–0 ಮುನ್ನಡೆ ತಂದಿತ್ತರು.

ಆದರೆ ಮೊದಲ ಸಿಂಗಲ್ಸ್‌ನಲ್ಲಿ ಭಾರತದ ಅನುಭವಿ ಆಟಗಾರ ಅಚಂತ ಶರತ್ ಕಮಲ್ ಅವರು 7-11, 14-12, 3-11, 9-11 ರಲ್ಲಿ ಜೆ ಯು ಕ್ಲಾರೆನ್ಸ್ ಚೆವ್ ಎದುರು ಸೋತರು. ಇದರಿಂದ ಪಂದ್ಯ 1–1 ಸಮಬಲ ಆಯಿತು.

ಎರಡನೇ ಸಿಂಗಲ್ಸ್‌ನಲ್ಲಿ ಕಣಕ್ಕಿಳಿದ ಜಿ.ಸತ್ಯನ್ 12-10, 7-11, 11-7, 11-4 ರಲ್ಲಿ ಕೊಯೆನ್ ಪಾಂಗ್ ಅವರನ್ನು ಮಣಿಸಿ ಭಾರತಕ್ಕೆ 2–1 ಮುನ್ನಡೆ ಗಳಿಸಿಕೊಟ್ಟರು.

ಮೂರನೇ ಸಿಂಗಲ್ಸ್‌ನಲ್ಲಿ ಆಡಿದ ಹರ್ಮೀತ್ 11-8, 11-5, 11-6 ರಲ್ಲಿ ಜೆ ಯು ಕ್ಲಾರೆನ್ಸ್ ಚೆವ್ ಅವರನ್ನು ಮಣಿಸಿ ಭಾರತದ ಗೆಲುವಿಗೆ ಕಾರಣರಾದರು. ಶರತ್ ಕಮಲ್ ಅವರನ್ನು ಮಣಿಸಿದ್ದ ಕ್ಲಾರೆನ್ಸ್ ಅವರ ಆಟ ಹರ್ಮೀತ್ ಎದುರು ನಡೆಯಲಿಲ್ಲ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 121ನೇ ಸ್ಥಾನದಲ್ಲಿರುವ ಭಾರತದ ಆಟಗಾರ, 133ನೇ ರ‍್ಯಾಂಕ್‌ನ ಆಟಗಾರನ ಎದುರು ಆರಂಭದಿಂದಲೇ ಪ್ರಭುತ್ವ ಸಾಧಿಸಿದರು. ಹರ್ಮೀತ್ ಮೊದಲ ಗೇಮ್‌ನಲ್ಲಿ ಮಾತ್ರ ಅಲ್ಪ ಪ್ರತಿರೋಧ ಎದುರಿಸಿದರು. ಎರಡು ಮತ್ತು ಮೂರನೇ ಗೇಮ್‌ಗಳಲ್ಲಿ ಸ್ಪಷ್ಟ ಮೇಲುಗೈ ಪಡೆದರು.

‘ನನ್ನ ವೃತ್ತಿಜೀವನದಲ್ಲಿ ದೊರೆತ ಅತಿದೊಡ್ಡ ಗೆಲುವು ಇದು’ ಎಂದು ಪಂದ್ಯದ ಬಳಿಕ ಹರ್ಮೀತ್ ಪ್ರತಿಕ್ರಿಯಿಸಿದರು.

ಭಾರತ ಪುರುಷರ ತಂಡಕ್ಕೆ ದೊರೆತ ಮೂರನೇ ಚಿನ್ನ ಇದು. 2006ರ ಮೆಲ್ಬರ್ನ್ ಕೂಟದಲ್ಲಿ ಮೊದಲ ಬಾರಿ ಚಿನ್ನ ಗೆದ್ದುಕೊಂಡಿತ್ತು.

ಶರತ್ ಕಮಲ್ ಅವರಿಗೆ ಕಾಮನ್‌ವೆಲ್ತ್ ಕೂಟದಲ್ಲಿ ಒಟ್ಟಾರೆಯಾಗಿ ಲಭಿಸಿದ 10ನೇ ಪದಕ ಇದು. ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲೂ ಆಡಲಿರುವ ಅವರಿಗೆ ಇನ್ನಷ್ಟು ಪದಕ ಗೆಲ್ಲುವ ಅವಕಾಶವಿದೆ.

ಸೋಮವಾರ ರಾತ್ರಿ ನಡೆದಿದ್ದ ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತ 3–0ಯಿಂದ ನೈಜೀರಿಯಾ ತಂಡಕ್ಕೆ ಸೋಲುಣಿಸಿತ್ತು.



ಭಾರತದ ಶರತ್ ಕಮಲ್, ಹರ್ಮೀತ್ ದೇಸಾಯಿ, ಸನಿಲ್ ಶೆಟ್ಟಿ ಮತ್ತು ಜಿ.ಸತ್ಯನ್ ಪದಕದೊಂದಿಗೆ ಸಂಭ್ರಮ –ಪಿಟಿಐ ಚಿತ್ರ

ಮುಖ್ಯಾಂಶಗಳು

- ಅಚಂತ ಶರತ್ ಕಮಲ್‌ಗೆ 10ನೇ ಪದಕ
- ಕಳೆದ ಬಾರಿಯೂ ಚಿನ್ನ ಗೆದ್ದಿದ್ದ ಭಾರತ
- ಸೆಮಿಯಲ್ಲಿ ನೈಜೀರಿಯಾ ತಂಡವನ್ನು ಮಣಿಸಿತ್ತು

ಲಾಂಗ್‌ಜಂಪ್ ಫೈನಲ್‌ಗೆ ಮುರಳಿ, ಯಹ್ಯಾ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಉತ್ತಮ ಸಾಮರ್ಥ್ಯ ತೋರಿದ ಭಾರತದ ಮುರಳಿ ಶ್ರೀಶಂಕರ್ ಮತ್ತು ಮುಹಮ್ಮದ್ ಅನೀಸ್ ಯಹ್ಯಾ ಅವರು ಕ್ರೀಡಾಕೂಟದ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಫೈನಲ್‌ಗೆ ಲಗ್ಗೆಯಿಟ್ಟರು.

ರಾಷ್ಟ್ರೀಯ ದಾಖಲೆ ಹೊಂದಿರುವ 23 ವರ್ಷದ ಮುರಳಿ, ಮಂಗಳವಾರ ‘ಎ’ ಗುಂಪಿನ ಸ್ಪರ್ಧೆಯಲ್ಲಿ 8.05 ಮೀಟರ್ಸ್ ಸಾಧನೆ ಮಾಡಿದರು. ಇದರೊಂದಿಗೆ ಅರ್ಹತಾ ಸುತ್ತಿನಲ್ಲಿ ಮೊದಲಿಗರಾದರು. ಯಹ್ಯಾ ಅವರು ಬಿ ಗುಂಪಿನ ಅರ್ಹತಾ ಸ್ಪರ್ಧೆಯಲ್ಲಿ 7.68 ಮೀ. ಸಾಧನೆಯೊಂದಿಗೆ ಮೂರನೇ ಸ್ಥಾನ ಗಳಿಸಿದರು. 8.15 ಮೀಟರ್ಸ್ ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ.

ಲಾಂಗ್‌ಜಂಪ್ ಫೈನಲ್ಸ್ ಗುರುವಾರ ನಡೆಯಲಿವೆ.

ಮನ್‌ಪ್ರೀತ್ ಕೌರ್ ಫೈನಲ್‌ಗೆ: ಮಹಿಳಾ ಶಾಟ್‌ಪಟ್ ಪಟು ಮನ್‌ಪ್ರೀತ್ ಕೌರ್ ಕೂಡ ಫೈನಲ್‌ಗೆ ಲಗ್ಗೆಯಿಟ್ಟರು. ಅರ್ಹತಾ ಸುತ್ತಿನಲ್ಲಿ ಅವರು 16.78 ಮೀಟರ್ ದೂರ ಶಾಟ್‌ಪಟ್ ಎಸೆದರು.

ದ್ಯುತಿ ಹೊರಕ್ಕೆ: ಭಾರತದ ದ್ಯುತಿ ಚಾಂದ್ 100 ಮೀಟರ್ಸ್‌ನಲ್ಲಿ ಫೈನಲ್ ತಲುಪಲು ವಿಫಲರಾದರು. 11.55 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು ಐದನೇ ಹೀಟ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದರು.



ಮುರಳಿ ಶ್ರೀಶಂಕರ್ ಜಿಗಿತದ ಪರಿ– ಎಎಫ್‌ಪಿ ಚಿತ್ರ

ಸೌರವ್‌ಗೆ ಸೋಲು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಸೌರವ್ ಘೋಷಾಲ್ ಅವರು ಸ್ಕ್ವಾಷ್ ಸ್ಪರ್ಧೆಯ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸಿದರು.

ವೇಟ್‌ಲಿಫ್ಟಿಂಗ್: ಪುರುಷರ 96 ಕೆ.ಜಿ ವಿಭಾಗದಲ್ಲಿ 346 ಕೆ.ಜಿ ಸಾಧನೆ

ವಿಕಾಸ್‌ಗೆ ಬೆಳ್ಳಿ, ಹರ್ಜಿಂದರ್ ಕೌರ್‌ಗೆ ಕಂಚು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ವೇಟ್‌ಲಿಫ್ಟರ್‌ಗಳಾದ ವಿಕಾಸ್ ಠಾಕೂರ್ ಮತ್ತು ಹರ್ಜಿಂದರ್ ಕೌರ್ ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು.

ಮಂಗಳವಾರ ನಡೆದ ಪುರುಷರ 96 ಕೆ.ಜಿ ವಿಭಾಗದಲ್ಲಿ ವಿಕಾಸ್ ಒಟ್ಟು 346 ಕೆ.ಜಿ (155 + 191 ಕೆ.ಜಿ) ಭಾರ ಎತ್ತಿ ಎರಡನೇ ಸ್ಥಾನ ಪಡೆದರು. ಕಾಮನ್‌ವೆಲ್ತ್ ಕೂಟದಲ್ಲಿ ಅವರು ಗೆದ್ದ ಮೂರನೇ ಪದಕ ಇದು. 2014ರ ಗ್ಲಾಸ್ಗೊ ಕೂಟದಲ್ಲಿ ಬೆಳ್ಳಿ ಗೆದ್ದಿದ್ದ ಅವರು ಗೋಲ್ಡ್‌ಕೋಸ್ಟ್‌ನಲ್ಲಿ ಕಂಚು ಪಡೆದಿದ್ದರು. ಸಮೋವ ದೇಶದ ಡಾನ್ ಒಪೆಲೊಗ್ (381 ಕೆ.ಜಿ) ಚಿನ್ನ ತಮ್ಮದಾಗಿಸಿಕೊಂಡರು.

ಹರ್ಜಿಂದರ್ ಅವರು ಮಹಿಳೆಯರ 71 ಕೆ.ಜಿ. ವಿಭಾಗದಲ್ಲಿ ಕಂಚು ಗೆದ್ದರು. ಸೋಮವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಅದೃಷ್ಟವೂ ಕೌರ್ ಜತೆಗಿತ್ತು. ಇಲ್ಲಿ ಚಿನ್ನ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿದ್ದ ನೈಜೀರಿಯದ ಜೋಯ್ ಇಜೆ ಅವರು ಕ್ಲೀನ್– ಜರ್ಕ್‌ನಲ್ಲಿ ಮೂರು ಪ್ರಯತ್ನಗಳಲ್ಲಿ ವಿಫಲವಾದ ಕಾರಣ ಹರ್ಜಿಂದರ್ ಅಗ್ರ ಮೂವರಲ್ಲಿ ಕಾಣಿಸಿಕೊಂಡರು.

ಪಂಜಾಬ್‌ನ ಪಟಿಯಾಲದ ಲಿಫ್ಟರ್ ಒಟ್ಟು 212 ಕೆ.ಜಿ (93 + 119) ಭಾರ ಎತ್ತುವಲ್ಲಿ ಯಶಸ್ವಿಯಾದರು. 229 ಕೆ.ಜಿ. ಎತ್ತಿದ ಇಂಗ್ಲೆಂಡ್‌ನ ಸಾರಾ ಡೇವಿಸ್ ಚಿನ್ನ ಗೆದ್ದರೆ, ಕೆನಡಾದ ಅಲೆಕ್ಸಿಸ್ ಆ್ಯಶ್‌ವರ್ತ್ (214 ಕೆ.ಜಿ) ಕಂಚು ಗಳಿಸಿದರು. ಸಾರಾ ಅವರು ಕೂಟ ದಾಖಲೆಯನ್ನೂ ಮಾಡಿದರು.

ಸ್ನ್ಯಾಚ್‌ನಲ್ಲಿ 90 ಕೆ.ಜಿ ಯೊಂದಿಗೆ ಸ್ಪರ್ಧೆ ಆರಂಭಿಸಿದ ಹರ್ಜಿಂದರ್, ಮೊದಲ ಪ್ರಯತ್ನದಲ್ಲಿ ವಿಫಲರಾದರು. ಒತ್ತಡಕ್ಕೆ ಒಳಗಾದರೂ ಅವರು ಎರಡನೇ ಪ್ರಯತ್ನದಲ್ಲಿ ಯಶ ಕಂಡರು. 3ನೇ ಪ್ರಯತ್ನದಲ್ಲಿ 93 ಕೆ.ಜಿ ಎತ್ತಿದರು.


ಸ್ನ್ಯಾಚ್ ವಿಭಾಗದ ಬಳಿಕ ಹರ್ಜಿಂದರ್ ಮತ್ತು ಆಸ್ಟ್ರೇಲಿಯಾದ ಕಿಯಾನ ಎಲಿಯಟ್ ನಡುವೆ ಮೂರನೇ ಸ್ಥಾನಕ್ಕಾಗಿ ಪೈಪೋಟಿಯಿತ್ತು.

ಕ್ಲೀನ್–ಜರ್ಕ್‌ನಲ್ಲಿ ಭಾರತದ ಲಿಫ್ಟರ್ ಮೊದಲ ಪ್ರಯತ್ನದಲ್ಲಿ 113 ಕೆ.ಜಿ. ಎತ್ತಿದರು. ಎರಡನೇ ಪ್ರಯತ್ನದಲ್ಲಿ 116 ಕೆ.ಜಿ ಹಾಗೂ ಕೊನೆಯ ಅವಕಾಶದಲ್ಲಿ 119 ಕೆ.ಜಿ. ಭಾರ ಎತ್ತುವಲ್ಲಿ ಯಶಸ್ವಿಯಾಗಿ ಕಂಚಿನ ಪದಕ ಕೊರಳಿಗೇರಿಸಿಕೊಂಡರು.

ಪೂನಂ ಯಾದವ್‌ಗೆ ಕೊನೆಯ ಸ್ಥಾನ: ಮಹಿಳೆಯರ 76 ಕೆ.ಜಿ. ವಿಭಾಗದಲ್ಲಿ ಕಣದಲ್ಲಿದ್ದ ಭಾರತದ ಪೂನಂ ಯಾದವ್ ಕೊನೆಯ ಸ್ಥಾನ ಪಡೆದು ನಿರಾಸೆ ಅನುಭವಿಸಿದರು.

ಸ್ನ್ಯಾಚ್‌ನಲ್ಲಿ 98 ಕೆ.ಜಿ. ಭಾರ ಎತ್ತಿದ ಅವರು ಕ್ಲೀನ್–ಜರ್ಕ್‌ನಲ್ಲಿ ಮೂರೂ ಪ್ರಯತ್ನಗಳಲ್ಲಿ ವಿಫಲರಾದ ಕಾರಣ ಪದಕದ ಅವಕಾಶ ಕಳೆದುಕೊಂಡರು.

ಒಟ್ಟು 228 ಕೆ.ಜಿ ಸಾಧನೆಯೊಂದಿಗೆ (100 + 128) ಲೇಲರ್ ಚಿನ್ನ ಗೆದ್ದರು. ನೈಜೀರಿಯದ ತಯವೊ ಲಿಯಡಿ (96 + 120) ಬೆಳ್ಳಿ ಹಾಗೂ ಮ್ಯಾಕ್ಸಿಮಿನ ಯುಯೆಪ ಕಂಚು ಪಡೆದರು.



ವಿಕಾಸ್ ಠಾಕೂರ್– ಪಿಟಿಐ ಚಿತ್ರ

‘ಪೂನಂ ಪೂರ್ಣ ಫಿಟ್ ಇರಲಿಲ್ಲ’

ಮಹಿಳೆಯರ 76 ಕೆ.ಜಿ. ವಿಭಾಗದಲ್ಲಿ ಕಳಪೆ ಪ್ರದರ್ಶನ ನೀಡಿರುವ ಪೂನಂ ಯಾದವ್ ವಿರುದ್ಧ ತಿರುಗಿ ಬಿದ್ದಿರುವ ಭಾರತ ವೇಟ್‌ಲಿಫ್ಟಿಂಗ್ ಫೆಡರೇಷನ್ ಅಧ್ಯಕ್ಷ ಸಹದೇವ್ ಯಾದವ್, ‘ಪೂರ್ಣ ಫಿಟ್‌ನೆಸ್ ಇಲ್ಲದೆಯೇ ಅವರು ಸ್ಪರ್ಧಿಸಿದ್ದಾರೆ’ ಎಂದು ದೂರಿದ್ದಾರೆ.

‘ವೇಟ್‌ಲಿಫ್ಟಿಂಗ್‌ನಲ್ಲಿ ಒಂದು ಪದಕ ಕೈಯಿಂದ ಜಾರಿಹೋಯಿತು. ಪೂರ್ಣ ಫಿಟ್ ಆಗಿಲ್ಲ ಎಂಬ ಕಾರಣದಿಂದಲೇ ನಾವು ಆಕೆಯನ್ನು ಆರಂಭದಲ್ಲಿ ತಂಡಕ್ಕೆ ಸೇರಿಸಿರಲಿಲ್ಲ. ಆದರೆ ವೈದ್ಯರಿಂದ ಫಿಟ್‌ನೆಸ್ ಸರ್ಟಿಫಿಕೇಟ್ ತಂದಿದ್ದ ಅವರು, ಪೂರ್ಣ ಫಿಟ್ ಆಗಿರುವುದಾಗಿ ಹೇಳಿದ್ದರು. ಆ ಬಳಿಕ ತಂಡಕ್ಕೆ ಸೇರಿಸಿಕೊಳ್ಳಲಾಯಿತು‘ ಎಂದಿದ್ದಾರೆ.

‘ಸ್ಪರ್ಧೆಯ ವೇಳೆ ಆಕೆಗೆ ಮಂಡಿಯನ್ನು ಸರಿಯಾಗಿ ಮಡಚಲೂ ಆಗುತ್ತಿರಲಿಲ್ಲ. ಶೇ 100 ರಷ್ಟು ಸಾಮರ್ಥ್ಯ ತೋರಿಲ್ಲ’ ಎಂದು ಟೀಕಿಸಿದರು.

ಆದರೆ ಈ ಆರೋಪವನ್ನು ಅಲ್ಲಗಳೆದಿರುವ ಪೂನಂ, ‘ನಾನು ಪೂರ್ಣ ಫಿಟ್ ಆಗಿದ್ದುಕೊಂಡೇ ಸ್ಪರ್ಧಿಸಿದ್ದೇನೆ’ ಎಂದಿದ್ದಾರೆ.

ಈಜು: 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಐದನೇ ಸ್ಥಾನ

ಶ್ರೀಹರಿ ಕೈತಪ್ಪಿದ ಪದಕ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಶ್ರೀಹರಿ ನಟರಾಜ್ ಅವರು ಪುರುಷರ 50 ಮೀ. ಬ್ಯಾಕ್‌ಸ್ಟ್ರೋಕ್ ಈಜು ಸ್ಪರ್ಧೆಯಲ್ಲಿ ಪದಕ ಗೆಲ್ಲುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡು, ಐದನೇ ಸ್ಥಾನ ಪಡೆದುಕೊಂಡರು.

ಸೋಮವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಶ್ರೀಹರಿ 25.23 ಸೆ.ಗಳಲ್ಲಿ ಗುರಿ ತಲುಪಿದರು. ನ್ಯೂಜಿಲೆಂಡ್‌ನ ಆ್ಯಂಡ್ರ್ಯೂ ಜೆಫ್‌ಕೋಟ್ 24.65 ಸೆ.ಗಳಲ್ಲಿ ಚಿನ್ನ ಗೆದ್ದರೆ, ದಕ್ಷಿಣ ಆಫ್ರಿಕಾದ ಪೀಟರ್ ಕೊಯೆಟ್ಜ್ (24.77 ಸೆ.) ಬೆಳ್ಳಿ ಹಾಗೂ ಕೆನಡದ ಜೇವಿಯರ್ ಅಸೆವೆಡೊ (24.97 ಸೆ.) ಕಂಚು ಪಡೆದರು.

ಶ್ರೀಹರಿ ಅವರು ಅಸೆವೆಡೊ ಅವರಿಗಿಂತ 0.27 ಸೆ.ಗಳಷ್ಟು ತಡವಾಗಿ ಗುರಿ ತಲುಪಿ, ಅಲ್ಪ ಅಂತರದಲ್ಲಿ ಪದಕವನ್ನು ತಪ್ಪಿಸಿಕೊಂಡರು. ಕಾಮನ್‌ವೆಲ್ತ್ ಕೂಟದ ಈಜು ಸ್ಪರ್ಧೆಯ ಯಾವುದೇ ವಿಭಾಗದಲ್ಲಿ ಭಾರತದ ಈಜುಪಟು ಐದನೇ ಸ್ಥಾನ ಪಡೆದದ್ದು ಇದೇ ಮೊದಲು.

200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಶ್ರೇಷ್ಠ ಸಮಯ: ಬೆಂಗಳೂರಿನ ಈಜುಪಟು 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ತಮ್ಮ ವೈಯಕ್ತಿಕ ಶ್ರೇಷ್ಠ ಸಮಯ ಕಂಡುಕೊಂಡರೂ ಫೈನಲ್ ಪ್ರವೇಶಿಸಲು ವಿಫಲರಾದರು. ಮಂಗಳವಾರ ನಡೆದ ಹೀಟ್ಸ್‌ನಲ್ಲಿ 2 ನಿ. 0.84 ಸೆ.ಗಳಲ್ಲಿ ಗುರಿತಲುಪಿ 9ನೇ ಸ್ಥಾನ ಗಳಿಸಿದರು. ಹೀಟ್ಸ್‌ನಲ್ಲಿ ಮೊದಲ ಎಂಟು ಸ್ಥಾನ ಪಡೆದ ಸ್ಪರ್ಧಿಗಳು ಫೈನಲ್ ಪ್ರವೇಶಿಸಿದ್ದಾರೆ. ಅವರಲ್ಲಿ ಒಬ್ಬರು ಹಿಂದೆ ಸರಿದರೆ ಶ್ರೀಹರಿಗೆ, ಫೈನಲ್‌ನಲ್ಲಿ ಸ್ಪರ್ಧಿಸುವ ಅವಕಾಶ ದೊರೆಯಲಿದೆ.

ಅವರ ಈ ಹಿಂದಿನ ಶ್ರೇಷ್ಠ ಸಮಯ 2 ನಿ. 01.70 ಸೆ. ಆಗಿತ್ತು. 2019ರ ಫಿನಾ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಈ ಸಮಯ ದಾಖಲಿಸಿದ್ದರು.

ಸಜನ್ ಸವಾಲು ಅಂತ್ಯ: ಕಾಮನ್‌ವೆಲ್ತ್ ಕೂಟದಲ್ಲಿ ಭಾರತದ ಇನ್ನೊಬ್ಬ ಈಜುಪಟು ಸಜನ್ ಪ್ರಕಾಶ್ ಅವರ ಸವಾಲು ಕೊನೆಗೊಂಡಿದೆ.

100 ಮೀ. ಬಟರ್‌ಫ್ಲೈ ಸೆಮಿಫೈನಲ್‌ನಲ್ಲಿ ಅವರು 54.24 ಸೆ.ಗಳಲ್ಲಿ ಗುರಿ ತಲುಪಿ 16ನೇ ಸ್ಥಾನ ಪಡೆದುಕೊಂಡು ಫೈನಲ್ ಪ್ರವೇಶಿಸಲು ವಿಫಲರಾದರು.

ಇದಕ್ಕೂ ಮುನ್ನ ಸಜನ್, ಹೀಟ್ಸ್‌ನಲ್ಲಿ 19ನೇ ಸ್ಥಾನ ಪಡೆದುಕೊಂಡಿದ್ದರು. ಆದರೆ ಸೆಮಿಫೈನಲ್ ಪ್ರವೇಶಿಸಿದ್ದ ಮೂವರು ಸ್ಪರ್ಧಿಗಳು ಹಿಂದೆ ಸರಿದ ಕಾರಣ ಸಜನ್‌ಗೆ ಸೆಮಿಯಲ್ಲಿ ಕಣಕ್ಕಿಳಿಯಲು ಅವಕಾಶ ಲಭಿಸಿತ್ತು.

ಪ್ಯಾರಾ ಈಜು ಸ್ಪರ್ಧೆಯ ಪುರುಷರ 50 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಸುಯಾಶ್ ನಾರಾಯಣ್ ಯಾದವ್ (31.30 ಸೆ.) ಮತ್ತು ನಿರಂಜನ್ ಮುಕುಂದನ್ (32.55 ಸೆ.) ಕ್ರಮವಾಗಿ ಐದು ಹಾಗೂ ಏಳನೇ ಸ್ಥಾನ ಗಳಿಸಿದರು.



ಶ್ರೀಹರಿ ನಟರಾಜ್ –ಪಿಟಿಐ ಚಿತ್ರ

ಡೋಪಿಂಗ್: ಧನಲಕ್ಷ್ಮೀಗೆ ಮೂರು ವರ್ಷ ನಿಷೇಧ

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವಿಸಿ ಸಿಕ್ಕಿಬಿದ್ದಿರುವ ಭಾರತದ ವೇಗದ ಓಟಗಾರ್ತಿ ಎಸ್. ಧನಲಕ್ಷ್ಮೀಗೆ ಮೂರು ವರ್ಷಗಳ ನಿಷೇಧ ಶಿಕ್ಷೆ ವಿಧಿಸಲಾಗಿದೆ.

ಅವರು ಟರ್ಕಿಯ ಅಂತಾಲ್ಯದಲ್ಲಿ ವಿಶೇಷ ತರಬೇತಿ ಶಿಬಿರದಲ್ಲಿ ಭಾಗಿಯಾಗಿದ್ದ ಧನಲಕ್ಷ್ಮೀ ಅವರಿಂದ ಮೇ 2ರಂದು ವಾಡಾ ಘಟಕವು ಮಾದರಿ ಸಂಗ್ರಹಿಸಿತ್ತು. ಕೂಲಂಕಷ ಪರೀಕ್ಷೆಯಲ್ಲಿ ಅವರು ನಿಷೇಧಿತ ಮೆಟಾಡಿನೋನ್ ಮದ್ದು ಸೇವಿಸಿರುವುದು ಖಚಿತವಾಗಿತ್ತು. ಕಾಮನ್‌ವೆಲ್ತ್ ಕೂಟದಲ್ಲಿ ಭಾಗವಹಿಸುವ ತಂಡದಲ್ಲಿ ಸ್ಥಾನ ಪಡೆದಿದ್ದ ಅವರನ್ನು ಹೋದ ತಿಂಗಳು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿತ್ತು.

ತಮ್ಮ ಮೇಲಿನ ಆರೋಪವನ್ನು ಸಮ್ಮತಿಸಿರುವ ಧನಲಕ್ಷ್ಮೀ ನಿಷೇಧ ಶಿಕ್ಷೆಯನ್ನೂ ಒಪ್ಪಿಕೊಂಡಿದ್ದಾರೆ.

ಸ್ವಿಟ್ಜರ್‌ಲೆಂಡ್‌ನಲ್ಲಿರುವ ವಿಶ್ವ ಉದ್ದೀಪನ ಮದ್ದು ತಡೆ (ವಾಡಾ) ಪ್ರಯೋಗಾಲಯದಲ್ಲಿ ಅವರ ಮಾದರಿಯನ್ನು ಪರೀಕ್ಷೆ ಮಾಡಲಾಗಿತ್ತು.